ಹೆಜ್ಜೆ ಮತ್ತು ಗಾಂಧಿಬಂದ ಕಾದಂಬರಿಗಳ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್.ಪ್ರಬಂಧ

ಸಂಶೋಧಕ

ಜಗದೀಶ್ ಕೆರೆನಳ್ಳಿ

ಮಾರ್ಗದರ್ಶಕರು

ಡಾ. ಎಸ್. ಅಮರೇಶ

ಭಾಷಾನಿಕಾಯ

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

ಏಪ್ರಿಲ್ ೨೦೦೨

ಸಂಪೂರ್ಣ. ಸಂ.ಶಿ. ಅಗಬ.

ಹೆಜ್ಜೆ ಮತ್ತು ಗಾಂಧಿಬಂದ ಕಾದಂಬರಿಗಳ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್.ಪ್ರಬಂಧ

ಸಂಶೋಧಕ

ಜಗದೀಶ್ ಕೆರೆನಳ್ಳಿ

ಮಾರ್ಗದರ್ಶಕರು

ಡಾ. ಎನ್. ಅಮರೇಶ

ಭಾಷಾನಿಕಾಯ

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

ಏಪ್ರಿಲ್ ೨೦೦೨

ಮಾರ್ಗದರ್ಶಕರ ಪ್ರಮಾಣಪತ್ರ

ಶ್ರೀ ಜಗದೀಶ್ ಕೆರೆನಳ್ಳಿ ಅವರು ಹೆಜ್ಜೆ ಮತ್ತು ಗಾಂಧಿ ಬಂದ ಕಾದಂಬರಿಗಳ ಅಧ್ಯಯನ ಎಂಬ ಶೀರ್ಷಿಕೆಯ ಈ ಸಂಶೋಧನ ಪ್ರಬಂಧವನ್ನು ನನ್ನ ಜೊತೆಗೆ ಸಮಾಲೋಚಿಸಿ ಸಿದ್ಧಪಡಿಸಿದ್ದಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇದರ ಯಾವುದೇ ಭಾಗವನ್ನು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಲಿ ಬಳಸಿಕೊಂಡಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಡಾ. ಎನ್. ಅಮರೇಶ
ಅಧ್ಯಾಪಕರು ಮತ್ತು ಮಾರ್ಗದರ್ಶಕರು
ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : ೧೭-೫-೨೦೦೯
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

ಹೆಜ್ಜೆ ಮತ್ತು ಗಾಂಧಿ ಬಂದ ಕಾದಂಬರಿಗಳ ಅಧ್ಯಯನ ಎಂಬ ಶೀರ್ಷಿಕೆಯ ಈ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಡಾ. ಎನ್. ಅಮರೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರೆ ಯಾವುದೇ ಉದ್ದೇಶಗಳಿಗಾಗಲಿ ಬಳಸಿಕೊಂಡಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಜಗದೀಶ್ ಕೆರೆನಳ್ಳಿ
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : ೧೩-೫-೦೭

ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್.ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ ಹಾಗೂ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ಕೆ.ವಿ.ನಾರಾಯಣ ಅವರಿಗೆ,

ಅಧ್ಯಯನಾಂಗದ ನಿರ್ದೇಶಕರಾದ ಡಾ. ಹಿ.ಚಿ. ಬೋರಲಿಂಗಯ್ಯ ಹಾಗೂ ಪ್ರೊ.ಮಲ್ಲೇಪುರ ಜಿ. ವೆಂಕಟೇಶ್ ಅವರಿಗೆ,

ಅಧ್ಯಯನದ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ಕಾಳಜಿವಹಿಸಿ ಮಾರ್ಗದರ್ಶನ ನೀಡಿದ ಡಾ.ಎನ್. ಅಮರೇಶ ಅವರಿಗೆ,

ಅಧ್ಯಯನದ ಅವಧಿಯಲ್ಲಿ ಪೂರಕ ಅಂಶಗಳನ್ನು ನೀಡಿ, ಬರವಣಿಗೆಯನ್ನು ಗಮನಿಸಿ ಪ್ರೋತ್ಸಾಹಿಸಿದ, ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗದ ಮುಖ್ಯಸ್ಥರಾದ ಡಾ.ರಹಮತ್ ತರೀಕೆರೆ ಅವರಿಗೆ,

ಅಧ್ಯಯನ ನಡೆಸಿದ ಸಂದರ್ಭದಲ್ಲಿ ಚರ್ಚೆ, ಸಂವಾದಕ್ಕೆ ನೆರವು ನೀಡಿ ಪ್ರೋತ್ಸಾಹಿಸಿದ ಡಾ.ವೆಂಕಟೇಶ್ ಇಂದ್ವಾಡಿ, ಡಾ.ಬಿ.ಎಂ.ಪುಟ್ಟಯ್ಯ, ಡಾ.ಶಿವಾನಂದ ವಿರಕ್ತಮಠ ಅವರಿಗೆ,

ಅಧ್ಯಯನಕ್ಕೆ ಸಲಹೆ ಸೂಚನೆಗಳನ್ನಿತ್ತ ಶ್ರೀ ಮೊಗಳ್ಳಿ ಗಣೇಶ್, ಡಾ.ಕೆ.ರವೀಂದ್ರನಾಥ್ ಅವರಿಗೆ,

ಅಧ್ಯಯನದ ಕಾಲಕ್ಕೆ ಚರ್ಚೆಗೆ ಸಹಕರಿಸಿದ ಮಿತ್ರರಾದ ಜಾಜಿ ದೇವೇಂದ್ರಪ್ಪ, ಸಣ್ಣಪಾಪಯ್ಯ, ಕವಿತಾರಾಣಿ, ಶ್ರೀಮತಿ ಸುಜಾತ ಅಕ್ಕಿ, ಭಾರತಿ, ಕೊಟ್ರೇಶ್ ಎಚ್., ಹುಚ್ಚಸಾಬ್, ರಮೇಶ್ ಹಾಗೂ ಉಳಿದ ಗೆಳೆಯರುಗಳಿಗೆ,

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೆ ಹಾಗೂ ಸಿಬ್ಬಂದಿಗಳಿಗೆ,

ನನ್ನ ಏಳ್ಗೆಗೆ ಏಣಿ ಹಾಕಿ ಪ್ರೋತ್ಸಾಹಿಸುವ ಊರಿನ ಮಿತ್ರರಾದ ವೀರಭದ್ರಪ್ಪ ಕೆ., ನಿಂಗಪ್ಪ, ಮುಗ್ಗಿ, ಪಂಪಣ್ಣ ಜಿ., ಕೊಟ್ರಪ್ಪ, ಚಂದ್ರಶೇಖರ್ ಮೇಟಿ, ಷಣ್ಮುಖ (ಪುಟ್ಟ), ಮಲ್ಲಿಕಾರ್ಜುನ ಮೂಲಿಮನಿ, ನಿರಂಜನ್ ಕುಮಾರ್ ಜೀರನಹಳ್ಳಿ, ಹಡಪದ ತಿಪ್ಪೇಸ್ವಾಮಿ, ಮಲ್ಲಿಕಾರ್ಜುನ ಎಚ್.ಜಿ., ವಿಶ್ವನಾಥ ಪಾಟೀಲ್ ಇತರ ಎಲ್ಲರಿಗೂ,

ವಿದ್ಯಾಭ್ಯಾಸಕ್ಕೆ ಸದಾ ಒತ್ತಾಸೆಯಾಗಿ ನಿಂತ ತಾಯಿ, ತಂದೆ, ಅಕ್ಕ, ಮಾಮ ಹಾಗೂ ತಮ್ಮ ತಂಗಿಗೆ,

ಈ ಸಂಪ್ರಬಂಧವನ್ನು ಅಲ್ಪಕಾಲದಲ್ಲಿ ಅಂದವಾಗಿ ಅಕ್ಷರ ಸಂಯೋಜಿಸಿ ಕೊಟ್ಟ ಶ್ರೀ ಎ.ಎಂ. ಕೃಪಾಶಂಕರ್ ಅವರಿಗೆ, .

ಜಗದೀಶ್ ಕೆರೆನಳ್ಳಿ

ಪರಿವಿಡಿ

ಅಧ್ಯಾಯ ೧

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಆಧುನಿಕ ಕನ್ನಡ ಸಾಹಿತ್ಯಕ್ಕೆ ಈಗ ನೂರು ವರ್ಷಗಳು. ಈ ನೂರು ವರ್ಷಗಳಲ್ಲಿ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಕನ್ನಡ ನಾಡಿನ ಸಾಹಿತ್ಯ ಮುಂಚೂಣಿಯಲ್ಲಿದೆ ಎಂಬುದಕ್ಕೆ ಕನ್ನಡಕ್ಕೆ ಬಂದಿರುವ ಜ್ಞಾನಪೀಠ ಪ್ರಶಸ್ತಿಗಳ ಸಂಖ್ಯೆಯೇ ಹೇಳುತ್ತದೆ. ಮಾಸ್ತಿ, ಕಾರಂತ, ಕುವೆಂಪು, ಬೇಂದ್ರೆ, ಅಡಿಗ ಮುಂತಾದ ಧೀಮಂತ ಸಾಹಿತಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇವರ ಸಾಹಿತ್ಯ ಸರಿಯಾಗಿ, ಸಕಾಲದಲ್ಲಿ ಇಂಗ್ಲೀಷಿಗೆ ಅನುವಾದವಾಗಿದ್ದರೆ ನೋಬೆಲ್ ಪ್ರಶಸ್ತಿಗಳು ಬರುತ್ತಿದ್ದವು ಎಂದು ಕನ್ನಡ ಚಿಂತಕರು ಅಭಿಪ್ರಾಯಪಡುತ್ತಿದ್ದಾರೆ. ೨೦ನೇ ಶತಮಾನದ ಆದಿಯಿಂದ ಪಶ್ಚಿಮ ದೇಶಗಳ ಸಂಪರ್ಕದಿಂದ ಕನ್ನಡದಲ್ಲಿ ಆಧುನಿಕ ಸಾಹಿತ್ಯ ಚಿಗುರೊಡೆದು ಬೆಳೆಯುತ್ತ ಹೆಮ್ಮರವಾಗಿ ಬೆಳೆದು ಬಂದಿದ್ದು ನಮ್ಮ ಕಣ್ಣಮುಂದಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ಲಲಿತಪ್ರಬಂಧ, ವಿಮರ್ಶೆ, ಸಂಶೋಧನೆ ಮುಂತಾದ ಸಾಹಿತ್ಯದ ಪ್ರಕಾರಗಳು ಪಶ್ಚಿಮದ ಪ್ರಭಾವದಿಂದ ಚಿಗುರೊಡೆಯತೊಡಗಿದರೂ ನಂತರ ಈ ನೆಲದ ಸಂಸ್ಕೃತಿಯ ಜತೆಗೆ ತನ್ನದೇ ಆದ ಸತ್ವದಿಂದ ಅನನ್ಯತೆ ಪಡೆದು ಬೆಳೆದು ಬಂದಿವೆ. ಸಾಹಿತ್ಯದ ಎಲ್ಲ ಪ್ರಕಾರಗಳು ವೈವಿಧ್ಯತೆಯಿಂದ ಬೆಳೆದದ್ದು ವಿಶೇಷವಾಗಿದೆ.

ಸಾಮಾನ್ಯ ಮನುಷ್ಯರ ಬದುಕನ್ನು ಪ್ರತಿಬಿಂಬಿಸಲು ಕಾದಂಬರಿ ಪ್ರಕಾರ ಹುಟ್ಟಿಕೊಂಡಿತು. ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕೆ ಔದ್ಯೋಗಿಕ ಬೆಳವಣಿಗೆಗಳು ಅಭಿವೃದ್ಧಿ ಹೊಂದಿದಂತೆ ಸಾಮಾನ್ಯ ಜನರ ಪಾತ್ರ ಮುಖ್ಯವಾಗ ತೊಡಗಿತು. ಈ ಸಾಮಾನ್ಯ ಜನರ ಬದುಕಿನ ಕಷ್ಟ ಸುಖಗಳ ಬವಣೆಯನ್ನು ಮರುರೂಪಿಸುವುದಕ್ಕೆ ಕಾದಂಬರಿ ಪ್ರಕಾರಕ್ಕೆ ಸಾಧ್ಯವಾಯಿತು. ಸಣ್ಣಕತೆ, ಕಾದಂಬರಿಗಳಲ್ಲಿ ಸಮಾಜದ ಎಲ್ಲ ವರ್ಗ, ಜಾತಿಗಳ ಬದುಕು ಶಕ್ತವಾಗಿ ಅಭಿವ್ಯಕ್ತಗೊಂಡವು. ಕನ್ನಡದಲ್ಲಿ ಬ್ರಿಟೀಶರ ವಸಾಹುತಶಾಹಿ ಆಡಳಿತದ ಕಾಲದಲ್ಲಿ ಆಧುನಿಕ ಶಿಕ್ಷಣ ಪಡೆದ ಸಾಹಿತಿಗಳು ಪಶ್ಚಿಮ ದೇಶಗಳ ಸಾಹಿತ್ಯವನ್ನು ಅಧ್ಯಯನ ಮಾಡಿದ ಫಲವಾಗಿ ಕನ್ನಡದಲ್ಲಿ ಕಾದಂಬರಿಗಳು ಸೃಷ್ಟಿಯಾಗ ತೊಡಗಿದವು. ಆರಂಭದಲ್ಲಿ ಸಂಪ್ರದಾಯದ ರೀತಿಯಲ್ಲಿ 'ಇಂದಿರಾ ಬಾಯಿ', 'ವಾಗ್ದೇವಿ', 'ಇಂದಿರಾ', 'ಮಾಡಿದ್ದುಣ್ಣೋ ಮಹಾರಾಯ', 'ಮುಸುಗತೆಗೆಯೇ ಮಾಯಾಂಗನೆ' ಮುಂತಾದ ಕಾದಂಬರಿಗಳು ರಚನೆಯಾದವು. ಈ ಕಾದಂಬರಿಗಳ ಮೇಲೆ ಅಂದರೆ ರಚನಾತಂತ್ರ, ನಿರೂಪಣಾ ವಿಧಾನ, ಭಾಷೆಯ ಬಳಕೆ ಮುಂತಾದ ಅಂಶಗಳಲ್ಲಿ ಆಧುನಿಕತೆಯ ಪ್ರಭಾವವಿದೆ. ನಂತರ ಬಂದ ಕಾದಂಬರಿಗಳು ಪರಿಪೂರ್ಣವಾಗುತ್ತ ಶ್ರೇಷ್ಠ ಕಾದಂಬರಿಗಳು ಕನ್ನಡದಲ್ಲಿ ರಚನೆಯಾಗತೊಡಗಿದವು. 'ಚಿಕ್ಕ ವೀರರಾಜೇಂದ್ರ', 'ಕಾನೂರು ಸುಬ್ಬಮ್ಮ ಹೆಗ್ಗಡಿತಿ', 'ಮರಳಿಮಣ್ಣಿಗೆ', 'ಗ್ರಾಮಾಯಣ', 'ಗಂಗವ್ವ ಗಂಗಾಮಾಯಿ', 'ಸಮರಸವೇ ಜೀವನ' ಮುಂತಾದ ಕಾದಂಬರಿಗಳು ರಚನೆಯಾಗುತ್ತ ಕನ್ನಡ ಕಾದಂಬರಿ ಪ್ರಪಂಚ ಸಮೃದ್ಧವಾಗ ತೊಡಗಿತು. ಕಾವ್ಯ ಪ್ರಕಾರಕ್ಕೆ ಸಾಧ್ಯವಾಗದ ಸಾಮಾನ್ಯ ಮನುಷ್ಯನ ಬದುಕನ್ನು ಈ ಕಾದಂಬರಿಗಳು ವ್ಯಕ್ತಪಡಿಸತೊಡಗಿದವು.

ಈ ಕಾದಂಬರಿ ಪ್ರಕಾರವನ್ನು ಮುಂದೆ ಚದುರಂಗ, ಚಿತ್ತಾಲ, ಅನಂತಮೂರ್ತಿ, ದೇಸಾಯಿ, ಲಂಕೇಶ, ತೇಜಸ್ವಿ, ಆಲನಹಳ್ಳಿ, ದೇವನೂರು, ಕುಂ.ವೀರಭದ್ರಪ್ಪ ಮುಂತಾದವರು ಬಲಪಡಿಸುತ್ತ ಬಂದರು. 'ವೈಶಾಖಿ'(ಚದುರಂಗ), 'ಶಿಖಾರಿ'(ಚಿತ್ತಾಲ), 'ಮುಕ್ತಿ'(ದೇಸಾಯಿ), 'ಸಂಸ್ಕಾರ' (ಅನಂತಮೂರ್ತಿ), 'ಮುಸ್ಸಂಜೆಯ ಕಥಾಪ್ರಸಂಗ'(ಲಂಕೇಶ), 'ಕರ್ವಾಲೋ'(ತೇಜಸ್ವಿ), 'ಕಾಡು' (ಆಲನಹಳ್ಳಿ), 'ಒಡಲಾಳ'(ದೇವನೂರು), 'ಶಾಮಣ್ಣ'(ಕುಂ.ವೀರಭದ್ರಪ್ಪ) ಮುಂತಾದ ಕಾದಂಬರಿಗಳು ಕನ್ನಡದಲ್ಲಿ ರಚನೆಯಾಗಿ ಪ್ರಸಿದ್ಧಗೊಂಡಿವೆ. ಕನ್ನಡ ನಾಡಿನ ಮನುಷ್ಯರ ಬದುಕನ್ನು ಆ ಮೂಲಕ ಸಂಸ್ಕೃತಿಯನ್ನು ಈ ಕಾದಂಬರಿಗಳು ಮರು ಸೃಷ್ಟಿಸಿವೆ. ಕನ್ನಡ ನಾಡಿನ ಸಂಸ್ಕೃತಿಯ ಚರಿತ್ರೆಯನ್ನು ಕನ್ನಡ ಕಾದಂಬರಿಗಳಿಂದ ಅರಿಯಬಹುದು.

೨೦ನೇ ಶತಮಾನದ ಆರಂಭದಿಂದ ರಚನೆಯಗುತ್ತ ಬಂದ ಕಾದಂಬರಿ ಪ್ರಕಾರ ೮೦-೯೦ರ ದಶಕದ ಹೊತ್ತಿಗೆ ಅದರ ಸತ್ವ ಮತ್ತು ರಚನೆಯ ದೃಷ್ಟಿಯಿಂದ ಇಳಿಮುಖವಾಯಿತು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಿದ್ದಾರೆ. ಈ ಮಾತು ಕಾದಂಬರಿ ಪ್ರಕಾರಕ್ಕೆ ಮಾತ್ರ ಸೀಮಿತ ಮಾಡಬೇಕಾಗಿಲ್ಲ. ಸಾಹಿತ್ಯದ ಇತರ ಪ್ರಕಾರಗಳಿಗೂ ಅನ್ವಯಿಸುತ್ತದೆ. ವಿಮರ್ಶಕರ ಪ್ರಕಾರ ಈಗ ಕನ್ನಡದಲ್ಲಿ ಸಾಹಿತ್ಯ ರಚನೆ ಕಡಿಮೆಯಾಗುತ್ತಿದೆ. ಸಣ್ಣಕತೆ, ಕಾವ್ಯ ಬಿಟ್ಟರೆ ನಾಟಕ, ಕಾದಂಬರಿ, ಲಲಿತ ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳು ಹೆಸರಿಸುವ ಮಟ್ಟದಲ್ಲಿ ರಚನೆಯಾಗುತ್ತಿಲ್ಲವೆಂದು ಹೇಳಲಾಗುತ್ತಿದೆ. ಇದು ಚರ್ಚೆಗೆ ಬಿಟ್ಟ ವಿಷಯವಾಗಬಹುದು. ಕಾದಂಬರಿಗಳು ಹೊಸ ತಲೆಮಾರಿನವರಿಂದ ರಚನೆಯಾಗುತ್ತಿಲ್ಲ ಎಂಬ ಅಭಿಪ್ರಾಯಗಳು ವಿದ್ವಾಂಸರಿಂದ ಬರುತ್ತಿವೆ. ಈ ಮಾತು ಯೋಚನೆಗೆ ಅರ್ಹವಾಗಿದೆ. ೮೦ರ ದಶಕದಲ್ಲಿ ದಲಿತ ಬಂಡಾಯ ಸಾಹಿತ್ಯ ಚಳುವಳಿಯು ಬಿರುಸಿನಿಂದ ಆರಂಭವಾಯಿತು. ಕೆಳವರ್ಗದವರು, ದಲಿತರು ಈ ಸಾಹಿತ್ಯ ಚಳುವಳಿಯಲ್ಲಿ ಪಾಲ್ಗೊಂಡು ಸಾಹಿತ್ಯ ರಚಿಸ ತೊಡಗಿದರು. ಹೆಚ್ಚಾಗಿ ಕಾವ್ಯ ತಕ್ಕ ಮಟ್ಟಿಗೆ ಸಣ್ಣಕತೆ ಪ್ರಕಾರಗಳಲ್ಲಿ ಬರೆಯ ತೊಡಗಿದರು. ಕೆಳವರ್ಗದವರು, ದಲಿತರು ಮೊದಲಬಾರಿಗೆ ಶಿಕ್ಷಣವನ್ನು ಪಡೆದು ವಿದ್ಯಾವಂತರಾದ ಯುವಕರು ವ್ಯವಸ್ಥೆಯನ್ನು ವಿರೋಧಿಸಿ ಪ್ರತಿಭಟಿಸುವ ಮನೋಧರ್ಮ ಹೊಂದಿದವರಾಗಿದ್ದರು. ತಮ್ಮ ನೋವನ್ನು ಕಾವ್ಯದಲ್ಲಿ, ಸಣ್ಣಕಥೆಗಳಲ್ಲಿ ಅಭಿವ್ಯಕ್ತಿಸಿದರು. ಕಾದಂಬರಿಗಳು ಈ ಚಳುವಳಿಯಲ್ಲಿ ಹೇಳುವಷ್ಟು ಶಕ್ತವಾಗಿ ರಚನೆಯಾಗಲಿಲ್ಲ. ಈ ಸಾಹಿತ್ಯ ಚಳುವಳಿಯಲ್ಲಿ ಪಾಲ್ಗೊಂಡವರಿಂದ ಅಂದರೆ ಹೊಸ ತಲೆಮಾರಿನವರಿಂದ ಕಾದಂಬರಿಗಳು ರಚನೆಯಾಗಲಿಲ್ಲ. ಅಂದರೆ ಕಾದಂಬರಿಗಳು ಅಲ್ಲೊಂದು ಇಲ್ಲೊಂದು ಬಂದಿವೆ. ಕುತೂಹಲದ ಸಂಗತಿಯೆಂದರೆ ನವ್ಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಬರೆಯಲಾರಂಭಿಸಿದ ಚಿತ್ತಾಲ, ಲಂಕೇಶ, ಅನಂತಮೂರ್ತಿ, ದೇಸಾಯಿ, ತೇಜಸ್ವಿ, ಚದುರಂಗ ಮುಂತಾದವರೇ ಈ ಹೊತ್ತಿಗೂ ಕಾದಂಬರಿಗಳನ್ನು ಬರೆಯುತ್ತಿದ್ದಾರೆ. ಹೊಸ ತಲೆಮಾರಿನಲ್ಲಿ ಕುಂ. ವೀರಭದ್ರಪ್ಪ ಅವರನ್ನು ಬಿಟ್ಟರೆ ಹೆಸರಿಸುವಂತ ಕಾದಂಬರಿಗಳನ್ನೂ ಯುವಕರು ಬರೆದಿಲ್ಲ ಎಂಬುದು ನಿಜವಾದ ಸಂಗತಿಯಾಗಿದೆ. ಯಾಕೆ ಕಳೆದ ದಶಕದಲ್ಲಿ 'ಅತ್ಯುತ್ತಮ' ಕಾದಂಬರಿಗಳು ರಚನೆಯಾಗಲಿಲ್ಲ? ಈ ಹೊತ್ತಿನಲ್ಲಿಯೂ ಕಾದಂಬರಿ ಪ್ರಕಾರ ಯಾಕೆ ಸೊರಗಿದೆ ಎಂಬುದಕ್ಕೆ ಸಾಂಸ್ಕೃತಿಕವಾಗಿ ಅನೇಕ ಕಾರಣಗಳಿವೆ.

ಜಾಗತೀಕರಣದ ಈ ಸಂದರ್ಭದಲ್ಲಿ ಹೊಸ ತಲೆಮಾರಿನವರಿಗೆ ಸಾಂಸ್ಕೃತಿಕವಾಗಿ ಅನೇಕ ಬಿಕ್ಕಟ್ಟುಗಳು ಎದುರಾಗಿವೆ. ಶಿಕ್ಷಣ, ಭಾಷೆ, ಉದ್ಯೋಗ, ಅಲೆಮಾರಿತನ ಎಲ್ಲದರಿಂದ ಯುವ

ಜನಾಂಗ ಒಂದು ರೀತಿಯಿಂದ ಅತಂತ್ರ ಸ್ಥಿತಿಯಲ್ಲಿ ತೊಳಲಾಡುತ್ತಿರುವುದೇ ಇದಕ್ಕೆ ಕಾರಣವಿರಬಹುದೇ? ಕನ್ನಡ ಭಾಷೆಯಲ್ಲಿ ಕಲಿತರೆ ಪ್ರಯೋಜನವಿಲ್ಲ ಎಂಬ ಆತಂಕ ಸೃಷ್ಟಿಯಾಗಿದೆ. ಯುವಕರಿಗೆ ತಮ್ಮ ಭಾಷೆ, ಸಂಸ್ಕೃತಿಯನ್ನು ಬಲವಾಗಿ ನಂಬಿಕೊಂಡು ಬದುಕುವ ಸ್ಥಿತಿ ಉಳಿದಿಲ್ಲ. ಅಲೆಮಾರಿತನದಿಂದ ಅನುಭವಗಳು ಗಟ್ಟಿಯಾಗಿ ನಿಲ್ಲದೆ ಇರುವುದರಿಂದ ಕಾದಂಬರಿಗಳು ರಚನೆಯಾಗುತ್ತಿಲ್ಲ ಎಂದು ಹೇಳಿದರೆ ತಪ್ಪಾಗುವುದೇ? ಆದರೂ ಹೊಸ ತಲೆಮಾರಿನವರು ಮತ್ತು ಹಳೆ ತಲೆಮಾರಿನವರು ಕೂಡಿಯೇ ಈ ಕಾಲದಲ್ಲಿ ಕಾದಂಬರಿಗಳನ್ನು ಬರೆಯುತ್ತಿರುವುದು ವಿಶೇಷವಾಗಿದೆ. ಸಂಖ್ಯಾಸತ್ವದಿಂದ ಸಮೃದ್ಧವಾಗಿಲ್ಲದಿರಬಹುದು. ಆದರೆ ಕಾದಂಬರಿಗಳಂತೂ ಬರುತ್ತಿವೆ. ಈ ಹಿನ್ನೆಲೆಯಲ್ಲಿ ವ್ಯಾಸರಾಯ ಬಲ್ಲಾಳರಂತಹ ಹಿರಿಯ ತಲೆಮಾರಿನವರು 'ಹೆಜ್ಜೆ' ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಹೊಸತಲೆಮಾರಿನ ಎಚ್.ನಾಗವೇಣಿ ಅವರು 'ಗಾಂಧಿಬಂದ' ಕಾದಂಬರಿಯನ್ನು ಬರೆದಿದ್ದಾರೆ. ಹೊಸ ತಲೆಮಾರಿನ ಎಚ್.ನಾಗವೇಣಿ ಅವರು ಮಹಿಳೆಯಾಗಿರುವುದು ಒಂದು ವಿಶೇಷವಾಗಿದೆ. ಈ ಅಧ್ಯಯನಕ್ಕೆ ಇದಷ್ಟೇ ಕಾರಣವಾಗದೆ ೯೦ರ ದಶಕದಲ್ಲಿ ಅದರಲ್ಲೂ ಕೊನೆಯ ವರ್ಷಗಳಲ್ಲಿ ಕಾದಂಬರಿಗಳು ರಚನೆಯಾಗುತ್ತಿಲ್ಲ ಎಂಬ ಅಭಿಪ್ರಾಯವಿರುವಾಗ ಈ ಕಾದಂಬರಿಗಳು ರಚನೆಯಾಗಿವೆ. ಇನ್ನೊಂದು ವಿಶೇಷವೆಂದರೆ 'ಹೆಜ್ಜೆ' ಮತ್ತು 'ಗಾಂಧಿಬಂದ' ಕಾದಂಬರಿಗಳನ್ನು ರಚಿಸಿದವರಲ್ಲಿ ತಲೆಮಾರಿನ ವ್ಯತ್ಯಾಸವಿದೆ. ಆದರೆ ಈ ಎರಡು ಕಾದಂಬರಿಗಳು ಒಂದೇ ನಿರ್ದಿಷ್ಟ ಪ್ರದೇಶಕ್ಕೆ ಸೇರಿವೆ. ಒಂದೇ ವಸ್ತುವನ್ನು ಉಳ್ಳವಾಗಿವೆ. ಇದೊಂದು ವಿಶೇಷವೆ. ಸ್ವಾತಂತ್ರ್ಯಪೂರ್ವದ ಕಥಾವಸ್ತುವಿದೆ. ಸ್ವಾತಂತ್ರ್ಯಂದೋಲನದ ಸಂದರ್ಭದಲ್ಲಿ ಗಾಂಧೀಜಿ ಅವರು ಮಲೆನಾಡಿಗೆ ಜನಜಾಗೃತಿಗಾಗಿ ಬಂದಾಗ ಆ ನಾಡಿನಲ್ಲಿ ಗಾಂಧೀಜಿ ಅವರ ಪ್ರಭಾವದಿಂದ ಜನರಲ್ಲಿ ಮೂಡಿದ ಸ್ವಾತಂತ್ರ್ಯದ ಕನಸು, ಅದರಿಂದ ಉಂಟಾದ ಪರಿಣಾಮಗಳು ಈ ಎರಡು ಕಾದಂಬರಿಗಳಲ್ಲಿ ನಿರೂಪಿಸಲಾಗಿವೆ. ೪೦ರ ದಶಕದಲ್ಲಿ ಗಾಂಧೀಜಿ ಅವರ ಪ್ರಭಾವದಿಂದ ಎಲ್ಲ ಜಾತಿ, ವರ್ಗ, ಸಮುದಾಯಗಳಲ್ಲಿ ಆದ ಪರಿವರ್ತನೆಗಳನ್ನು ಕಾಣಿಸುವುದೇ ಈ ಕಾದಂಬರಿಗಳ ಉದ್ದೇಶವಾಗಿದೆ. ಸ್ವಾತಂತ್ರ್ಯಪೂರ್ವದ ಈ ಕಥಾವಸ್ತುವನ್ನು ಸ್ವಾತಂತ್ರ್ಯಬಂದು ಐದು ದಶಕಗಳು ಕಳೆದ ನಂತರ ಅಂದರೆ ೨೦ನೇ ಶತಮಾನದ ಕೊನೆಯ ವರ್ಷಗಳಲ್ಲಿ ರಚನೆಯಾಗಿರುವುದು ಕುತೂಹಲದ ಸಂಗತಿಯಾಗಿದೆ. ಈ ಎರಡು ಕಾದಂಬರಿಗಳು ಕನ್ನಡ ಕಾದಂಬರಿ ಪರಂಪರೆಗೆ ಸೇರಿರುವುದು ಒಂದು ಕಡೆಯಾದರೆ, ಈ ಎರಡು ಕಾದಂಬರಿಗಳ ಕಾದಂಬರಿಕಾರರು ಒಂದೇ ವಸ್ತುವನ್ನು, ಒಂದು ನಿರ್ದಿಷ್ಟ ಕಾಲದ ಸಮಾಜದಲ್ಲಿ ಆದ ಪರಿರ್ವನೆಗಳನ್ನು ಹೇಗೆ ಗ್ರಹಿಸಿದ್ದಾರೆ ಎಂಬುದನ್ನು ಅರಿಯಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ಅಧ್ಯಾಯ ೨

ಕನ್ನಡ ಕಾದಂಬರಿ ಪರಂಪರೆ ಮತ್ತು ಗಾಂಧಿಬಂದ, ಹೆಜ್ಜೆ ಕಾದಂಬರಿಗಳು

ಸಾಮಾನ್ಯ ಮನುಷ್ಯನ ಬದುಕನ್ನು ಚಿತ್ರಿಸುವುದಕ್ಕಾಗಿಯೇ ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರ ಹುಟ್ಟಿಕೊಂಡಿದೆ ಎಂದರೆ ತಪ್ಪಾಗುವುದಿಲ್ಲ. ಕನ್ನಡ ಕಾದಂಬರಿ ಪರಂಪರೆಯನ್ನು ಗಮನಿಸಿದರೆ ಈ ಮಾತು ನಿಜವೆನಿಸುತ್ತದೆ. ಇದುವರೆಗೆ ಬೆಳೆದು ಬಂದ ಕಾದಂಬರಿ ಪರಂಪರೆಯನ್ನು ಅವಲೋಕಿಸಿದರೆ ವಿವಿಧ ಕಾಲಘಟ್ಟದಲ್ಲಿ ಬೇರೆ ಬೇರೆ ಧೋರಣೆಯನ್ನು ಹೊಂದಿದ ಬದುಕಿನ ವಿವಿಧ ಆಯಾಮಗಳನ್ನು ಚಿತ್ರಿಸುವ ಕಾದಂಬರಿಗಳು ಕನ್ನಡದಲ್ಲಿ ವಿಪುಲವಾಗಿ ರಚನೆಯಾಗಿವೆ.

ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಆಗುವದಕ್ಕಿಂತ ಮೊದಲೇ 'ಕಾದಂಬರಿ' ಎನ್ನಬಹುದಾದ ಕೃತಿಗಳು ರಚನೆಯಾಗಿದ್ದವು ಎನ್ನುವುದು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಮಹತ್ವವಾದುದು. 'ಯಾದವನ ಕಲಾವತೀ ಪರಿಣಯ' (೧೮೧೫), 'ಮುಮ್ಮಡಿ ಕೃಷ್ಣರಾಜರ ಸೌಗಂಧಿಕಾ ಪರಿಣಯ' (೧೮೨೧), ಮತ್ತು ಕೆಂಪು ನಾರಾಯಣನ 'ಮುದ್ರಮಂಜೂಷ'(೧೮೨೩). ಇವು ಕನ್ನಡದ ಮೊದಲ ಘಟ್ಟದಲ್ಲಿ ಬರುವ ಕಾದಂಬರಿಗಳೆನಿಸಿದರೂ ಇಲ್ಲಿ ಕಲ್ಪನೆ ಮತ್ತು ಇತಿಹಾಸಗಳ ಮಿಳಿತದಿಂದ ಸಾಮಾನ್ಯ ಮನುಷ್ಯನ ಬದುಕನ್ನು ಚಿತ್ರಿಸುವ ಇಂದಿನ ಕಾದಂಬರಿ ಸಾಹಿತ್ಯದ ಲಕ್ಷಣಕ್ಕಿಂತ ಭಿನ್ನವಾಗಿವೆ. ನಂತರದಲ್ಲಿ ಬರುವ ಪಾಶ್ಚಾತ್ಯರ ಅನುವಾದಗಳು ಕನ್ನಡ ಕಾದಂಬರಿ ಇತಿಹಾಸದಲ್ಲಿ ಗುರುತಿಸುವಂತವು

೧೮೪೭ರ ಜಾನ್ ಬನ್‌ಯನ್‌ನ 'ದಿ ಪಿಲ್ ಗ್ರಿಮ್ಸ್ ಪ್ರೋಗ್ರೆಸ್', ೧೮೫೭ರಲ್ಲಿ 'ಡ್ಯಾನಿಯಲ್ ಡಫೋನ, 'ರಾಬಿನ್ ಸನ್ ಕ್ರೂಸೊ' ಇವು ಕನ್ನಡಕ್ಕೆ ಅನುವಾದವಾದವು. 'ರಾಬಿನ್ ಸನ್ ಕ್ರೂಸೋ' ಬಹು ಸಣ್ಣ ಸಣ್ಣ ವಿವರಗಳಿಗೂ ಗಮನಕೊಡುವ ವಿಶಿಷ್ಟ ವಾಸ್ತವಿಕ ನಿರೂಪಣೆಯನ್ನು ಕನ್ನಡಕ್ಕೆ ಪರಿಚಯ ಮಾಡಿಕೊಟ್ಟಿತು. ನಂತರ ಬಂಗಾಳಿಯಿಂದ ಬಂಕಿಮಚಂದ್ರರ 'ದುರ್ಗೇಶ ನಂದಿನಿ' (೧೮೮೫), ಮರಾಠಿಯಿಂದ ಪದುಮಂಜಿಯವರ 'ಯಮುನಾ ಪರ್ಯಟನಾ' (೧೮೯೬), ತೆಲುಗಿನಿಂದ ವೀರೇಶಲಿಂಗಂ ಪಂತುಲು ಅವರ 'ವಿವೇಕ ಚಂದ್ರಿಕೆ'(೧೮೯೫), ಮಲೆಯಾಳಿಯಿಂದ ಮುಳಿಯಲ್ ಅವರ 'ಸುಕುಮಾರಿ'(೧೮೯೯). ದೇಸಿಯ ಭಾಷಾ ಅನುವಾದಗಳೆಂದು ಕನ್ನಡ ಕಾದಂಬರಿ ಅನುವಾದಕಾರರಾದ ಗಳಗನಾಥರು ಮತ್ತು ಬಿ.ವೆಂಕಟಾಚಾರ್ಯರು ಬಂಗಾಳಿ ಮತ್ತು ಮರಾಠಿ ಭಾಷೆಗಳ ಅನುವಾದದ ಮಹಾಪೂರವನ್ನೇ ತಂದರು. ಇದಲ್ಲದೆ ಮುಂದೆ ಸ್ವತಂತ್ರವಾಗಿ ೧೮೯೨ರಲ್ಲಿ ಪ್ರಕಟವಾದ ಲಕ್ಕ್ಮಣರಾವ್ ಗದಗಕರರ 'ಸೂರ್ಯಕಾಂತ', ಗುಬ್ಬಿ ಮುರುಗಾರಾಧ್ಯರ 'ಶೃಂಗಾರಚಾತು ಯೋರ್ಲ್ಲಾಸಿನಿ'(೧೮೯೬), ಗಳಗನಾಥರ 'ಪ್ರಬುದ್ಧನಯನೆ'(೧೮೯೮), ಇವುಗಳ ನಂತರ ಬಂದ ಗುಲವಾಡಿ ವೆಂಕಟರಾಯರ 'ಇಂದಿರಾಬಾಯಿ'(೧೮೯೯), ಆರಂಭದ ಸಾಮಾಜಿಕ ಕಾದಂಬರಿಗಳಾಗಿ ನಿಂತಿವೆ.

ಗುಲವಾಡಿಯವರ ಸಾಹಿತ್ಯದ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವಿತ್ತಾದರೂ ಅವರು ಅದನ್ನು ತಮ್ಮ ಸಮಕಾಲೀನ ಸಾಂಸ್ಕೃತಿಕ ಜೀವನವನ್ನು ಹೊರಗಿನಿಂದ ನೋಡಲಾರಂಭಿಸಿದರು. ನೀತಿ ಪ್ರಧಾನವಾದ ಕತೆಯನ್ನು ಎಣೆದು ಪರಂಪರಾಗತ ಮೌಲ್ಯಗಳು, ಇವುಗಳ ಕೋಟೆಯಂತಿರುವ ಮಠಗಳನ್ನು ಬಯಲಿಗೆಳೆದು ಸುಧಾರಣೆಯ ಅಗತ್ಯವನ್ನು ಪಾಶ್ಚಾತ್ಯ ಮೌಲ್ಯಗಳ ನಿಕಷಗಳಿಂದಲೇ ಪರೀಕ್ಷಿಸಿದರು. ಆದರೆ ಸಮಾಜದ ಅನಿಷ್ಟ ಪದ್ಧತಿಗಳು ಬದಲಾಗಬೇಕೆಂದು ಬಯಸುತ್ತಿದ್ದ ಕೆರೂರು ವಾಸುದೇವಾಚಾರ್ಯರು ಅವು ಭಾರತೀಯ ಸಂಸ್ಕೃತಿಯ ನೆಲೆಗಟ್ಟಿನ ಮೇಲೆಯೇ ಹೊಸಬಾಳು ರೂಪಗೊಳ್ಳಬೇಕೆಂಬುದು ಅವರ 'ಇಂದಿರಾ' ಕಾದಂಬರಿ ಹೇಳುತ್ತದೆ. ಪ್ರೇಮಕಥೆಯಾದರೂ ಆ ಕಾಲದ ಸಾಮಾಜಿಕ ಸಮಸ್ಯೆಗಳಾದ ವಿಧವಾ ವಿವಾಹ, ಸ್ತ್ರೀತಾರತಮ್ಯ, ವರದಕ್ಷಿಣೆ. ಸಂಪ್ರದಾಯ ನಿಷ್ಠತೆ ಮುಂತಾದ ವೈಚಾರಿಕ ನಿಲುವನ್ನು ಬಿಂಬಿಸುತ್ತದೆ. ಆದರ್ಶದ ಸ್ತ್ರೀ ಚಿತ್ರವನ್ನು ಕೊಡುತ್ತದೆ. ಕೆರೂರರ 'ಇಂದಿರಾ' ಕಾದಂಬರಿಯ ನಂತರ ಬೋಳಾರ ಬಾಬೂರಾಯರ 'ವಾಗ್ದೇವಿ' (೧೯೦೫) ಗಮನಿಸಬೇಕಾದ ಕಾದಂಬರಿ. ಘಟನೆಗಳಿಂದ ತುಂಬಿದ ಕುತೂಹಲ ಮೂಡಿಸುವ ಕಥೆಯಾದರೂ ಸಾಮಾಜಿಕ ಜೀವನದ ವಾಸ್ತವವನ್ನು ಹೊರಗೆಳೆಯುವ ಪ್ರಯತ್ನವಿದೆ. ಮುಂದೆ ಪ್ರಾರಂಭವಾದ ಕೆಲವು

ಮಹತ್ವದ ಕೃತಿಗಳೆಂದರೆ ೧೮೭೩ರಲ್ಲಿ ಪ್ರಕಟವಾದ 'ಮುದ್ರಾಮಂಜೂಷ' ಪ್ರಥಮ ಐತಿಹಾಸಿಕ ಕಾದಂಬರಿ. ೧೮೯೭ರಲ್ಲಿ ಪ್ರಕಟವಾದ ಎಂ. ವೆಂಕಟಕೃಷ್ಣಪ್ಪಯ್ಯನವರ 'ಚೋರಗ್ರಹಣ ತಂತ್ರ' ಮೊದಲ ಪತ್ತೇದಾರಿ ಕಾದಂಬರಿ. 'ಇಂದಿರಾಬಾಯಿ' ಮೊದಲ ಸ್ವಾತಂತ್ರ ಸಾಮಾಜಿಕ ಕಾದಂಬರಿ. ಗಳಗನಾಥರ 'ಕುಮುದನಿ' ಇವೆ ಮುಂತಾದ ಕೃತಿಗಳು ಮುಖ್ಯವಾಗಿವೆ.

ಈ ಕಾಲದಲ್ಲಿ ಬರೆಯುತ್ತಿದ್ದ ಲೇಖಕರಿಗೆ ಅಷ್ಟೊಂದು ಸಾಂಸ್ಕೃತಿಕ ವಿರೋಧವಿಲ್ಲದ್ದರಿಂದ ಸಂಪ್ರದಾಯದ ಮೌಲ್ಯಗಳನ್ನು ಒಪ್ಪಿಕೊಂಡು ಬರೆಯುತ್ತಿದ್ದರಾದರೂ ಅವರಿಗೆ ಕಾದಂಬರಿ ಮನರಂಜನೆಯ ಮಟ್ಟಕ್ಕಿಳಿಯದೆ ಜೀವನವನ್ನು ಗಂಭೀರವಾಗಿ ಚಿತ್ರಿಸುವ ಕ್ರಿಯೆಯಾಗಿತ್ತು.

೨೦ನೇ ಶತಮಾನದ ಮೂರನೆಯ ದಶಕದಿಂದ ಆಧುನಿಕ ಪ್ರವೃತಿಯು ಕನ್ನಡ ಕಾದಂಬರಿಗಳ ರಚನೆಗೆ ಪ್ರೇರಣೆಯಾಯಿತು. ದೇಶದ ಇತಿಹಾಸದಲ್ಲಿ ಆದ ಬದಲಾವಣೆಗಳಿಂದ ಸಾಂಸ್ಕೃತಿಕ ಮುಖಾಮುಖಿಯಿಂದ ಗ್ರಾಮೀಣ ಸಮಾಜದ ವಿಘಟನೆ, ಪಾಶ್ಚಾತ್ಯ ಶಿಕ್ಷಣದಿಂದ ಹುಟ್ಟಿದ ಚಿಕಿತ್ಸಕ ಬುದ್ಧಿ, ಸ್ವಾತಂತ್ರ್ಯ ಚಳುವಳಿ ಹೀಗೆ ಸಮಾಜದ ನೂರೆಂಟು ಸಮಸ್ಯೆಗಳು ಕಾದಂಬರಿಗಳ ರಚನೆಗೆ ವಸ್ತುವನ್ನೊದಗಿಸಿದವು. ವಸ್ತು, ನಿರೂಪಣೆ, ಶೈಲಿ, ತಂತ್ರಗಳಲ್ಲಿ ಆಧುನಿಕತೆಯೇ ಈ ಕಾದಂಬರಿಗಳ ರಚನೆಯ ಮುಖ್ಯತತ್ವಗಳಾದವು. ವಾಸ್ತವ ಮತ್ತು ಆದರ್ಶದ ಸಮ್ಮಿಲನ ಈ ಕಾಲದ ಕಾದಂಬರಿಗಳಲ್ಲಿ ಹೆಚ್ಚಾಯಿತು. ೧೯೨೮ರಲ್ಲಿಯೇ ಶಿವರಾಮ ಕಾರಂತರ 'ದೇವದೂತರು' ಪ್ರಕಟವಾಯಿತು. ಬೆಟಗೇರಿ ಕೃಷ್ಣಶರ್ಮರ 'ಸುದರ್ಶನ' (೧೯೩೩), ಹಾಗೂ 'ಮಗಳ ಮದುವೆ', ರಂ. ಶ್ರೀ. ಮುಗಳಿಯವರ 'ಬಾಳುರಿ', 'ಅನ್ನ', 'ಕಾರಣ ಪುರುಷ', ಜಡಭರತರ, 'ಧರ್ಮಸರೆ' ಮುಂತಾದವು ಬದುಕಿನ ಆದರ್ಶವನ್ನು ಸೃಷ್ಟಿಸಿದ ಕಾದಂಬರಿಗಳು. ಕಾರಂತರ 'ಚೋಮನ ದುಡಿ' (೧೯೩೩), ಅನಕೃ ಅವರ 'ಉದಯರಾಗ' ಮತ್ತು 'ಜೀವನ ಯಾತ್ರೆ', ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ'(೧೯೩೪), ಬೆಳಕು ಕಂಡವು. ೧೯೩೫ ನೇಯ ಸಂವತ್ಸರದಲ್ಲಿ ಆನಂದ ಕಂದರ 'ರಾಜಯೋಗಿ' ಮತ್ತು 'ಶಾಂತಿ ಪರ್ವ' ನಳಿಂಬ ಐತಿಹಾಸಿಕ ಕಾದಂಬರಿಗಳು, ವಿನಾಯಕರ 'ಇಜ್ಜೋಡು', ಅನಕೃ ಅವರ 'ಸಂಧ್ಯಾರಾಗ' ಮತ್ತು 'ನಗ್ನಸತ್ಯ', ೧೯೩೪ರಲ್ಲಿ ಕುವೆಂಪು ಅವರ 'ಕಾನೂನು ಸುಬ್ಬಮ್ಮ ಹೆಗ್ಗಡಿತಿ', ಶ್ರೀನಿವಾಸರ 'ಸುಬ್ಬಣ್ಣ', ದೇವುಡು ಅವರ 'ಅಂತರಂಗ', 'ಮಯೂರ', 'ಮಹಾಬ್ರಾಹ್ಮಣ', ಕಾರಂತರ 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಹೆತ್ತಳಾ ತಾಯಿ', ನಾ. ಕಸ್ತೂರಿಯವರ 'ಚಕ್ರದೃಷ್ಟಿ', ವಿ.ಎಂ.ಇನಾಂದಾರರ 'ಎರಡು ಧ್ರುವ' ಮೊದಲಾದವು ರಚನೆಯಾದವು. ಈ ಕಾಲದ ಕಾದಂಬರಿಗಳು ಓದುಗರನ್ನು ಆಕರ್ಷಿಸಿದವು. ಕಾದಂಬರಿ ಪ್ರಕಾರವನ್ನು ಬಲಗೊಳಿಸಿದವು.

ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಕನ್ನಡದ ಮಹಾಕಾದಂಬರಿ. ಮಲೆನಾಡಿನ ಹಳ್ಳಿಗಾಡಿನ ಜೀವನ ಚಿತ್ರಣ, ರಮ್ಯ ನಿಸರ್ಗ, ಗಿರಿಶಿಖರಗಳು, ಮುಗಿಲೆತ್ತರದ ಮರಗಳು, ಪ್ರಾಣಿ ಪಕ್ಷಿಗಳು ಇವುಗಳ ಹಾರಾಟ-ಚೀರಾಟಗಳು ಓದುಗನಿಗೆ ಕೇಳಿಸುವಂತೆ ಮಲೆನಾಡಿನ ಸೊಬಗನ್ನು ಚಿತ್ರಿಸಿದರು. ನಿಸರ್ಗ - ಮನುಷ್ಯ ಜೀವನದ ಬೆಸುಗೆಯಾಗಿ ಅನುಭವಕ್ಕೆ ಬರುತ್ತವೆ. ಪರಿಸರದ ವರ್ಣನೆಯಲ್ಲಿ ಕಾದಂಬರಿಕಾರರ ಪ್ರತಿಭೆ ಅದ್ಭುತವಾದದ್ದು. ಕಾದಂಬರಿಯಲ್ಲಿ ಬರುವ ಪಾತ್ರಗಳು ವಿವಿಧ ಸ್ತರಗಳಲ್ಲಿ ನಿಸರ್ಗದ ಜೊತೆಗೆ ಸಹಜವಾಗಿ ಬದುಕುವಂತವು. ಹಳ್ಳಿಗಾಡಿನ ಜೀವನದ ಆವರಣದಲ್ಲಿ ಹೂವಯ್ಯನಂತ ಆದರ್ಶದ ಸೂಕ್ಷ್ಮ ಚೇತನವನ್ನು ಅರಳಿಸುತ್ತಾರೆ. ಆದರೆ ಹೂವಯ್ಯನ ಪಾತ್ರ ಅತಿ ಆದರ್ಶ, ಅತಿ ಭಾವುಕತೆ ಬೆರೆತು ಜೀವಂತವಾಗದೆ ಬರೀ ಆದರ್ಶವಾಗಿಯೇ ಉಳಿದಿದೆ ಎಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಇದು ಅಸಹಜ ಅನ್ನಿಸುವುದಿಲ್ಲ. ಓದಿದ ಯುವಕನ ಆದರ್ಶ ಬಿಂಬಿತವಾಗಿದೆ. ಕಾದಂಬರಿಯ ತಂತ್ರ, ರೀತಿ, ಶೈಲಿಗಳಲ್ಲಿ ಅರ್ಥವತ್ತಾಗಿ ಸನ್ನಿವೇಶಗಳನ್ನು ಜೋಡಿಸಿ ಒಂದು ಜನಾಂಗದ ಜೀವನ, ಅದರ ಆಳ-ಅಗಲಗಳನ್ನು ಸಮರ್ಥವಾಗಿ ಚಿತ್ರಿಸಿದ ಮಹತ್ವದ ಕೃತಿ.

ಶಿವರಾಮ ಕಾರಂತರು ಸ್ವಾತಂತ್ರ್ಯ ಪೂರ್ವದಲ್ಲಿ, ಸ್ವಾತಂತ್ರ್ಯ ನಂತರವೂ ಕಾದಂಬರಿಗಳನ್ನು ರಚಿಸಿದವರು. ಇವರ 'ಚೋಮನ ದುಡಿ' ವಸ್ತು, ಶೈಲಿ ಅನುಭವದ ದೃಷ್ಟಿಯಿಂದ ಕುತೂಹಲಕಾರಿ ಯಾಗಿದೆ. ದಲಿತನೊಬ್ಬನ ಬದುಕು ಹೇಗೆ ತುಳಿತಕ್ಕೊಳಗಾಗಿದೆ. ಅವನು ಭೂಮಿಯ ಒಡೆಯನಾಗಬೇಕು ಎನ್ನುವ ಹಂಬಲ ಹಂಬಲವಾಗಿಯೇ ಉಳಿಯುತ್ತದೆ ಎನ್ನುವುದನ್ನು ಚೋಮನ ಮೂಲಕ ಕಟ್ಟಿ ಕೊಡುತ್ತಾರೆ. ೭೦ರ ದಶಕದಲ್ಲಿ ದಲಿತರ, ಹಿಂದುಳಿದವರ ಸಾಂಸ್ಕೃತಿಕ ಪರಿವರ್ತನೆಯ ಸಂದರ್ಭದಲ್ಲಿ ರಚನೆಯಾದ ಸಾಹಿತ್ಯವನ್ನು ಗಮನಿಸಿದರೆ ಇಂತಹದ್ದನ್ನು ಕಾರಂತರು 'ಚೋಮನ ದುಡಿ'ಯಲ್ಲಿ ಬಹಳ ಹಿಂದೆಯೇ ದಲಿತನೊಬ್ಬನ ಅಸಹಾಯಕತೆಯನ್ನು ಮತ್ತು ಮತಾಂತರಗೊಳ್ಳುವ ಕ್ರಿಯೆಯನ್ನು ಚಿತ್ರಿಸಿದ್ದಾರೆ. ಇವರ ಮರಳಿ ಮಣ್ಣಿಗೆ ಕನ್ನಡದ ಮಹಾ ಕಾದಂಬರಿಗಳಲ್ಲಿ ಒಂದಾಗಿದೆ. ಕರಾವಳಿಯ ಗ್ರಾಮೀಣ ಪ್ರದೇಶದ ಮೂರು ತಲೆಮಾರುಗಳ ಚಿತ್ರಣವನ್ನೊಳಗೊಂಡ ಈ ಕಾದಂಬರಿ ಸಾಮಾಜಿಕ ಪ್ರಕ್ರಿಯೆ ಹಾಗೂ ಮೌಲ್ಯ ಕ್ರಮಗಳನ್ನು ಬ್ರಾಹ್ಮಣ ಕುಟುಂಬವೊಂದನ್ನು ಕೇಂದ್ರವಾಗಿಟ್ಟುಕೊಂಡು ಸೃಷ್ಟಿಸುವುದೇ ಇವರ ಉದ್ದೇಶವಾಗಿದೆ. ಆಧುನಿಕತೆಯಿಂದ ಸಮಾಜ ಬದಲಾದಂತೆ ಮನುಷ್ಯನ ಜೀವನವೂ ಬದಲಾಗುತ್ತದೆ. ಸಂಕ್ರಮಣ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಕಾದಂಬರಿ ಹೇಳುತ್ತದೆ. ಇವರ ಇನ್ನುಳಿದ ಕಾದಂಬರಿಗಳಾದ 'ಬೆಟ್ಟದ ಜೀವ', 'ಔದಾರ್ಯದ ಉರುಳಲ್ಲಿ', 'ಮುಗಿಯದ ಯುದ್ಧ', 'ಕುಡಿಯೂರ ಕೂಸು' ಮಹತ್ವದ ಕಾದಂಬರಿಗ ಳಾಗಿವೆ. ಇವರ 'ಅಳಿದ ಮೇಲೆ' ಕಾದಂಬರಿ, ತಂತ್ರ, ವಸ್ತು, ವಿಕಾಸಶೀಲ ವ್ಯಕ್ತಿತ್ವ ಇದರಲ್ಲಿ ರೂಪುಗೊಂಡಿದೆ. 'ಮೈಮನಗಳ

ಸುಳಿಯಲ್ಲಿ', 'ಮೂಕಜ್ಜಿಯ ಕನಸುಗಳು' ಕಾದಂಬರಿಗಳಲ್ಲಿ ಬದುಕಿನ ತಪ್ಪುಗಳು, ಆದರ್ಶಗಳು ಹೇಗೆ ವಿಕಾಸಗೊಳ್ಳುತ್ತವೆ ಎಂಬುದನ್ನು ಕಾರಂತರು ತೋರಿಸಿದ್ದಾರೆ. ಗಟ್ಟಿಯಾದ ಜೀವನಾನುಭವ, ಜೀವನವನ್ನು ಸಮಗ್ರವಾಗಿ ನೋಡುವ ಸೂಕ್ಷ್ಮದೃಷ್ಟಿ, ವೈಜ್ಞಾನಿಕ ವಿಶ್ಲೇಷಣೆ, ಜೀವಂತ ಪಾತ್ರಗಳು ಮೇಲಾಗಿ ಯಾವ ಸಂಪ್ರದಾಯದ ಪಂಥಕ್ಕೂ ಸೇರದ ಸ್ವತಂತ್ರ ಮನೋವೃತ್ತಿಯನ್ನು ಕಾರಂತರಲ್ಲಿ ಕಾಣಬಹುದು. ಬ್ರಿಟೀಶ್ ವಸಾಹತು ಸಂದರ್ಭದಲ್ಲಿ ಗ್ರಾಮೀಣ ಜೀವನ ಕ್ರಮ ಹೇಗೆ ಸ್ಥಿತ್ಯಂತಗೊಳ್ಳುತ್ತ ದುರಂತದಲ್ಲಿ ಪರ್ಯಾವಸಾನಗೊಳ್ಳುವುದನ್ನು ಗಟ್ಟಿಯಾದ ಅನುಭವದ ದೃಷ್ಟಿಯಿಂದ ರಾವ್ ಬಹದ್ದೂರ್ 'ಗ್ರಾಮಾಯಣ' ಕಾದಂಬರಿಯನ್ನು ಬರೆದರು. ವಿ.ಕೃ. ಗೋಕಾಕರ ಸಾಮಾಜಿಕ ಸಮಸ್ಯೆ, ಸೋಲು ಗೆಲುವು, ಹೋರಾಟ-ಹೊಯ್ದಾಟಗಳನ್ನು ಚಿತ್ರಿಸಿದ 'ಇಜ್ಜೋಡು' ಕಾದಂಬರಿ ಬಂತು. ೧೯೫೬ರ ಹೊತ್ತಿಗೆ ಆರು ಸಂಪುಟಗಳಲ್ಲಿ ೧೬೦೦ ಪುಟಗಳ 'ಸಮರಸವೇ ಜೀವನ' ಎಂಬ ಬೃಹತ್ ಕಾದಂಬರಿಯಾಗಿ ಬೆಳೆಯಿತು. ಆಧುನಿಕ ಜಗತ್ತಿನ ಯವಕರ ಬದುಕಿನ ಆದರ್ಶಗಳು 'ಸಮರಸವೇ ಜೀವನ' ಕಾದಂಬರಿಯಲ್ಲಿ ಮೂಡಿಬಂದಿದೆ.

ಅನಕೃ ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದು ಕಾದಂಬರಿಯ ಕ್ಷೇತ್ರ ವಿಸ್ತಾರಕ್ಕೆ ಕಾರಣರಾದವರು. ಪ್ರಗತಿಶೀಲ ಚಳುವಳಿಯ ನೇತಾರರಾಗಿ ಆದರ್ಶ ಮತ್ತು ವಾಸ್ತವದ ಸಮತೋಲನವನ್ನು ಕಾದಂಬರಿಗಳಲ್ಲಿ ತರಲು ಯತ್ನಿಸಿದರು. ಇವರ ಕಾದಂಬರಿಗಳು ವಸ್ತು ವೈವಿಧ್ಯತೆಯಿಂದ ಕೂಡಿವೆ. ಸಮಾಜದಲ್ಲಿ ನಡೆಯುವ ಅನೇಕ ಸಮಸ್ಯೆಗಳಿಗೆ ವಾಸ್ತವಿಕತೆಯನ್ನು ಮೀರುವಂತೆ ಕುಟುಂಬ, ಗ್ರಾಮ, ನಗರ, ಕಲಾವಿದರ, ವೇಶ್ಯೆಯರ, ಅಸ್ಪೃಶ್ಯರ ಸಮಸ್ಯೆಗಳನ್ನು, ಶೀಲ - ಅಶ್ಲೀಲದ ಸಂಕೋಚ ತೊರೆದು ಎಲ್ಲ ಅನುಭವವನ್ನು ಬಳಸಿಕೊಂಡು ಸಮಸ್ಯೆಗಳ ನಿರೂಪಣೆಗೂ, ಸಾಮಾಜಿಕ ಕ್ರಾಂತಿಗೂ ಸಾಧನವನ್ನಾಗಿ ಬಳಸಲು ಯತ್ನಿಸಿದರು. ಇವರ 'ನಟ ಸಾರ್ವಭೌಮ' ಕಲಾವಿದನ ಚಿತ್ರಣವಿದೆ. 'ಮಂಗಳ ಸೂತ್ರ', 'ಕಣ್ಣೀರು', ಸ್ತ್ರೀಯನ್ನು ಕುರಿತ ಉತ್ತಮವಾದ ಕೃತಿಗಳು. ಗೌರವಸ್ಥರು ಬಚ್ಚಿಡುವ ಸಣ್ಣ ವಸ್ತುವನ್ನೇ ಕಥೆಯಾಗಿಸಿದವರು. ಆಸಕ್ತಿ ಹುಟ್ಟುವಂತೆ ಕಥೆ ಹೇಳುವ ಇವರ ಶೈಲಿ ಸಾವಿರಾರು ಓದುಗರನ್ನು ಸೃಷ್ಟಿ ಮಾಡಿತಾದರೂ ಇವರು ಕಥೆಯು ಅರ್ಥದತ್ತ ಗಮನ ಕೊಡದೆ, ಜೀವನದ ಅನುಭವವಿಲ್ಲದ ಪಾತ್ರಗಳು ಸೃಷ್ಟಿಯಾಗಿ, ಗೊತ್ತುಗುರಿ ಇಲ್ಲದವಾಗಿ ಓದಿ ಮರೆಯುವ ಮಟ್ಟಕ್ಕೆ ಇಳಿದವು. ಸಾಮಾಜಿಕ ಸಮಸ್ಯೆಗಳನ್ನು ಅತಿಯಾಗಿ ಗ್ರಹಿಸಿದ್ದರಿಂದ ಅವು ವಾಸ್ತವದಿಂದ ದೂರ ಸರಿದವು. ಆದರೆ ಕಾದಂಬರಿ ಪ್ರಕಾರವನ್ನು ಜನರು ಓದುವಂತೆ ಮಾಡಿದ ಕೀರ್ತಿ ಅನಕೃ ಅವರಿಗೆ ಸಲ್ಲುತ್ತದೆ.

ಶ್ರೀನಿವಾಸರ 'ಸುಬ್ಬಣ್ಣ' ಶ್ರೀರಂಗರ 'ವಿಶ್ವಾಮಿತ್ರಸೃಷ್ಟಿ', 'ಪುರುಷಾರ್ಥ', ದೇವುಡು ಅವರ 'ಅಂತರಂಗ', 'ಮಹಾ ಬ್ರಾಹ್ಮಣ', ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕನ್ನಡದ ಉತ್ತಮ ಕಾದಂಬರಿಗಳಾಗಿವೆ. ಇವಲ್ಲದೆ, ಕಂಡೆಗೋಡ್ಲು ಶಂಕರಭಟ್ಟರ 'ಧೂಮಕೇತು', 'ದೇವತಾ ಮನುಷ್ಯ', 'ಲೋಕದ ಕಣ್ಣು', ನಾ.ಕಸ್ತೂರಿಯವರ 'ಗಾಳಿಗೋಪುರ', 'ಚಕ್ರವೃಷ್ಟಿ', 'ಶಂಖವಾದ್ಯ', 'ಚಂಗೂಲಿ ಚೆಲುವ' ಮೊದಲಾದ ಸಾಮಾಜಿಕ ಕಾದಂಬರಿಗಳಲ್ಲಿ ವಿಡಂಬನೆ ತಂದು ಬರೆದದ್ದು ಗಮನಾರ್ಹ.

ಸ್ವಾತಂತ್ರ್ಯ ಪೂರ್ವದಲ್ಲಿ ಬರೆದ ಹಲವು ಪ್ರಮುಖ ಕಾದಂಬರಿಕಾರರು ಸ್ವಾತಂತ್ರ್ಯ ಬಂದ ನಂತರದಲ್ಲಿಯೂ ಸತ್ವಶಾಲಿ ಕಾದಂಬರಿಗಳನ್ನು ಬಹುಸಂಖ್ಯೆಯಲ್ಲಿ ಬರೆದಿದ್ದಾರೆ. ವಸ್ತು, ಶೈಲಿ, ತಂತ್ರಗಳಲ್ಲಿ ವೈವಿಧ್ಯ ತಂದರು. ಸಾಮಾಜಿಕ ಕಾದಂಬರಿಗಳ ಜೊತೆಗೆ ಐತಿಹಾಸಿಕ, ಪೌರಾಣಿಕ, ಪತ್ತೇದಾರಿ ಕಾದಂಬರಿಗಳೂ ರಚನೆಯಾಗಿವೆ.

ಪ್ರಗತಿಶೀಲವೆನ್ನಬಹುದಾದ ಈ ಪಂಥದಲ್ಲಿ ದೇಶದಲ್ಲಿ ನಡೆದ ರಾಜಕೀಯ ಹೋರಾಟ ಮತ್ತು ಸ್ವಾತಂತ್ರ್ಯ ಚಳುವಳಿಯನ್ನು ಕುರಿತ ಕೆಲವು ಕಾದಂಬರಿಗಳು ಕನ್ನಡದಲ್ಲಿ ಬಂದವು, ಶಿವರಾಮ ಕಾರಂತರ 'ಔದಾರ್ಯದ ಉರುಳಲ್ಲಿ'(೧೯೪೭), ರಾಜಕೀಯ ಹಾಗೂ ಶೈಕ್ಷಣಿಕ ರಂಗದಲ್ಲಿ ನಡೆದ ಪ್ರಯೋಗಗಳ ಸೋಲು ಗೆಲುವುಗಳ ಮಾರ್ಮಿಕ ಚಿತ್ರವಿದೆ. ಮಿರ್ಜಿ ಅಣ್ಣಾರಾಯರ 'ಪ್ರತಿ ಸರಕಾರ', 'ರಾಷ್ಟ್ರ ಪುರುಷ', ಬಸವರಾಜ ಕಟ್ಟೀಮನಿಯವರ 'ಸ್ವಾತಂತ್ರ್ಯದೆಡೆಗೆ', 'ಮಾಡಿಮಡಿದವರು', ತ.ರಾ.ಸು. ಅವರ 'ರಕ್ತ ತರ್ಪಣ', ಕೋ.ಚೆನ್ನಬಸಪ್ಪನವರ 'ರಕ್ತತರ್ಪಣ', ಪ.ಸು.ಭಟ್ಟರ 'ಆತ್ಮಾರ್ಪಣೆ', ನಿರಂಜನರ 'ಚಿರಸ್ಮರಣೆ' ಮೊದಲಾದವು ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿಯನ್ನು ಉತ್ಸಾಹದಿಂದ ನಿರೂಪಿಸುತ್ತವೆ. ೧೯೪೨ರ ಆಗಸ್ಟ್ ತಿಂಗಳು ಮುಂಬೈಯಲ್ಲಿ ನಡೆದ ಚಳುವಳಿಯ ಹಿನ್ನೆಲೆಯಲ್ಲಿ ರಚಿತವಾದ ಕಾದಂಬರಿಗಳು ವಿ.ಎಂ. ಇನಾಂದಾರರ 'ಮೂರಾಬಟ್ಟೆ', ಅನಕೃ ಅವರ 'ಅಮರ್‌ಆಗಸ್ಟ್', ಶ್ರೀರಂಗರ 'ಪುರುಷಾರ್ಥ' ಮತ್ತು 'ಕುಮಾರ ಸಂಭವ' ಇವೇ ಮೊದಲಾದ ಕಾದಂಬರಿಗಳಲ್ಲಿ ವಿಶಿಷ್ಟ ತಂತ್ರಗಳನ್ನು ಅಳವಡಿಸಿಕೊಂಡು ರಾಜಕೀಯ ಹೋರಾಟ ಮತ್ತು ಬದುಕಿನ ಚಿತ್ರಗಳನ್ನು ಕೊಡಲಾಗಿದೆ. ಮೇಲಿನವುಗಳನ್ನೇ ಹೋಲುವ ನಾಗವೇಣಿಯವರ 'ಗಾಂಧಿಬಂದ' (೧೯೯೯) ಮತ್ತು ವ್ಯಾಸರಾಯಬಲ್ಲಾಳರ 'ಹೆಜ್ಜೆ'(೨೦೦೦) ಕಾದಂಬರಿಗಳು ಸ್ವಾತಂತ್ರ್ಯ ಪೂರ್ವದ ಸಾಮಾಜಿಕ ವಾಸ್ತವವನ್ನು ಸ್ವಾತಂತ್ರ್ಯ ನಂತರದ ಸುಮಾರು ಅರ್ಧದಶಕದ ನಂತರ ಬರೆದಿರುವುದು ಕುತೂಹಲವಾಗಿದೆ. 'ಔದಾರ್ಯದ ಉರುಳಲ್ಲಿ' ಕಾದಂಬರಿಯನ್ನು ಕುರಿತು "ಕಾರಂತರು ನಿಜವಾದ ಅರ್ಥದಲ್ಲಿ ರಾಜಕಾರಣದ ತಾಯಿ ಬೇರನ್ನೇ ಅರಸುವ ರಾಜಕೀಯ ಕಾದಂಬರಿಗಳನ್ನೇ ಬರೆದಿಲ್ಲ

ಎನ್ನುವ ಡಿ.ಎಸ್.ನಾಗಭೂಷಣ ಅವರ ಮಾತನ್ನೇ ಸಮರ್ಥಿಸುತ್ತಾ - ಇದು ಕಾರಂತರ ಮಟ್ಟಿಗೆ ಸೀಮಿತವಾಗಿರದೆ ಎಲ್ಲ ಭಾರತೀಯ ಕಾದಂಬರಿಕಾರರಿಗೂ ಅನ್ವಯಿಸುವಂಥ ಮಾತು. ನಮ್ಮ ರಾಜಕೀಯ ಕಾದಂಬರಿಗಳು ಐತಿಹಾಸಿಕ ಕಾದಂಬರಿಗಳೇ ಆಗಿವೆ"(ಆಮೂರ ಜಿ.ಎಸ್., ೧೯೯೪, ಪು.೧೫೪)ಎನ್ನುವ ಮಾತು ಇತ್ತೀಚಿನ 'ಗಾಂಧಿ ಬಂದ' ಮತ್ತು 'ಹೆಜ್ಜೆ' ಕಾದಂಬರಿಗಳನ್ನು ಬರೆದ ಲೇಖಕರಿಗೂ ಅನ್ವಯಿಸುವುದು ಸರಳವಾಗುತ್ತದೆ. ಸಮಕಾಲೀನ ವಾಸ್ತವವನ್ನು ಗ್ರಹಿಸಲಾಗಿದೆ. ಕೇವಲ ಸ್ವಾತಂತ್ರ್ಯ ಹೋರಾಟ, ರಾಜಕೀಯ ಮಾತ್ರವಿಲ್ಲ. ಬದಲಾಗಿ ಸಾಮಾಜಿಕ ಬದುಕನ್ನು ನೋಡಲಾಗಿದೆ. 'ಗಾಂಧಿಬಂದ' ಕಾದಂಬರಿಯಲ್ಲಿ ತುಳುನಾಡಿನ ಸಾಂಸ್ಕೃತಿಕ ಲೋಕ ಮರುಸೃಷ್ಟಿ ಗೊಂಡಿದೆ.

ಒಟ್ಟಿನಲ್ಲಿ ಪ್ರಗತಿಶೀಲ ಕಾದಂಬರಿಕಾರರು ಜನಪ್ರಿಯ ರೀತಿಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ನಿರೂಪಿಸುವಲ್ಲಿ ಹೆಚ್ಚಾಗಿ ಉತ್ಸಾಹವನ್ನೇ ತೋರಿಸಿದರು. ಭಾಷೆಯ ಬಳಕೆ ಪಾತ್ರಗಳ ಸ್ವಭಾವದಲ್ಲಿ ಸೂಕ್ಷ್ಮತೆಯನ್ನು ತೋರಲಿಲ್ಲ. ಆದರೂ ನಾಡಿನ ಗ್ರಾಮ ಜೀವನ, ಕಾರ್ಮಿಕ ಸಮಸ್ಯೆ ಮೊದಲಾದ ಅನುಭವದ ಜೀವನವನ್ನು ಚಿತ್ರಿಸಿದರು. ನಿರ್ಗತಿಕರ ಸಮಸ್ಯೆಗಳನ್ನು ಕಾದಂಬರಿಯಲ್ಲಿ ತಂದರು. ಕಲಾತ್ಮಕತೆಗೆ ಗಮನ ಕೊಡಲಿಲ್ಲ. ಸಮಸ್ಯೆಯ ಆಳಕ್ಕೆ ಇಳಿಯಲಿಲ್ಲ ಎಂಬ ಮಾತುಗಳು ವಿಮರ್ಶಕರಿಂದ ಬಂದಿವೆ.

ಬಿ.ವೆಂಕಟಾಚಾರ್ಯರು ಹಾಗೂ ಗಳಗನಾಥರ ನಂತರ ಐತಿಹಾಸಿಕ ಕಾದಂಬರಿಗಳು ಕುಂಟಿತವಾದರೂ ಇತಿಹಾಸಕ್ಕೆ ವರ್ತಮಾನದ ಅಂಶಗಳನ್ನು ಸೇರಿಸಿ ಮುಂದಿನ ಕಾದಂಬರಿಕಾರರು ಕೃತಿ ರಚನೆ ಮಾಡಿದರು. ಶ್ರೀನಿವಾಸರ 'ಚೆನ್ನಬಸವನಾಯಕ' ಕೆಳದಿ ಅರಸರನ್ನು ಕುರಿತದ್ದು. ಇಷ್ಟೇ ಮಹತ್ವದ ಇವರ ಇನ್ನೊಂದು ಕೃತಿ 'ಚಿಕ್ಕ ವೀರರಾಜೇಂದ್ರ', ತರಾಸು ಅವರ 'ಹಂಸಗೀತೆ', 'ಕಂಬನಿ ಕುಯಿಲು', 'ರಕ್ತರಾತ್ರಿ', 'ತಿರುಗು ಬಾಣ', 'ಹೊಸ ಹಗಲು', 'ದುರ್ಗಾಸ್ತಮಾನ' ಈ ಕೃತಿಗಳು ಚಿತ್ರದುರ್ಗದ ಇತಿಹಾಸವನ್ನು ಕುರಿತು ಬರೆದಂತ ಮಹತ್ವದ ಕೃತಿಗಳು. ಕೆ.ವಿ. ಅಯ್ಯರ್ ಅವರ 'ಶಾಂತಲಾ' ಹೊಯ್ಸಳರ ವಿಷ್ಣುವರ್ಧನನ ಪಟ್ಟದರಸಿ ಶಾಂತಲಾಳ ಜೀವನ ಚಿತ್ರಣ ಇದರ ಕಥಾವಸ್ತು. ಜಿ. ಪುಟ್ಟಸಾಮಯ್ಯನವರ 'ಕಲ್ಯಾಣ ಕ್ರಾಂತಿ', 'ನೂರ್ಮಡಿ ತೈಲಪ', ಸಮೇತನಹಳ್ಳಿ ರಾಮರಾಯರ 'ಸವತಿ ಗಂಧವಾರಣೆ' ಸೂರ್ಯನಾಥ ಕಾಮತ್, ಶ್ರೀನಿವಾಸರಾವ್ ಮೊದಲಾದವರು ಉತ್ತಮ ಕೃತಿಗಳನ್ನು ರಚಿಸಿದರು. ಈ ಎಲ್ಲಾ ಐತಿಹಾಸಿಕ ಕಾದಂಬರಿಗಳ ಉದ್ದೇಶ ಕನ್ನಡಿಗರ ಗತವೈಭವವನ್ನು ನೆನಪಿಗೆ ತರುವಂಥದ್ದು ಹಾಗೂ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸುವಂತದ್ದಾಗಿತ್ತು.

ಪೌರಾಣಿಕ ವಸ್ತುವನ್ನು ಆಧರಿಸಿ ಹೊಸ ಅಲೆಯಲ್ಲಿ ಉತ್ತಮ ಕಾದಂಬರಿಗಳನ್ನು ರಚಿಸಿದವರಲ್ಲಿ ದೇವುಡು (ಮಹಾಬ್ರಾಹ್ಮಣ, ಮಹಾಕ್ಷತ್ರಿಯ). ಜನಾರ್ಧನ ಗುರ್ಕಾರ (ಚೂಡಾಲ), ತರಾಸು (ಬೆಳಕು ತಂದ ಬಾಲಕ, ಅಗ್ನಿರಥ, ಮುಕ್ತಪಥ), ಎಚ್.ತಿಪ್ಪೇರುದ್ರಸ್ವಾಮಿ (ಕದಳಿಯ ಕರ್ಪೂರ, ಜ್ಯೋತಿ ಬೆಳಗುತಿವೆ, ಪರಿಪೂರ್ಣದೆಡೆಗೆ) ಮೊದಲಾದವರನ್ನು ಹೆಸರಿಸಬಹುದು. ಶರಣರ ಬದುಕಿನ ಆದರ್ಶಗಳನ್ನು ಮೈತುಂಬಿ ಎಚ್.ತಿಪ್ಪೇರುದ್ರಸ್ವಾಮಿ ಅವರು ಅನೇಕ ಕಾದಂಬರಿಗಳನ್ನು ಬರೆದರು. ಆದರೆ ಸಮಕಾಲೀನ ದೃಷ್ಟಿಯಿಂದ ಚರಿತ್ರೆಯನ್ನು ಇವರು ನೋಡಲಿಲ್ಲ. ಕೇವಲ ಭಕ್ತಿ, ಆದರ್ಶವನ್ನೇ ಮುಂದು ಮಾಡಿ ರಚಿಸಿದರು.

ಪ್ರಗತಿಶೀಲ ಪಂಥದವರು ಆಧುನಿಕ ಸಾಹಿತ್ಯದಲ್ಲಿ ಅವರೆಗೂ ಇರದೇ ಇರುವ ನೂತನ ಕೇಂದ್ರ ಭಾವವನ್ನು ತಂದು ಕೊಟ್ಟಿತು. ಸುತ್ತಲಿನ ಕೊಳೆಯನ್ನು ತೆಗೆದು ಹಾಕಲು ಸಾಮಾನ್ಯರ ಜೀವನವನ್ನೇ ವಸ್ತುವನ್ನಾಗಿಸಿಕೊಂಡು, ಮಠ, ಮನೆ, ಬೀದಿಗಳಲ್ಲಿ ನಡೆಯುವ ಮೋಸ, ಲೈಂಗಿಕ ಜೀವನದಲ್ಲಿ ನಡೆಯುವ ಅನ್ಯಾಯ, ಕಾರ್ಖಾನೆಗಳಲ್ಲಿ ನಡೆಯುವ ಮೋಸ - ಆಷಾಡಭೂತಿತನವನ್ನು ಎತ್ತಿ ತೋರಿಸಿದರು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಹಿಳೆಯರ ಕಾದಂಬರಿ ರಚನೆಗೆ ಕೈಹಾಕಿದರು. ತ್ರಿವೇಣಿ, ಎಂ.ಕೆ.ಇಂದಿರಾ, ಎಚ್.ವಿ.ಸಾವಿತ್ರಮ್ಮ ಇವರ ಕೃತಿಗಳು ತಮ್ಮ ಹಿಂದಿನ ಕಾದಂಬರಿ ಪರಂಪರೆಗೆ ಹೊಂದಿಕೊಂಡರೂ ಕೆಲವು ಕೃತಿಗಳಲ್ಲಿ ಮಹಿಳಾ ಪ್ರಜ್ಞೆಯೊಂದು ರೂಪಗೊಳ್ಳುವುದನ್ನು ಗುರುತಿಸಬಹುದು. ತ್ರಿವೇಣಿಯವರು ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಮನಃಶಾಸ್ತ್ರೀಯ ತಿಳುವಳಿಕೆಯನ್ನು ಬಳಸಿ, ಬರೆಯಲು ಪ್ರಯತ್ನಿಸಿದವರು. 'ಶರಪಂಜರ', 'ಹಣ್ಣೆಲೆ ಚಿಗುರಿದಾಗ', 'ಬೆಕ್ಕಿನ ಕಣ್ಣು', 'ಬೆಳ್ಳಿ ಮೋಡ' ಇವು ವಿಶಿಷ್ಟವಾದ ಕೃತಿಗಳು. ಎಂ.ಕೆ.ಇಂದಿರಾರ 'ಗೆಜ್ಜೆಪೂಜೆ', 'ತುಂಗಭದ್ರಾ'. ಸಿ.ಎನ್.ಜಯಲಕ್ಷ್ಮೀ ದೇವಿಯ 'ಗ್ರಾಮಲೀಲೆ', ಎಚ್.ಎಸ್.ಪಾರ್ವತಿ, ಅನುಪಮಾ ನಿರಂಜನ್, ವಾಣಿ, ಗೀತಾ ಕುಲಕರ್ಣಿ, ಕೆ.ಸರೋಜರಾವ್, ವಿ.ಪಿ. ಮಾಲತಿ, ವೀಣಾ, ಇನ್ನೂ ಮೊದಲಾದ ಮಹಿಳಾ ಕಾದಂಬರಿಕಾರರು ಹೊಸ ಅಲೆಯಲ್ಲಿ ಕಾದಂಬರಿಗಳನ್ನು ರಚಿಸುತ್ತಿದ್ದಾರೆ. ಮಹಿಳೆಯರು ತಮ್ಮ ಸೀಮಿತ ಅನುಭವಗಳನ್ನು ಕಾದಂಬರಿಗಳ ಮೂಲಕ ಅಭಿವ್ಯಕ್ತಿಸಿದ್ದೇ ದೊಡ್ಡ ಸಾಧನೆಯಾಯಿತು.

ಸಣ್ಣ ಕತೆಯಲ್ಲಿ ಮೊದಲು ಕಾಣಿಸಿಕೊಂಡ 'ನವ್ಯತೆ' ನಂತರ ಕನ್ನಡ ಕಾದಂಬರಿಯಲ್ಲಿ ಪ್ರಭಾವಿಯಾಗಿ ಕಂಡುಬಂದದ್ದು ಶಾಂತಿನಾಥ ದೇಸಾಯಿ ಅವರ 'ಮುಕ್ತಿ'(೧೯೬೦) ಯಿಂದ. ಇಲ್ಲಿಂದ ನವ್ಯ ಕಾದಂಬರಿಗಳು ಪ್ರಾರಂಭವಾದವು. ನವ್ಯ ಕಾದಂಬರಿಯ ಸಮಸ್ಯೆಗಳು ವೈಯಕ್ತಿಕವಾದವು.

ವ್ಯಕ್ತಿಯ ಆಳದಲ್ಲಿ ನಡೆಯುತ್ತಿರುವ ಗೊಂದಲ, ತುಮುಲವನ್ನು ಮನಃಶಾಸ್ತ್ರೀಯ ಹಿನ್ನೆಲೆಯಲ್ಲಿ 'ಫ್ರಾಯ್ಡ್'ನ ಥಿಯೇರಿಯನ್ನು ಆಧರಿಸಿ ಹುಟ್ಟು, ಸಾವು, ಕಾಮ, ಹಸಿವೆ ಮುಂತಾದ ಮನುಷ್ಯನ ಗುಣಗಳನ್ನು ವಸ್ತುವನ್ನಾಗಿ ಮಾಡಿ ವ್ಯಕ್ತಿಯ ಅಂತರಂಗದ ವಿಶ್ಲೇಷಣೆ ನಡೆಸಲು ಪ್ರಯತ್ನಿಸುತ್ತಾರೆ. ಈ ಘಟ್ಟದಲ್ಲಿ ಹಲವಾರು ಕಾದಂಬರಿಗಳು ಬಂದಿವೆ. ಶಾಂತಿನಾಥದೇಸಾಯಿಯವರ 'ಮುಕ್ತಿ', ಚಿತ್ತಾಲರ 'ಶಿಖಾರಿ', ಗಿರಿಯವರ 'ಗತಿಸ್ಥಿತಿ', ಅನಂತಮೂರ್ತಿಯವರ 'ಸಂಸ್ಕಾರ', ಕುಸುಮಾಕರ ದೇವರ ಗಣ್ಣೂರು ಅವರ 'ನಾಲ್ಕನೇ ಆಯಾಮ', ಶ್ರೀ ಕೃಷ್ಣ ಆಲನಹಳ್ಳಿಯವರ 'ಕಾಡು' ಗಮನಿಸಬೇಕಾದ ಕೃತಿಗಳು.

'ಮುಕ್ತಿ'ಯ ಶ್ರೀಕಾಂತ ತಾನು ಓದಿನಿಂದ ಪಡೆದುಕೊಂಡ ಆದರ್ಶಗಳೂ, ತಾನು ಬದುಕುವ ರೀತಿಯ ಆದರ್ಶಗಳಲ್ಲಿ ಕಂದಕವುಂಟಾಗಿರುವುದನ್ನು ಗುರುತಿಸಿಕೊಂಡು ಆತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆವನ ಆದರ್ಶವನ್ನು ಮೆಚ್ಚಿದ ಗೌರೀಶ ತನ್ನ ಆದರ್ಶವನ್ನು ಗತಕಾಲದ ಅನುಭವಗಳಿಂದ ಕಂಡುಕೊಳ್ಳಲು ಸಾಧ್ಯವಾಗಿ ಒಂದು ಬಗೆಯ ಮುಕ್ತಿ ಹೊಂದುತ್ತಾನೆ. ವ್ಯಕ್ತಿಯ ಅನುಭವಕ್ಕೆ ಅರ್ಥಕೊಡುವ ಮೂಲಕ ಒಳಗಿನ ಬೆಳವಣಿಗೆ ಲೇಖಕರ ಮುಖ್ಯ ಕಾಳಜಿಯಾಗಿ ಕೃತಿಯಲ್ಲಿ ವ್ಯಕ್ತವಾಗಿದೆ.

'ಮೂರು ದಾರಿಗಳು' ಮೂಲಕ ಕಾದಂಬರಿಯನ್ನು ಪ್ರವೇಶಿಸಿದ ಚಿತ್ತಾಲರ 'ಶಿಕಾರಿ' ಮಹತ್ವದ ಕೃತಿ. ವ್ಯಕ್ತಿ ಮತ್ತು ಸಮಾಜಗಳ ನಡುವಿನ ಕಂದರವೇ ಶಿಕಾರಿಯ ಕೇಂದ್ರ ಪ್ರತಿಮೆ. ಮನುಷ್ಯನಿಂದ ಮನುಷ್ಯನ ಬೇಟೆಯಾಗುವುದು ಕಾದಂಬರಿಯುದ್ದಕ್ಕೂ ಅನೇಕ ಸಂದರ್ಭಗಳಲ್ಲಿ ಅದು ಕಾಣಿಸಿ ಕೊಳ್ಳುತ್ತದೆ. ಕಾದಂಬರಿಯ ಮುಖ್ಯ ಪಾತ್ರ ನಾಗಪ್ಪ ಅವನು ಕಲಿತಿದ್ದು ವಿಜ್ಞಾನವಾದರೂ ಮನಃ ಶಾಸ್ತ್ರ, ನಿಸರ್ಗ, ಸಾಹಿತ್ಯ ಎಲ್ಲದರಲ್ಲಿ ಇವನ ಬುದ್ಧಿವಂತಿಕೆ ಕಂಡುಬರುತ್ತದೆ. ಸ್ವಾರ್ಥ, ಮೋಸಗಳಿಂದ ಕೂಡಿದ ಒಂದು ತಂಡವೇ ಇವನ ವ್ಯಕ್ತಿತ್ವದ ನಾಶಕ್ಕೆ ಬೆನ್ನು ಹತ್ತುತ್ತದೆ. ನಾಗಪ್ಪನ ಒಳ ಮನಸ್ಸಿನ ತಾಕಲಾಟಗಳನ್ನು ದಾಖಲು ಮಾಡುವಲ್ಲಿ ವ್ಯಕ್ತಿ-ಸಮಾಜದ ನಡುವೆ ಸಂಘರ್ಷವನ್ನು ತೋರಿಸುವಲ್ಲಿ ಚಿತ್ತಾಲರ ಪ್ರತಿಭೆ ದುಡಿದಿದೆ ಎನ್ನುವ ವಿಮರ್ಶಕರ ಮಾತು ನಿಜವಾದದ್ದು.

ಹೆಚ್ಚು ಚರ್ಚೆಗೆ ಒಳಗಾದ ಅನಂತಮೂರ್ತಿಯವರ 'ಸಂಸ್ಕಾರ' ಅವರ ಮೊದಲ ಮಹತ್ವದ ಕೃತಿ. ಸಂಸ್ಕಾರದ ಕೇಂದ್ರ ಪಾತ್ರ ಪ್ರಾಣೇಶಾಚಾರ್ಯರು. ಧರ್ಮಶಾಸ್ತ್ರವನ್ನು ಬಲ್ಲ ಇವರು ಸಂಪ್ರದಾಯದ ನಿಷ್ಠೆಯ ಜೀವನ ನಡೆಸುತ್ತಾ, ಪುರಾಣ, ಅಧ್ಯಾತ್ಮಿಕ ಚಿಂತನೆ ಇವುಗಳಲ್ಲಿ ಬಾಳು ನಡೆಸುವ ಅವರಿಗೆ, ಎಲ್ಲ ಭೋಗ ಜೀವನ ನಡೆಸುವ ನಾರಯಣಪ್ಪ ಪ್ರತಿಸ್ಪರ್ಧಿಯಾಗಿ ಚಿತ್ರಿತನಾಗಿದ್ದಾನೆ.

ನಾರಾಯಣಪ್ಪನ ಮರಣದ ನಂತರ ಆತನ ಹೆಂಡತಿ ಚಂದ್ರಿಯಿಂದ ನಿಸರ್ಗ ಸಂಬಂಧ ಸಿಕ್ಕ ಆಚಾರ್ಯರಿಗೆ ಹೊಸ ಅರಿವಿನ ಉದಯವಾಗುವುದರೊಂದಿಗೆ ಕತೆ ಮುಗಿಯುತ್ತದೆ. ಸನ್ನಿವೇಷದ ಭಾಷೆ, ವ್ಯಕ್ತಿನಿಷ್ಠ ಗ್ರಹಿಕೆ ಹಾಗೂ ಆದರ್ಶದ ಪರಕೀಯತೆ ಅಮೂರ್ತತೆಗಳಿಂದಾಗಿ 'ಸಂಸ್ಕಾರ' ಅಷ್ಟೇ ಉಜ್ವಲವಾದ ಬರವಣಿಗೆಯಿಂದ ಕಾದಂಬರಿ ಗಮನಿಸುವಂತದ್ದು.

ತೇಜಸ್ವಿಯವರ 'ಕರ್ವಾಲೋ' ಕಾದಂಬರಿಯಲ್ಲಿ ಕಾದಂಬರಿಕಾರನೇ ನಿರೂಪಕನಾಗಿ ಕತೆಯ ಮಹತ್ವದ ಪಾತ್ರವೂ ಆಗಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಯಾವುದೋ ಹೂವಿನಾಳದ ಮಕರಂದ ತಂದು ಹುಟ್ಟುಕಟ್ಟಿ ಜೇನು ತುಂಬುವ ಜೇನು ಹುಳುಗಳ ಕ್ರಿಯೆಯು ಪ್ರಕೃತಿಯ ಅದ್ಭುತಗಳಲ್ಲಿ ಒಂದು. ತೀರ ಕ್ಷುಲ್ಲಕವೆಂದು ಕಡೆಗಣಿಸಿರುವ ಕೀಟ ಜಗತ್ತಿನ ಅದ್ಭುತವನ್ನು ಅನಾವರಣಗೊಳಿಸುವುದರ ಮೂಲಕ ಪ್ರಾರಂಭವಾಗುವ ಕಾದಂಬರಿ. ಪ್ರಾಚೀನವಾದ ಪ್ರಾಣಿಯೊಂದನ್ನು ಸಂಶೋಧಿಸಿ ಸೃಷ್ಟಿ ವಿಕಾಸದ ಹಂತಗಳನ್ನು ಹುಡುಕುವ ಸಾಹಸಕ್ಕೆ ಕೈ ಹಾಕುತ್ತದೆ. ಇಲ್ಲಿ ಮಂದಣ್ಣ, ಕರ್ವಾಲೋ ಮತ್ತು ನಿರೂಪಕ ಒಬ್ಬರಿಂದೊಬ್ಬರಿಗೆ ಪ್ರಕೃತಿ, ಪರಿಸರದ ಹಲವಾರು ನಿಗೂಢಗಳು ಅರಿವಿಗೆ ಬರ ತೊಡಗುತ್ತವೆ. ಮಂದಣ್ಣನ ಜ್ಞಾನ ಮತ್ತು ಕರ್ವಾಲೋನ ಜ್ಞಾನಗಳ ದಿಕ್ಕು ಬೇರೆ ಬೇರೆ. ಒಬ್ಬನಿಗೆ ಅನುಭಾವವಿದೆ. ಇನ್ನೊಬ್ಬನಿಗೆ ಬೌದ್ಧಿಕ ಜ್ಞಾನವಿದೆ. ಈ ಎರಡು ಶಕ್ತಿಗಳು ಒಂದಾಗಬೇಕೆಂದು ಕಾದಂಬರಿ ಹೇಳುತ್ತದೆ. ಇದು ಕಾದಂಬರಿಯಲ್ಲಿ ವಿಶಿಷ್ಟವಾಗಿ ವ್ಯಕ್ತವಾಗಿದೆ.

ಗಿರಿಯವರ 'ಗತಿಸ್ಥಿತಿ' ಕಾದಂಬರಿ ಬಹುಭಾಗ ತರುಣ-ತರುಣಿ ಎಂಬ ಮುಖ್ಯ ಪಾತ್ರಗಳು. ಕೆಲಸಗಳನ್ನು ಹುಡುಕಿಕೊಂಡು ಬೇರೆ ಊರಿಗೆ ಹೋದ ಅವರಿಬ್ಬರ ಅನುಭವ, ತಪ್ತ ಸ್ಥಿತಿ, ಯಾರು ಯಾರಿಗೆ ಸಂಬಂದವಿಲ್ಲದ ಮನುಷ್ಯ ಪ್ರಪಂಚ ಕಾದಂಬರಿಯಲ್ಲಿ ಬಳಕೆಯಾಗಿದೆ. ಜಿ.ಎಸ್.ಆಮೂರ ಹೇಳುವಂತೆ "ಸುಸೂತ್ರವಾದ ಕತೆ, ಸುಸಂಬದ್ಧವಾದ ಪಾತ್ರಗಳನ್ನು ಸೃಷ್ಟಿಸುವಲ್ಲಿ ಆಸಕ್ತಿ ತೋರಿಲ್ಲ Phenomena ಗಳನ್ನು, Perception ಗಳನ್ನು ಗೊತ್ತು ಗುರಿಯಿಲ್ಲದೆ ದಾಖಲಿಸುತ್ತಾ ಹೋಗುವುದರ ಲ್ಲಿಯೇ ಅವನು ತೃಪ್ತಿ ಪಡುತ್ತಾನೆ. ಆದರೆ ಭಾಷೆಯ ಮೂಲಕ ಸಂವಹನ ಮಾಡುವಲ್ಲಿ ಯಶಸ್ವಿಯಾದ ಕೃತಿಯಾಗಿದೆ"(ಆಮೂರ ಜಿ.ಎಸ್., ೧೯೯೪, ಪು.೪೮-೧೦)ಎಂದಿದ್ದಾರೆ.

'ಕಾಡು' ಶ್ರೀ ಕೃಷ್ಣ ಆಲನಹಳ್ಳಿಯವರ ಕಾದಂಬರಿಗಳಲ್ಲಿ ಮಹತ್ವದ ಕೃತಿ. ಪ್ರಕೃತಿಯ ಜೊತೆಗಿನ ನಾಗರೀಕತೆಯ ಶೋಧದಲ್ಲಿ ಮಾನವ ಬಹುದೂರ ಬಂದಿದ್ದರೂ ಅವನ ಮೂಲ ಪ್ರವೃತ್ತಿಗಳಾದ ಕಾಮ, ದ್ವೇಷ, ಕ್ರೌರ್ಯಗಳು ಇನ್ನೂ ಅಧಿಮ ಸ್ಥಿತಿಯಲ್ಲಿಯೇ ಇರುವುದು ಅವನ ಜೀವನದ ಒಂದು ದುರಂತ. ಕೊನೆಯಿಲ್ಲದ ಈ ಅವಸ್ಥೆಯನ್ನೇ ಕೊಪ್ಪಲು, ಹೊಸುರುಗಳಂಥ ಕಾಡಿನ

ಮಧ್ಯದಲ್ಲಿರುವ ಗ್ರಾಮಗಳ ಪರಿಸರದಲ್ಲಿ ನಡೆಯುವ ಕ್ರಿಯೆಯನ್ನು ಆಲನಹಳ್ಳಿ ಕಾದಂಬರಿಯ ಮೂಲಕ ಚಿತ್ರಿಸಿದ್ದಾರೆ. ಎರಡು ಹಳ್ಳಿಗಳ ನಡುವಿನ ದ್ವೇಷ, ಲೈಂಗಿಕತೆ, ಅತ್ಯಾಚಾರ, ಶೋಷಣೆ. ಆತ್ಮಹತ್ಯೆಯಂಥ ನೋವಿನ ಅಂಶಗಳು ಕಾದಂಬರಿಯಲ್ಲಿ ಬರುತ್ತವೆ. ಜೀವನ ಕಾಡಿನಂತೆ ರಹಸ್ಯಮಯವೂ ಆಗುತ್ತದೆ. ನೇರವಾಗಿ ಕತೆ ಹೇಳದೆ ಬಾಲಕನ ಪ್ರಜ್ಞೆಯ ಮುಖಾಂತರ ನಮಗೆ ತಲುಪಿಸುತ್ತಾರೆ. ಕಿಟ್ಟಿಯ ಮುಗ್ಧತೆ, ಅವನ ಮನಸ್ಸಿನ ಮೇಲೆ ಪ್ರಭಾವ ಬೀರುವ ರಾಕ್ಷಸ ಲೋಕದ ಅನುಭವಗಳು ಕಥೆಯಲ್ಲಿ ಸಂಕೀರ್ಣತೆಯನ್ನು ಬೆಳೆಸುತ್ತವೆ. ವಿಮರ್ಶಕರು ಗುರುತಿಸಿದ ಹಾಗೆ ಸಂಕೇತಗಳನ್ನು ಬಳಸಿಕೊಳ್ಳುವ ವಿಧಾನ ಯಶಸ್ವಿಯಾಗಿದೆ ಬರವಣಿಗೆ ಸಮರ್ಥವಾಗಿದೆ. ನವ್ಯಮಾರ್ಗದಲ್ಲಿ ಬಂದ ಕಾದಂಬರಿಗಳ ಸಂಖ್ಯೆ ಕಡಿಮೆಯಾದರೂ ಗುಣದಿಂದ ಮಹತ್ವವಾದವು. ಈ ಮಾರ್ಗದಾಚೆ ಹಲವಾರು ಮಂದಿ ಕಾದಂಬರಿಗಳನ್ನು ಬರೆದಿದ್ದಾರೆ.

ನವ್ಯದ ನಂತರ ಬಂದ ದಲಿತ - ಬಂಡಾಯ ಪಂಥದಲ್ಲಿ ಕಾದಂಬರಿ ಪ್ರಕಾರ ಅಷ್ಟೊಂದು ಬೆಳೆಯುತ್ತಿಲ್ಲವಾದರೂ ಕೆಲವು ಲೇಖಕರು ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ದೇವನೂರು ಮಹಾದೇವ ಅವರು ಮಹತ್ವದ ಲೇಖಕರು. ದಲಿತರ ಶೋಷಣೆ, ಬಡತನ, ಹಸಿವು, ಜೀವನದ ವಾಸ್ತವಿಕ ಅನುಭವಗಳನ್ನು ಇವರ ಕೃತಿಗಳಲ್ಲಿ ಸಹಜವಾಗಿಯೇ ಕಾಣಬಹುದು. ಒಣ ಆಕ್ರೋಶ ಪ್ರತಿಭಟನೆ ಯಾಗಿರದೆ ಪರಂಪರಾನುಗತವಾಗಿ ಮೌನದಿಂದ ಸಹಿಸಿಕೊಂಡು ಬಂದ ಶೋಷಣೆಯನ್ನು ಇವರ ಕೃತಿಗಳಲ್ಲಿ ಕಾಣುತ್ತೇವೆಯೇ ಹೊರತು ಪ್ರತಿಭಟನೆ ಎದ್ದು ಕಾಣುವುದಿಲ್ಲ. ಅದು ಸೂಚ್ಯವಾಗಿ ಕಾಣಿಸುತ್ತದೆ. ಇದಕ್ಕೆ ಉತ್ತಮ ನಿದರ್ಶನ ಇವರ 'ಒಡಲಾಳ' ಮತ್ತು 'ಕುಸುಮ ಬಾಲೆ' ಕಾದಂಬರಿಗಳು. ಕ್ರೌರ್ಯವಾಗಲಿ, ಬದುಕಿನ ನೋವಾಗಲಿ, ಮನಮುಟ್ಟುವಂತೆ ದೇವನೂರು ಚಿತ್ರಿಸಿದ್ದಾರೆ.

ಶೋಷಣೆಯ ವಿರುದ್ಧ ಸಿಡಿದೇಳಬೇಕೆಂಬ ಬರಗೂರರ ಕೃತಿಗಳ ನಾಯಕರು ಕೆಲವು ಪರಿಸ್ಥಿತಿಯ ಒತ್ತಡಗಳಿಂದ ಅಸಹಾಯಕರಾಗುತ್ತಾರೆ. ಇನ್ನುಳಿದ ಮಹತ್ವದ ಕಾದಂಬರಿಕಾರರು ಕುಂ ವೀರಭದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಅರವಿಂದ ಮಾಲಗತ್ತಿ, ಚೆನ್ನಣ್ಣ ವಾಲೀಕಾರ. ವೀಣಾ ಶಾಂತೇಶ್ವರ, ಬಿ.ಟಿ. ಲಲಿತಾನಾಯಕ ಮೊದಲಾದವರು ದಲಿತ ಪಂಥದಲ್ಲಿ ಕಾದಂಬರಿಗಳನ್ನು ರಚಿಸುತ್ತಿದ್ದಾರೆ. ಎಲ್ಲ ದಲಿತ ಲೇಖಕರು ಜಾತಿ ಸಮಸ್ಯೆ, ವರ್ಗಸಮಸ್ಯೆ, ದಲಿತರ ಶೋಷಣೆಯ ಜೊತೆಗೆ ಬದುಕಿನ ವಾಸ್ತವದ ಸಮಗ್ರ ಅನುಭವಗಳನ್ನು ತೆಕ್ಕೆಯೊಳಗೆ ತಂದುಕೊಂಡು ವೈವಿಧ್ಯವಾದ ರೀತಿಯಲ್ಲಿ ಕೃತಿಗಳನ್ನು ರಚಿಸುತ್ತಾರೆ. ಇವರ ಕೃತಿಗಳ ಮುಖ್ಯ ಶೋಧ ಸಾಂಸ್ಕೃತಿಕವಾದದ್ದು, ಸಾಮಾಜಿಕ ಪರಿವರ್ತನೆ ಬಯಸುವಂತದ್ದು. ಶೋಷಕರ ಕ್ರೌರ್ಯವನ್ನು, ಶೋಷಣೆಗೊಳಗಾದವರ ಸಿಟ್ಟು, ನೋವುಗಳನ್ನು ದಲಿತ ಬಂಡಾಯದ ಕಾದಂಬರಿಕಾರರು ಚಿತ್ರಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟ ಮತ್ತು ಸಮಕಾಲೀನ ಸಾಮಾಜಿಕ ವಸ್ತುವನ್ನೊಳಗೊಂಡು ಪ್ರಗತಿಶೀಲರ ಕಾಲದಲ್ಲಿ ರಚನೆಯಾದ ಬಸವರಾಜ ಕಟ್ಟೀಮನಿಯವರ 'ಸ್ವಾತಂತ್ರ್ಯದೆಡೆಗೆ', 'ಮಾಡಿ ಮಡಿದವರು', ಕಾರಂತರ 'ಔದಾರ್ಯದ ಉರುಳಲ್ಲಿ', ನಿರಂಜನರ 'ಚಿರಸ್ಮರಣೆ', ಕೋ.ಚೆನ್ನಬಸಪ್ಪನವರ 'ರಕ್ತತರ್ಪಣ' 'ಬೇಡಿ ಕಳಚಿತ್ತು ದೇಶ ಒಡೆದಿತ್ತು' ಕಾದಂಬರಿಗಳು ಬಂದಿವೆ. ಸ್ವಾತಂತ್ರ್ಯಪೂರ್ವದಲ್ಲಿ ಬಂದ ಕೆಲವು ಸ್ವಾತಂತ್ರ್ಯಾಂದೋಲನದ ಕಾದಂಬರಿಗಳಲ್ಲಿ ಗಾಂಧೀಜಿ ಮಾರ್ಗದಲ್ಲಿ ಸ್ವಾತಂತ್ರ್ಯ ಪಡೆಯಲು ಸಾಧ್ಯವಾಗುವುದಿಲ್ಲ. ಅದಕ್ಕೆ ಶಸಸ್ತ್ರ ಹೋರಾಟಬೇಕಾಗುತ್ತದೆ ಎಂಬ ಧೋರಣೆ ಹೊಂದಿದ್ದರು. ಈಗ ಬಂದಿರುವ ನಾಗವೇಣಿಯವರ 'ಗಾಂಧಿಬಂದ'(೧೯೯೯), ವ್ಯಾಸರಾಯ ಬಲ್ಲಾಳರ 'ಹೆಜ್ಜೆ'(೨೦೦೦), ಕಾದಂಬರಿಗಳು ಸ್ವಾತಂತ್ರ್ಯ ಪೂರ್ವದಲ್ಲಿನ ಸಾಮಾಜಿಕ ಸಮಸ್ಯೆಗಳಾದ ವಿಧವಾ ವಿವಾಹ, ಜಾತಿ-ವರ್ಗ ಸಮಸ್ಯೆ, ಸ್ತ್ರೀಯರ ಅಮಾನವೀಯ ಬದುಕು, ಮೌಢ್ಯಗಳು ಮುಂತಾದ ಸಂಗತಿಗಳನ್ನು ಕುರಿತು ಬರೆಯಲಾಗಿದೆ. ಈ ಎರಡು ಕಾದಂಬರಿಗಳ ಅನನ್ಯತೆ ಯಾವುದೆಂದರೆ, ಸ್ವಾತಂತ್ರ್ಯ ಬಂದು ೫೦ ವರ್ಷಗಳಾಗಿ ಹೋದವು. ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿಯನ್ನು ಕುರಿತು ಪ್ರಗತಿಶೀಲರು ಹಲವಾರು ಕಾದಂಬರಿಗಳನ್ನು ಈ ಮೊದಲೇ ಬರೆದು ಪ್ರಕಟಿಸಿದ್ದರೂ ಈ ಸಂದರ್ಭವನ್ನೇ ನೆಲೆಯನ್ನಾಗಿ ಮಾಡಿಕೊಂಡು 'ಹೆಜ್ಜೆ' ಮತ್ತು 'ಗಾಂಧಿಬಂದ' ಕಾದಂಬರಿಗಳು ರಚನೆಗೊಂಡಿವೆ. ಸ್ವಾತಂತ್ರ್ಯ ಬಂದು ಐದುದಶಕಗಳು ಕಳೆದ ಮೇಲೆ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಗಾಂಧಿ ಪ್ರಭಾವದಿಂದ ಆದ ಸಾಮಾಜಿಕ ಪರಿವರ್ತನೆಗಳನ್ನು ಕುರಿತು ಈಗ ಬರೆದಿರುವುದೇ ಕುತೂಹಲಕ್ಕೆ ಕಾರಣವಾಗಿದೆ. ಈ ಎರಡೂ ಕಾದಂಬರಿಗಳ ಕಾಲ, ಸಂದರ್ಭ ಹಾಗೂ ಸ್ಥಳ ಒಂದೇ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಗ್ರಾಮಗಳಲ್ಲಿ ಎಲ್ಲ ಜಾತಿ, ವರ್ಗ, ಸ್ತ್ರೀ ಪುರುಷರ ಬದುಕಿನಲ್ಲಿ ಆದ ಬದಲಾವಣೆಗಳನ್ನು ಹೇಳಿದರೂ ಕೂಡ ಈ ಕಾದಂಬರಿಗಳು ಕೇವಲ ರಾಜಕೀಯ ಕಾದಂಬರಿಗಳಾಗದೆ ಕೌಟುಂಬಿಕ ನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ, ಸಂಸ್ಕೃತಿ ನೆಲೆಯಲ್ಲಿ ಆದ ಪರಿವರ್ತನೆಗಳನ್ನು ಹೇಳುತ್ತದೆ. ಈ ದೃಷ್ಟಿಯಿಂದ ಈ ಎರಡು ಕಾದಂಬರಿಗಳು ೨೦ನೇ ಶತಮಾನದ ಕೊನೆಯ ವರ್ಷಗಳಲ್ಲಿ ಪ್ರಕಟವಾಗಿರುವುದು ವಿಶೇಷವಾಗಿದೆ. 'ಗಾಂಧಿ ಬಂದ' ಕಾದಂಬರಿಯ ವಿಸ್ತಾರ ದೊಡ್ಡದು. ಸಾಂಸ್ಕೃತಿಕವಾಗಿಯೂ ಮಹತ್ವದ್ದು. 'ಹೆಜ್ಜೆ' ಕಾದಂಬರಿಯಲ್ಲಿ ಕೇವಲ ಒಂದು ಬ್ರಾಹ್ಮಣ ಮನೆತನವನ್ನು ಕೇಂದ್ರವಾಗಿಟ್ಟು ಗಾಂಧಿಯ ಆದರ್ಶಗಳು ಹೇಗೆ ಪರಿಶೀಲನೆಗೆ ಒಳಗಾಗುತ್ತದೇ ಮತ್ತು ಸಂಪ್ರದಾಯವನ್ನು ಮೀರುವಂತೆ ಬದುಕು ವಿಸ್ತಾರವಾಗು ವುದನ್ನು ಹೇಳುತ್ತದೆ. ಈ ದೃಷ್ಟಿಯಿಂದ ೯೦ರ ದಶಕದಲ್ಲಿ ಬಂದ ಈ ಎರಡು ಕಾದಂಬರಿಗಳು ಕನ್ನಡ ಕಾದಂಬರಿ ಪರಂಪರೆಯನ್ನು ಬಲಪಡಿಸಿವೆ.

ಅಧ್ಯಾಯ ೨

ಎರಡು ಕಾದಂಬರಿಗಳ ಪರಿಸರಗಳು

ಕನ್ನಡ ಕಾದಂಬರಿ ಪ್ರಪಂಚ ವಿಶಾಲವಾಗಿದೆ. ವೈವಿಧ್ಯತೆಯಿಂದ ಕೂಡಿದೆ. ಕನ್ನಡ ನಾಡಿನ ಮೂಲೆ ಮೂಲೆಗಳನ್ನು, ಅದರ ಸಾಂಸ್ಕೃತಿಕ ಅನನ್ಯತೆಯನ್ನು ಬಿಂಬಿಸುವ ಕಾದಂಬರಿಗಳು ಕನ್ನಡದಲ್ಲಿ ಬಂದಿವೆ. ಕರ್ನಾಟಕದ ಸಂಸ್ಕೃತಿಯ ವೈವಿಧ್ಯತೆಯನ್ನು ಅರಿಯಬೇಕಾದರೆ ಕನ್ನಡ ಕಾದಂಬರಿಗಳನ್ನು ಓದಲೇಬೇಕು. ಕರ್ನಾಟಕದಲ್ಲಿರುವ ಅನೇಕ ಜಿಲ್ಲೆಗಳ ಜನಸಮುದಾಯಗಳ ಭಾಷೆ, ಬದುಕು, ನಂಬಿಕೆಗಳು ಭಿನ್ನ ಭಿನ್ನವಾಗಿವೆ. ಈ ಭಿನ್ನತೆಗಳಿಗೆ ಅದರದೇ ಆದ ಸೊಗಸಿದೆ. ಕಡಲತೀರದ, ಕರಾವಳಿ ಪ್ರದೇಶದ ಪರಿಸರವನ್ನು ಅಲ್ಲಿನ ಬದುಕಿನೊಂದಿಗೆ ಕಾಣಿಸುವ ಕಾದಂಬರಿಗಳು ಶಿವರಾಮ ಕಾರಂತರಿಂದ ರಚನೆಯಾಗಿವೆ. ಅವರ 'ಬೆಟ್ಟದ ಜೀವ', 'ಕುಡಿಯೂರ ಕೂಸು', 'ಮರಳಿ ಮಣ್ಣಿಗೆ' ಮುಂತಾದ ಅವರ ಅನೇಕ ಕಾದಂಬರಿಗಳಲ್ಲಿ ಕರಾವಳಿಯ ಬಾಳು ಒಡೆದು ಕಾಣುವಂತೆ ಚಿತ್ರಿಸಲಾಗಿದೆ. ಗೋರೂರು ರಾಮಸ್ವಾಮಿ ಅಯ್ಯಂಗಾರ ಅವರ ಕಾದಂಬರಿಯಲ್ಲಿ ಹೇಮಾವತಿ ನದಿ ತೀರದ ಪ್ರದೇಶವನ್ನು ಕಾಣಬಹುದು. ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಂತೂ ಕನ್ನಡ ನಾಡಿನ ಸಾಹಿತ್ಯಾಸಕ್ತರ ಮನೆಮಾತಾಗಿ ನಿಂತಿವೆ. ಮಲೆನಾಡಿನ ಪರಿಸರವನ್ನು ಅವರು ಬಿಂಬಿಸಿರುವ ಪರಿ ಅನನ್ಯವಾದುದ್ದು. ಈ ಹೊತ್ತು ದಿನೇ ದಿನೇ

ಕಾಡು ಬರಿದಾಗುತ್ತಿದೆ. ಆದರೆ ಕುವೆಂಪು ಕಂಡ ಕಾಡು ಅವರ ಕಾದಂಬರಿಗಳಲ್ಲಿ ಜೀವಂತವಾಗಿ ನಿಂತಿದೆ. ಮನುಷ್ಯನ ಜೀವನದ ಭಾಗವಾಗಿ ಚಿತ್ರಿತವಾದ ಮಲೆನಾಡಿನ ಪರಿಸರ ಆ ಎರಡು ಕಾದಂಬರಿಗಳಿಂದ ಜೀವಂತವಾಗಿರುವುದನ್ನು ಕಂಡಂತೆ 'ಗ್ರಾಮಾಯಣ' ಕಾದಂಬರಿಯಲ್ಲಿ ಉತ್ತರ ಕರ್ನಾಟಕದ ಕೃಷ್ಣಾನದಿ ತೀರದ ಬಯಲುಸೀಮೆಯ ಬದುಕು ಚಿತ್ರಿತವಾದದ್ದನ್ನು ಕಾಣುತ್ತೇವೆ. ಮಿರ್ಜಿ ಅಣ್ಣಾರಾಯ ಅವರ 'ಜೀವನ' ಕಾದಂಬರಿಯಲ್ಲಿಯೂ ಬಯಲು ಸೀಮೆಯ ಪರಿಸರವಿದೆ. ದಟ್ಟವಾದ ಮಲೆನಾಡು ಕರಾವಳಿಯ ಸಮುದ್ರ ಮಳೆ ಕಡಿಮೆ ಇರುವ ಬಯಲು ಸೀಮೆಯ ಪರಿಸರಗಳು ಕನ್ನಡ ಕಾದಂಬರಿಯಲ್ಲಿ ಮರು ಸೃಷ್ಟಿಯಾಗಿರುವುದರಿಂದ ಮನುಷ್ಯನ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಲು ಸಹಾಯಕವಾಗಿವೆ.

ನವ್ಯ ಕಾದಂಬರಿಗಳಲ್ಲಿಯೂ ಒಂದು ಪರಿಸರವಿದೆ. ಅದು ಸೀಮಿತವಾಗಿದ್ದರೂ ಅದು ಬದಲಾದ ಮನುಷ್ಯನ ಪರಿಸರವನ್ನು ತೋರಿಸುತ್ತದೆ. ಕಾದಂಬರಿಗಳ ರಚನೆಯಲ್ಲಿ ಆದ ಬದಲಾವಣೆಗಳಿಂದಾಗಿ ಕಾದಂಬರಿಗಳಲ್ಲಿ ಪರಿಸರದ ಚಿತ್ರಣ ಕಮ್ಮಿಯಾಗ ತೊಡಗಿತ್ತು. ಈ ಹಿಂದಿನ ಕಾದಂಬರಿಗಳಲ್ಲಿ ಕಾಣುವಂತೆ ಸೂರ್ಯೋದಯ, ಚಂದ್ರೋದಯದ ವರ್ಣನೆ, ಮೀನು, ಏಡಿ ಹಿಡಿಯುವ ಸನ್ನಿವೇಶಗಳು. ಹಬ್ಬ, ಜಾತ್ರೆ ಮುಂತಾದವುಗಳ ವರ್ಣನೆಗಳು ಕಡಿಮೆಯಾಗ ತೊಡಗಿದ್ದವು. ಆದರೆ ಎಚ್.ನಾಗವೇಣಿ ಅವರ 'ಗಾಂಧಿಬಂದ' ಕಾದಂಬರಿಯಲ್ಲಿ ಪರಿಸರ ಎದ್ದು ಕಾಣುವಂತೆ ಚಿತ್ರಿತವಾದದ್ದು ವಿಶೇಷವಾಗಿದೆ. ತುಳುನಾಡಿನ ಎಲ್ಲ ವರ್ಗ ಜಾತಿಗಳ ಜೀವನಕ್ರಮವನ್ನು ಅಭಿವ್ಯಕ್ತಗೊಳಿಸಿದ್ದಾರೆ. ಕುವೆಂಪು, ಕಾರಂತರ ಕಾದಂಬರಿಗಳಲ್ಲಿ ಕಾಣುವಂತಹ ರೀತಿಯಲ್ಲಿ 'ಗಾಂಧಿಬಂದ' ಕಾದಂಬರಿಯಲ್ಲಿ ವಿಶೇಷವಾಗಿ ಪರಿಸರವನ್ನು ಚಿತ್ರಿಸಿದ್ದಾರೆ. ತುಳುನಾಡಿನ ಸಂಸ್ಕೃತಿ ಈ ಕಾದಂಬರಿಯಲ್ಲಿ ಜೀವಂತವಾಗಿ ಮೂಡಿಬಂದಿದೆ.

ಸ್ವಾತಂತ್ರ್ಯ ಹೋರಾಟದ ಸಂಘಟನೆಗಾಗಿ ತುಳು ನಾಡಿಗೆ ಗಾಂಧೀಜಿ ಅವರು ಬಂದ ಹಿನ್ನೆಲೆಯೇ 'ಗಾಂಧಿಬಂದ' ಕಾದಂಬರಿಯ ಮುಖ್ಯ ವಸ್ತು. ಚಾರಿತ್ರಿಕ ವಸ್ತುವುಳ್ಳದ್ದಾದರೂ ಇದರ ಹರವು ಸಂಪೂರ್ಣ ಸಾಮಾಜಿಕವೇ ಆಗಿದೆ. ಪ್ರಾದೇಶಿಕ ಜನರ ಆಚರಣೆ-ಪದ್ಧತಿಗಳ ಬಾಳುವಿಕೆಯ ಜೀವಂತ ಚಿತ್ರಣ ನೀಡುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುರಗೀಮಠದ ಚಂದ್ರಕೆರೆಯ ಕಂಬಳದ ಸಂಭ್ರಮದಿಂದ ಆರಂಭವಾಗುವ ಕಾದಂಬರಿ, ತುಳುನಾಡಿನ ಆ ವಿಶಿಷ್ಟ ಆಚರಣೆಗಳ ಸುರಳಿಗಳು ಬಿಚ್ಚಿ ಕೊಳುತ್ತಾ, ಪ್ರಾದೇಶಿಕ ಸಂಸ್ಕೃತಿಯನ್ನು ವಿಶ್ಲೇಷಿಸುವುದರ ಜೊತೆಯಲ್ಲೇ. ದಟ್ಟವಾದ ಬದುಕಿನ ವಿವರಗಳನ್ನು ಅಭಿವ್ಯಕ್ತಿಸುತ್ತದೆ. ಇನ್ನೊಂದು ಕಡೆ, ಗಾಂಧಿಯ ತತ್ವಗಳಿಂದ ಪ್ರೇರಿತರಾದ ಮಾರಪ್ಪ, ತಿಂಗಳಾಯ, ಅದ್ರಾಮರ

ಪಾತ್ರಗಳ ಮೂಲಕ ಸಮಾಜದಲ್ಲಿ ಹರಿಜನೋದ್ಧಾರ, ಖಾದಿಪ್ರಚಾರ, ವಿಧವಾ ವಿವಾಹ, ಜಮೀನ್ದಾರರ ವಿರೋಧ, ಜೀತ ದಾಳುಗಳ ದಾರುಣ ಬದುಕು ಮೊದಲಾದ ಸಾಮಾಜಿಕ ಬದಲಾವಣೆಗೆ ಅಣಿಗೊಳಿಸುವ ಮೂಲಕ ಜನರನ್ನು ರಾಜಕೀಯವಾಗಿ ಸ್ವಾತಂತ್ರ್ಯಕ್ಕೆ ಪ್ರೇರೇಪಿಸಿ ರಾಜಕೀಯ ಪ್ರಜ್ಞೆ ಮೂಡಿಸುವ ದಿಶೆಯಲ್ಲಿ ಕಾದಂಬರಿ ಬೆಳೆಯುತ್ತದೆ.

ಕಾದಂಬರಿಯು ಮೊದಲಿನಿಂದ - ಕೊನೆಯವರೆಗೂ ಸಾಂಸ್ಕೃತಿಕ ಆಚರಣೆಗಳಾದ ಕಂಬಳ, ಕೋಳಿಕಟ್ಟ, ಕಂಗಿಲು ಕುಣಿತ, ಮೀನ ಹಿಡಿಯುವ, ಹಬ್ಬ, ಜಾರಾಂದಾಯ ದೈವ, ಪುದ್ಧರಿನೋಟ ಮೊದಲಾದ ಎಲ್ಲ ವರ್ಗದ ಸಹಬಾಳ್ವೆಯ ಆಚರಣೆಗಳ ಜೊತೆಗೆ, ಜನರ ಜೀವನ ಪದ್ಧತಿಯನ್ನು ಪರಿಚಯಿಸುತ್ತ ಇಲ್ಲಿನ ಸಮುದಾಯಗಳ - ಕುಟುಂಬಗಳ, ವ್ಯಕ್ತಿಗಳ ಒಳ ಮನಸ್ಸಿನ ತಾಕಲಾಟಗಳು ಗೋಚರಿಸುತ್ತಾ ಹೋಗುತ್ತವೆ.

ಸಂಪ್ರದಾಯಕ್ಕೆ ಕಟ್ಟುಬಿದ್ದು ಏನನ್ನೂ ಮಾಡಲು ಹಿಂಜರಿಯದ ಸ್ವಾರ್ಥ - ಕೆಟ್ಟ ಪ್ರವೃತ್ತಿಯ ಬ್ರಾಹ್ಮಣ ಕುಟುಂಬದ ಸೀನಪ್ಪಯ್ಯಹೆಬ್ಬಾರರು. ಬದಲಾಗುತ್ತಿರುವ ಸಮಾಜದ ಪ್ರವೃತಿಗಳಿಗೆ, ಸಂಪ್ರದಾಯಸ್ಥ ಸಮಾಜದ ಹಳೆಯ ಪದ್ಧತಿಗಳು ಸರಿಪಡಿಸಬೇಕೆಂಬ ಹಂಬಲವುಳ್ಳ ತಣ್ಣೀರು ಬಾವಿಯ ಕೇಶವ ಶಾನುಭೋಗರು, ಜಾತಿ ವೈಷಮ್ಯವನ್ನು ಬೆಳೆಸುವ ಪುಣಂದೂರಿನ ದೇವಸ್ಥಾನದ ಅರ್ಚಕ ಭೂತೈತಾಳರು ಒಂದು ಕಡೆ ಇದ್ದರೆ ಇವರಿಗಿಂತ ಭಿನ್ನವಾದ ಮತ್ತು ಗಾಂಧಿಯ ವಿಚಾರಗಳಲ್ಲಿ ಪ್ರಭಾವಿತರಾಗಿ ಖಾದಿ ಪ್ರಚಾರ, ಹರಿಜನೋದ್ಧಾರ, ಸತ್ಯಾಗ್ರಹ ಮೊದಲಾದ ಹೋರಾಟದ ಕಿಚ್ಚು ಹಚ್ಚಿಕೊಂಡು, ಸಮಾಜದ ಬದಲಾವಣೆಗೆ ಶ್ರಮಿಸುವ ಭಿನ್ನ ಸಮುದಾಯದ ಮಾರಪ್ಪಶೆಟ್ಟಿ ತಿಂಗಳಾಯ, ಮತ್ತು ಅದ್ರಾಮರ ಗುಂಪು ಇನ್ನೊಂದೆಡೆಯಿದೆ. ಈ ನಡುವೆ ಜಾರಿಗೆ ಬೆಟ್ಟಿನ, ಸುಬ್ಬಯ್ಯ ಶೆಟ್ಟರ ಸಂಸಾರ, ಮಗಳು ದಾರು. ಮಾರಪ್ಪಶೆಟ್ಟಿಯ ತಾಯಿ ಸೂರಕ್ಕ. ಗುತ್ತಿನ ಸಂಸಾರಗಳು (ಪಾಂಡುಶೆಟ್ಟಿ, ತೌಡಶೆಟ್ಟಿ). ನಿಕೃಷ್ಟವಾಗಿ ಬದುಕುವ ಶೂದ್ರರ - ಕೂಸ ಮೈಲಿ, ಅಂತಪ್ಪೂಜಾರಿ, ಅಂಗರಮೂಲ್ಯ, ಇವರ ಸಂಸಾರ. ಬೆಸ್ತರು, ಕೋರಗರ - ಪೊತ್ತೆಲ, ಐತು - ಸಂಸಾರ, ಮೂಲಗೇಣಿ - ಚಾಲಗೇಣಿ ಒಕ್ಕಲಿಗರು, ಈ ಎಲ್ಲಾ ಪಾತ್ರಗಳ ವೈವಿಧ್ಯತೆಯನ್ನು ಕಾದಂಬರಿ ಮಂಗಳೂರು ಪ್ರದೇಶದ ಸಂಸ್ಕೃತಿಯನ್ನು ವಿಶ್ಲೇಷಿಸುವುದರ ಜೊತೆಯಲ್ಲೇ ದಟ್ಟವಾದ ಬದುಕಿನ ಸಾಮಾಜಿಕ ವಿವರಗಳನ್ನು, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಜಾಗೃತಿಯನ್ನು ಮೂಡಿಸುವ, ಹೊಸದೊಂದು ರಾಷ್ಟ್ರ ನಿರ್ಮಾಣದ ಕಲ್ಪನೆಯನ್ನು ಹೊಂದಿದೆ.

ಸಾಮಾಜಿಕ ಸಮಸ್ಯೆಗಳನ್ನು ಸಾಂಸ್ಕೃತಿಕ ಆಚರಣೆಗಳ ಜೊತೆಗೆ ಗುರುತಿಸಿಕೊಂಡ ಮಂಗಳೂರು ಜನತೆ. ಗಾಂಧೀಜಿ ಬಂದ ಹಿನ್ನೆಲೆಯಲ್ಲಿ ಪ್ರಗತಿಪರ ವಿಚಾರಗಳನ್ನು ಹೊಂದಿದ, ಹೋರಾಟದ ಮೂಲಕ ರಾಜಕೀಯ ಸ್ವಾತಂತ್ರ್ಯ, ಸಮಾನತೆಯನ್ನು ತಂದುಕೊಳ್ಳಲು ಕಾದಂಬರಿಯ ಆದರ್ಶ ಪಾತ್ರಗಳಾದ ಮಾರಪ್ಪ, ತಿಂಗಳಾಯ, ಶೋಷಣೆಯ ವಿರುದ್ಧ ಬಂಡಾಯದ ಮನೋಧರ್ಮವನ್ನು ಹೊಂದಿರುವಂತವರು, ಮೇಲಾಗಿ ರಾಷ್ಟ್ರದಲ್ಲಿ-ನಾಡಿನಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕೆ ಸಂಘಟಿತರಾಗಲು ಕರ್ನಾಡ್ ಸದಾಶಿವರಾಯರಂತ ಗಾಂಧಿಭಕ್ತರಿಂದ ಪ್ರಭಾವಿತರಾಗಿ, ಜಮೀನ್ದಾರರ ಎಲ್ಲಾ ವಿಚಾರಗಳಲ್ಲಿ ವಿರೋಧವುಳ್ಳವರಾಗಿ ಸಮಾನತೆ, ಸ್ವಾಭಿಮಾನದ ಬದುಕನ್ನು ಸಮಾಜದಲ್ಲಿ ರೂಢಿಸಲು ಪಣತೊಟ್ಟವರ ಒಂದು ನೆಲೆಯಲ್ಲಿ ಕಾಣಿಸುತ್ತಾರೆ.

ಜಟಕಾ ಓಡಿಸಿ ಜೀವನ ನಡೆಸುವ ಅದ್ರಾಮ ಬ್ಯಾರಿ ಗಾಂಧೀಜಿಯ ತತ್ವಗಳಿಗೆ ಪ್ರಭಾವಿತಳಾಗಿ ಸಂಪ್ರದಾಯದ ಸಂಕೋಲೆಯಿಂದ ಹೊರಬಂದು ಅದ್ರಾಮನ ಮಡದಿಯಾಗುವ ವಿಧವೆ ದ್ರೌಪದಿ ಕಾದಂಬರಿಯ ಮುಖ್ಯ ಪಾತ್ರ. ಇವರ ಸಂಸಾರ ಹೊಂದಿಕೊಳ್ಳುತ್ತಿರುವಾಗಲೇ ನಾಡಿನಲ್ಲಿ ಸ್ವಾತಂತ್ರ್ಯ ಹೋರಾಟದ ಉಪ್ಪಿನ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದ ಅದ್ರಾಮ ಮಡಿಯುವುದು ಕಾದಂಬರಿಯ ಮುಖ್ಯ ಘಟ್ಟವಾಗಿದೆ. ಮತ್ತೆ ವಿಧವೆಯಾದ ದ್ರೌಪದಿಗೆ ಗಾಂಧಿಯ ಪರಿಚಯ ಆ ಮೂಲಕ ಸೌಭಾಗ್ಯಗಳನ್ನು ಪಡೆಯುವುದು ಇಲ್ಲಿದೆ. ನೂರೆಂಟು ಕನಸುಗಳನ್ನು ಸ್ತ್ರೀ ಸಹಜ ಆಲೋಚನೆಗಳನ್ನು ಹುದುಗಿಟ್ಟಿಕೊಂಡ ದಾರುವನ್ನು ಮಾನವೀಯ ನೆಲೆಯಲ್ಲಿ ಮಾರಪ್ಪ ಮದುವೆ ಯಾಗುತ್ತಾನೆ. ಗಂಡನಿದ್ದರೂ ಬೇರೊಬ್ಬ ಕುಲಸ್ತರ(ಹೆಬ್ಬಾರರ) ಜೊತೆ ಅನಿವಾರ್ಯ ಜೀವನ ನಡೆಸುವ, ಮನಸ್ಸು ವೈರಾಗ್ಯಕ್ಕೆಳೆಸಿದರೂ ಕೊನೆಗೆ ಸಂಪ್ರದಾಯ ಸಮಾಜಕ್ಕೆ ಸೋಲುವ ಪುಟ್ಟಮ್ಮಕ್ಕ ಇವರೆಲ್ಲ ಗಾಂಧಿಯ ತತ್ವಗಳನ್ನು ಮುಗ್ಧವಾಗಿ ನಂಬಿಕೆಯಿಟ್ಟು, ತಮ್ಮ ಕಾಣಿಕೆ ನೀಡಿದ್ದಾರೆ. ಕಾದಂಬರಿಯ ಇನ್ನೊಂದು ಕಡೆ ಸಂಪ್ರದಾಯದ ಸಮಾಜದಲ್ಲಿ ನಿಕೃಷ್ಟವಾಗಿ ಜೀವಿಸುತ್ತಿದ್ದ ಕೆಳವರ್ಗದವರು ಗಾಂಧಿಯ ತತ್ವಗಳಿಂದ ಪ್ರೇರಿತರಾಗಿ ಮಾನಸಿಕವಾಗಿ, ದೈಹಿಕವಾಗಿ ಬದಲಾಗಿ ಆ ಮೂಲಕ ಸಮಾಜದ ಬದಲಾವಣೆಗೆ ಕಾರಣರಾಗುತ್ತಾರೆ. ಅಂದಿನ ವಿದ್ಯಾಮಾನಗಳನ್ನು ಗ್ರಹಿಸುವುದಷ್ಟೇ ಅಲ್ಲ, ಬದುಕಿನಲ್ಲಿ ಸುಧಾರಣೆಯನ್ನು ತಂದುಕೊಂಡ ಇವರು ಸಾಮಾಜಿಕವಾಸ್ತವದ ಸಮಸ್ಯೆಗಳ ಸುಧಾರಣೆಗೆ ಚಲನೆಯನ್ನು ತಂದುಕೊಟ್ಟರು.

ಶೋಷಣೆಯ ಪರವಾದ ಸಮಾಜದಲ್ಲಿ ಅನೇಕ ನೈತಿಕ ಮೌಲ್ಯಗಳು, ವ್ಯವಸ್ಥೆಗಳು ಬದಲಾಗಬೇಕು ಎನ್ನುವ ಆಶಯವಿದೆ. ಈ ಕಾದಂಬರಿಯಲ್ಲಿ ಧರ್ಮದ ದಾರಣ ಅಂಶಗಳ ಖಂಡನೆಗೆ, ಪುರೋಹಿತ

ಶಾಹಿ ವಿಡಂಬನೆ ಕಾದಂಬರಿಯಲ್ಲಿದೆ. ಸಾಂಸ್ಕೃತಿಕ ಆಚರಣೆಗಳನ್ನು ಪ್ರೋತ್ಸಾಹಿಸುತ್ತಲೇ ಸಂಪ್ರದಾಯಸ್ತ ಕುಟುಂಬಗಳಲ್ಲಿ, ಅಥವಾ ವ್ಯಕ್ತಿಗಳಲ್ಲಿ, ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಿ ಜಾತಿ, ವರ್ಗ ವೈರುಧ್ಯಗಳನ್ನು ಹೊಡೆದೋಡಿಸಿ, ಆ ಮೂಲಕ ಸಾಮಾಜಿಕ ಬದಲಾವಣೆಯನ್ನು ತರುವುದೇ ಕಾದಂಬರಿಯ ಆಶಯವಾಗಿದೆ.

ಹೆಜ್ಜೆ

ಗಾಂಧೀತನ್ನ ಜೀವಿತಾವಧಿಯಲ್ಲಿ ವ್ಯಕ್ತಿಯಾಗಿಯೂ, ನೈತಿಕತೆಯ ಎಚ್ಚರ ತರುವ ಶಕ್ತಿಯಾಗಿಯೂ ಭಾರತೀಯರ ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ನಡುವಳಿಕೆಗಳನ್ನು ತಟ್ಟುತ್ತ ಬಂದ ಬಗೆ, ಸಮಾಜ ಕಂಡುಕೊಂಡ ಬದಲಾವಣೆಯ ಹೊಸ ಹೆಜ್ಜೆಗಳನ್ನಿಡುವ, ಬಗೆಯನ್ನು ಶೋಧಿಸುವ ಹೆಜ್ಜೆ ವಿನೂತನ ರಾಜಕೀಯ ಕಾದಂಬರಿಯಾಗಿದೆ. ಇಪ್ಪತ್ತನೆಯ ಶತಮಾನದ ಮೂವತ್ತರ ದಶಕದಲ್ಲಿ ದಕ್ಷಿಣ ಕನ್ನಡದ ಕೊಡದೂರು - ಕೆಡದೂರು, ಮೊದಲಾದ ಊರುಗಳ ಪ್ರಾದೇಶಿಕ ಪರಿಸರದಲ್ಲಿ ಅನಾವರಣಗೊಳ್ಳುವ ಗ್ರಾಮೀಣ ಬದುಕು ಈ ಕಾದಂಬರಿಯಲ್ಲಿದೆ. ಸ್ವಾತಂತ್ರ್ಯ ಹೋರಾಟದ ಸಂಘಟನೆಗಾಗಿ ಗಾಂಧೀಜಿ ನಾಡಿಗೆ ಬಂದ ಕಾರಣದಿಂದ ಕುಟುಂಬಗಳಲ್ಲಿ, ವ್ಯಕ್ತಿಗಳಲ್ಲಿ, ಪರಿವರ್ತನೆಗಳು ಕಾಣಿಸುತ್ತವೆ. ಆ ಪರಿವರ್ತನೆಗಳ ಹಿಂದಿನ ಸಂಘರ್ಷಗಳನ್ನು ಕಾದಂಬರಿ ಹೇಳಲು ಪ್ರಯತ್ನಿಸಿದೆ.

ಕುಟುಂಬ ಅಥವಾ ವ್ಯಕ್ತಿಗಳಲ್ಲಿನ ಸ್ಥಿತ್ಯಂತರಗಳನ್ನು ಗುರುತಿಸಲು ಗ್ರಾಮೀಣ ಪರಿಸರವನ್ನು ಕೇಂದ್ರವಾಗಿಟ್ಟುಕೊಂಡು ಬೆಳೆಯುವ ಕಾದಂಬರಿಯಲ್ಲಿ ಧರ್ಮ, ಸಂಪ್ರದಾಯ ನಿಷ್ಠೆಯ ಶ್ರೀಕಂಠ ಶಾಸ್ತ್ರೀಗಳು, ಸಹೋದರ ನಾರಾಯಣ ಶಾಸ್ತ್ರೀ, ಅಂಗಡಿ ವ್ಯಾಪಾರಿ ವೆಂಕಟೇಶ ಕಮ್ತಿ, ದೇವಸ್ಥಾನದ ಅರ್ಚಕರಾದ ನರಸಿಂಹ ಭಟ್ಟರು, ಪುರುಶೋತ್ತಮ ಆಚಾರ್ಯರು, ಸಂಪ್ರದಾಯದ ಮೌಲ್ಯಗಳನ್ನು ನಿಷ್ಠೆಯಿಂದ ಅನುಸರಿಸುವಂತ ಇವರು, ಸಂಪ್ರದಾಯಸ್ಥರನ್ನು ಪ್ರತಿನಿಧಿಸುವಂತವರು. ಇದಕ್ಕೆ ಭಿನ್ನವಾದ ಸಂಪ್ರದಾಯಸ್ಥರಾದರೂ ಕೆಲವೊಂದು ಬದಲಾವಣೆಗೆ ಹೊಂದಿಕೊಂಡ ಗಂಗೊಳ್ಳಿಯ ಪರಮೇಶ್ವರ ಐತಾಳ. ಕೆಡದೂರಿನ ಗಾಂಧಿವಾದಿ ಮನೆತನದ ಫೊಟೋ ಗ್ರಾಫರ್ ಆನಂದ ಸೋಮಯಾಜಿ ಈ ಎಲ್ಲ ಹಳೆ ತಲೆಮಾರಿನ ವ್ಯಕ್ತಿಗಳು ಒಂದುಕಡೆ ಇದ್ದರೆ, ಇದರ ಇನ್ನೊಂದು ಕಡೆ ಇಂಗ್ಲೀಷ್ ಜ್ಞಾನ ಹೊಂದಿದ ಹೊಸತಲೆಮಾರಿನ ಗಾಂಧಿಯ ಪ್ರಭಾವಕ್ಕೆ ಒಳಗಾದ ಸಾವಿತ್ರಿ, ಈಕೆಯ ಮೂಲಕ ವಿದ್ಯಾಧರ. ಶಾಲೆಯ ಮುಖ್ಯೋಪಧ್ಯಾಯ ಸುಧಾಕರ ರಾವ್ . ಸಂಕಯ್ಯ ಮಾಸ್ತರ್ ಇವರೆಲ್ಲ ಗಾಂಧಿಯ ತತ್ವಗಳಾದ ಹರಿಜನೋದ್ಧಾರ, ವಿಧವಾ ವಿವಾಹ, ಅಸ್ಪೃಶ್ಯತೆ ಮೊದಲಾದವುಗಳ ನಿವಾರಣೆಗೆ ಕ್ರಿಯಾತ್ಮಕ ರೂಪ ಕೊಟ್ಟವರ ಒಂದು ಗುಂಪು. ಈ ಸಮ್ಮಿಲನದ

ನಡುವೆ ಗಾಂಧೀಯ ವಿಚಾರಗಳಲ್ಲಿ ಪ್ರಭಾವಿತನಾದ ವೆಂಕಟೇಶ್ ಕಮ್ತಿಯ ಮಗ ಮಾಧವ ಕಮ್ತಿ 'ಕಮ್ಯುನಿಷ್ಟ್‌ತತ್ವ'ಗಳಲ್ಲಿ ನಂಬಿಕೆ ಇದ್ದವನು. ಆ ಮೂಲಕ ಹೋರಾಟಗಾರರ ಸಂಘಟನೆ ಕಟ್ಟಿ ಜನರಲ್ಲಿ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸಿದನು. ಆದರೆ ಬದಲಾಗುತ್ತಿರುವ ಸಮಾಜದಲ್ಲಿ ಸಂಪ್ರದಾಯದ ಪದ್ಧತಿಗಳನ್ನು ಮೀರಿದವನಾದರೂ ಬದುಕಿನಲ್ಲಿ ಬದಲಾವಣೆ ಬಯಸುವ ಗಂಗಾಧರ, "ಎಲ್ಲಾ ಒಟ್ಟಾಗಬೇಕಂತಲ್ಲವೆ. ಆ ಗಾಂಧೀ ಹೇಳ್ತಾ ಇರೋದು, ಇನ್ನೂ ಹಾಕಿಕೊಳ್ಳುದು ಗಾಂಧೀ ಟೊಪ್ಪಿನೇ, ನೀವು ನೋಡ್ತಾ ಇದ್ದೀರಿ ಕಮ್ತಿ ಅಂಗಡಿಯಲ್ಲಿ ಎಲ್ಲಾ ಒಟ್ಟು ಆಗ್ತಾರೆ. ಅವನ ಸಂಪತನ್ನೂ ಹೆಚ್ಚಿಸ್ತಾರೆ, ನೀವು ದೇವಸ್ಥಾನದಲ್ಲೇ ವೇದಾಂತ ಹೇಳ್ತಾ ಇರಿ, ಹೆಚ್ಚಿಗೆ ದುಡ್ಡಿಲ್ಲಾಂತ ಆಸ್ತಿನೂ ಮಾರೋದಿಕ್ಕೆ ಹೊರಡಿ, ನಮಗೆ ಹೋಟ್ಲು ಗೀಟ್ಲು ಮಾಡಿ ಎರಡು ಕಾಸು ಮಾಡೋಣಾಂತಂದ್ರೆ ಅದಕ್ಕೂ ಬಿಡಬೇಡಿ"(ಪು.೩೨)ಎನ್ನುವ ಅವನು ಬದುಕಿನಲ್ಲಿ ಬದಲಾವಣೆಯನ್ನು ಬಯಸುವ, ವ್ಯಕ್ತಿತ್ವವುಳ್ಳವನಾಗಿದ್ದಾನೆ. ಗಂಗಾ ಸಂಪ್ರದಾಯಸ್ಥನಾದರೂ, ತಂದೆಯಂತೆ ಗಾಂಧೀಯನ್ನು ವಿರೋದಿಸಿದರೂ ಬದುಕಿಗಾಗಿ, ಹೋಟೆಲ್ ಮಾಡಿ ಬದುಕಬೇಕೆಂಬ ವ್ಯಕ್ತಿ. ಆಧುನಿಕತೆ ಇವನಲ್ಲಿ ಬೇರೊಂದು ರೂಪದಲ್ಲಿ ಪ್ರಭಾವಿಸಿದೆ.

ದುರಭ್ಯಾಸ ದುರ್ನಡತೆಯಿಂದ ಬದುಕಲು ಹವಣಿಸುವ ಶಂಕರ ಐತಾಳ ಮುಗ್ಧೆಯಾದ ಪಾರ್ವತಿ ದುರಂತವನ್ನು ತಂದುಕೊಂಡವಳು, ದುಶ್ಚಟಗಳಿಗೆ ಒಳಗಾದ ವ್ಯಕ್ತಿಗಳು ಸಮಾಜದಲ್ಲಿ ಹೇಗೆ ಅಧಃಪತನ ಹೊಂದುತ್ತಾರೆ ಎನ್ನುವುದನ್ನು ಕಾದಂಬರಿಕಾರರು ಶಂಕರನ ಮೂಲಕ ತೋರಿಸಿದ್ದಾರೆ. ನಾರಾಯಣ ಶಾಸ್ತ್ರೀಗಳ ಮಗಳು, ವಿಧವೆಯಾದ ಶಾಂಭವಿ ಓದು ಪೂರೈಸಿ ಶಿಕ್ಷಕಿಯಾಗಿ ತನ್ನ ಸಹೋದ್ಯೋಗಿ ಬೇರೆ ಜಾತಿಯ ರಘುವನ್ನು ಮರು ಮದುವೆಯಾಗುತ್ತಾಳೆ. ಸಂಪ್ರದಾಯದ ಚೌಕಟ್ಟನ್ನು ಮೀರಿದ ಇವಳು ಸ್ವಾತಂತ್ರ್ಯದಿಂದ ಬಾಳುವವಳು. ಸಾವಿತ್ರಿ ಮತ್ತು ಶಾಂಭವಿಯ ಸ್ತ್ರೀ ಪಾತ್ರ ನಿರ್ಮಾಣದಲ್ಲಿ ಕಾದಂಬರಿಕಾರರು ತೋರಿಸಿರುವ, ದಿಟ್ಟತನ ಗಮನಾರ್ಹವಾದದ್ದು. ಸ್ತ್ರೀಯೊಬ್ಬಳು ಸುಶಿಕ್ಷಿತಳಾದರೆ ಅವಳ ವ್ಯಕ್ತಿತ್ವದ ವಿಕಾಸ ಹೇಗೆ ಸಾಧ್ಯವೆಂಬುದಕ್ಕೆ ಮಾದರಿಯೆಂಬಂತೆಯೇ ಸಾವಿತ್ರಿ ಶಾಂಭವಿಯ ವ್ಯಕ್ತಿತ್ವ ಇದೆ. ನಿಕೃಷ್ಟವಾದ ಬದುಕನ್ನು ಹೊಂದಿದ ಕೊರಗರ ಪುಟ್ಟಧೂಮನ ಮಗ ಕೆಂಚನು ವಿದ್ಯಾ ಮತ್ತು ಸಾವಿತ್ರಿಯ ಮೂಲಕ ಸುಶಿಕ್ಷಿತನಾಗಿ ಬಾಳಿನಲ್ಲಿ ಹೊಸ ಬದುಕನ್ನು ರೂಪಿಸಿಕೊಂಡ ಇವನು ಸಮಾಜದ ಕೆಳವರ್ಗದ ಜನರ ಆಶೋತ್ತರಗಳನ್ನು ಚಿಗುರಿಸಲು, ಒಂದು ವರ್ಗದ ನೋವು - ನಲಿವುಗಳನ್ನು, ದು:ಖ ದುಮ್ಮಾನಗಳನ್ನು - ಕನಸುಗಳನ್ನು ಸಂಕೇತಿಸುವ. ಸಾಂಸ್ಕೃತಿಕ ಪ್ರೇರಕ ಶಕ್ತಿಯೂ ಆಗುತ್ತಾನೆ. ಬಡತನದಿಂದ ಹಾದರಕ್ಕಿಳಿಯುವ ನಾಗಿ - ರುಕ್ಕು ಕ್ರೂರ

ಮತ್ತು ಅಮಾನವೀಯ ಬದುಕನ್ನು ಅನುಭವಿಸಿದವರು. ಗಾಂಧಿಯ ಪ್ರಭಾವಕ್ಕೆ ಒಳಗಾದ ನಾಗಿಯ ತಮ್ಮ ವೇಣುವಿನ ಸಹಾಯದಿಂದ ಬದುಕಿನಲ್ಲಿ ಹೊಸ ತಿರುವನ್ನು ತಂದು ಕೊಂಡ ಅವಳು ಆ ವರ್ಗದ ಜನರ ಬದಲಾವಣೆಗೆ ಸ್ವಾತಂತ್ರ್ಯ ಬದುಕಿಗೆ ಪ್ರೇರಕವಾದವಳು.

ತನ್ನ ಬದುಕಿನಲ್ಲಿ ಸಾವಿತ್ರಿಯ ಮೂಲಕ ಗಾಂಧಿಯ ಪ್ರಭಾವಕ್ಕೆ ಒಳಗಾದ ವಿದ್ಯಾ ತನ್ನ ಓದು ವಿಸ್ತರಿಸಿ ಕೊಂಡನು. ಗಂಡನ ವಿಸ್ತಾರದ ಓದು ಕಂಡ ಸಾವಿತ್ರಿಗೆ ಮೊದ ಮೊದಲು ಕುತೂಹಲವೆನಿಸಿದರೂ ಕ್ರಮೇಣ ಆಶ್ಚರ್ಯಕ್ಕೂ ಎಡೆ ಕೊಟ್ಟಿತ್ತು. ಇಂಗ್ಲೀಷ್ ಜ್ಞಾನ ಮತ್ತು ಈತನ ವಿಚಾರಗಳು ಬೆಳೆದಂತೆ, ಕಮ್ಯುನಿಷ್ಟ್ ತತ್ವಗಳಲ್ಲಿ ನಂಬಿಕೆ ಬೆಳೆದು ಗಾಂಧಿಯ ಅಹಿಂಸೆಯಿಂದ ಭಾರತದ ಬಿಡುಗಡೆ ಸಾಧ್ಯವಿಲ್ಲ 'ನನಗೆ ಸುಭಾಷ್ -ಬೋಸ್‌ರ ಆತ್ಮ ವಿಶ್ವಾಸದಲ್ಲಿ ಪ್ರಚಂಡ ಶಕ್ತಿ ಕಾಣ್ತಾ ಇದೆ. ಹಾಗಾದರೆ ಯಾವ ದಾರೀಂತ ಯೋಚನೆ ಮಾಡೋದರಲ್ಲೇ ನಾವು ಸಮಯ ಕಳೀತಾ ಇದ್ದೇವೆಯೇ'(ಪು.೩೧೧)ಎಂದು ಬದಲಾಗುತ್ತಾನೆ. ತನ್ನ ಆದರ್ಶದ ಕನಸನ್ನು ಹೊತ್ತು ವಕೀಲ ಮಂಗೇಶರಾಯರ ಸಹಾಯದಿಂದ ದೇಶದ ಕೇಂದ್ರ ರಾಜಕಾರಣದಂತಿದ್ದ ಮುಂಬೈ ನಗರಕ್ಕೆ ವಿದ್ಯಾ - ಸಾವಿತ್ರಿ ಮತ್ತು ಮಗು ಕಸ್ತೂರಿಯೊಡನೆ ಹೋಗುತ್ತಾನೆ. ಆ ದಿನವೇ ಜಗತ್ತಿನಲ್ಲಿ ಮಹತ್ವದ ಎರಡನೆಯ ಮಹಾಯುದ್ಧದ ತಿರುವು ಕಂಡ ಸುದ್ದಿ ಪ್ರಕಟವಾಗಿತ್ತು. ಕೊಡದೂರನ್ನು ಬಿಟ್ಟು ಮುಂಬೈ ಸೇರುವಾಗ ಯಾವ ಪೂರ್ವ ನಿರ್ಧಾರಿತ ಗುರಿಯೂ ಇಲ್ಲದೆ, ಮುಂದೆ ಬದುಕು ಹೇಗೆ ಸಾಗಬಹುದೆಂಬ ಯೋಚನೆಯೂ ಇಲ್ಲದೆ ಬಂದ ಇವರಿಗೆ ಆ ನಾಲ್ಕಾರು ವಾರಗಳೇ ಸಂತೋಷದ ದಿನಗಳೇನೋ ಎನ್ನುವಂತೆ ಕಾಲಕಳೆದರು ಅಲ್ಲಿನ ಆಡಳಿತ, ಜನರ ಜೀವನ ಕ್ರಮಕ್ಕೆ ಬೆರಗಾದ ಇವರು ತಮ್ಮದೆ ಎನಿಸುವ ಬದುಕಿನ ಸಿದ್ಧತೆ ಮಾಡಿಕೊಂಡರು. ವಕೀಲ ಮಖನ್‌ವಾಲಾ ರಫಿಸುರ್ತಿಯಂತವರ ಸಹಾಯದಿಂದ ಅಲ್ಲಿನ ರಾಜಕೀಯ ವಿದ್ಯಮಾನಗಳನ್ನು ಅರಿತ ವಿದ್ಯಾ ಸಾಧನೆಯ ಬೆನ್ನು ಹತ್ತಿ ಹೋರಾಟದ ಸಂಘಟನೆಗಳಲ್ಲಿ ಸೇರಲು ಹವಣಿಸುತ್ತಾನೆ. ಅಷ್ಟರಲ್ಲಿ ಸುರುವಾದ ೧೯೪೨ರ ಸ್ವಾತಂತ್ರ್ಯ ಹೋರಾಟದ ಕೊನೆಯ ಘಟ್ಟದ ಚಳುವಳಿಯಲ್ಲಿ ಸಾವನ್ನಪ್ಪುತ್ತಾನೆ. ಇಲ್ಲಿ ಕಮ್ಯೂನಿಷ್ಟ್ ತತ್ವಗಳು ಸಮಾಜದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಹಾಯಕವಾಗಬಹುದೆಂದು ತೋರಿದರೂ ವಿದ್ಯಾಧರನಂತವರ ಸಾವು ಈ ತತ್ವಗಳ ಬೆಳವಣಿಗೆಗೆ ಅಡ್ಡಿಯಾಗುತ್ತವೆ ಎಂದು ಗ್ರಹಿಸಬಹುದು.

"ಜನ ಸೇರಿದಲ್ಲೆಲ್ಲ ಪೋಲಿಸರ ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗ, ಕಲ್ಲು ತೂರಾಟ, ಬೆಂಕಿ, ಪೋಲಿಸರ ಗೋಲಿಬಾರ್, ಅದರಿಂದ ಹುತಾತ್ಮರಾದ ಅಮಾಯಕ ಜನರ, ಅಲ್ಲಲ್ಲಿ ಗುಂಡಿನ ಸದ್ದು"(ಪು.೪೫೧)ಹೀಗೆ ಹಿಂಸೆ, ಪ್ರತಿ ಹಿಂಸೆ ದೇಶದ ಎಲ್ಲೆಡೆ ಹರಡುತ್ತದೆ. ಬ್ರಿಟಿಷರಿಂದ ಹತ್ತಿಕ್ಕಲಾರದ

ನಿರಂತರವಾಗಿ ಮುಂದುವರೆಯುತ್ತಲಿದ್ದ ಹೋರಾಟಗಾರರ ಚಲೇಜಾವ್‌ಚಳುವಳಿಯನ್ನು ಹತ್ತಿಕ್ಕಲಾಗುವುದಿಲ್ಲ. ಬ್ರಿಟಿಷರು ಚಳುವಳಿಗಾರರನ್ನು ಹತ್ತಿಕಲಾರದೆ ದೇಶಕ್ಕೆ ಸ್ವಾತಂತ್ರ್ಯದ ಘೋಷಣೆ ಹೊರಡಿಸುತ್ತಾರೆ. ಸ್ವಾತಂತ್ರ್ಯ ಬಂದ ನಂತರ ತುಂಡಾದ ದೇಶದ ತುಂಬ ಸ್ವಾತಂತ್ರ್ಯದ ಉತ್ಸಾಹ ಹರಡುತ್ತಲೇ ಇತ್ತು. ಆದರೆ ಸ್ವಾತಂತ್ರ್ಯದ ಹೆಸರಿನಲ್ಲಿ ವಾರದಲ್ಲೇ ಹರಡಿದ ಜಾತಿಯ ಮಾರಣ ಹೋಮ, ಹಿಂಸೆ, ಕೊಲೆ, ಸಾವು, ನೋವು, ಹೀಗೆ ಅಭ್ಯಾಸದ ನಡುವೆ ಸಾವಿತ್ರಿ ರೂಢಿಸಿಕೊಂಡಿದ್ದ ದಿನ ಪತ್ರಿಕೆಗಳ ಓದು ತಿಳಿಸುತ್ತಿದ್ದುದೆಲ್ಲ ನಿರಾಶ್ರಿತರ ಗೋಳಿನ ಕಣ್ಣೀರಿನ ಕತೆಯನ್ನೇ. ಇಲ್ಲಿ ಗಾಂಧೀನಾಯಕತ್ವದಲ್ಲಿ, ದೇಶಕ್ಕೆ. ಅಹಿಂಸೆ, ಶಾಂತಿ, ಸತ್ಯಾಗ್ರಹ ಮೊದಲಾದ ತತ್ವಗಳಿಂದ ಸ್ವಾತಂತ್ರ್ಯ ಪಡೆಯಬೇಕೆಂಬ ಗಾಂಧಿವಾದಿಗಳ ಹಂಬಲವಿದ್ದರೂ ಕೊನೆಗೆ ಕ್ರಾಂತಿಯ ಮೂಲಕನೇ ಸ್ವಾತಂತ್ರ್ಯ ಬಂದದ್ದು ಎಂಬ ವಾದ ಕಾಣಿಸುತ್ತದೆ. ಆದರೆ ಅಹಿಂಸೆ, ಶಾಂತಿಯ ಉಪದೇಶವನ್ನೇ ಮಾಡುತ್ತಿದ್ದ ಗಾಂಧೀಜೀಯು ಸ್ವಾತಂತ್ರ್ಯ ಬಂದು ವರ್ಷದಲ್ಲೇ ಹಿಂಸೆಯಿಂದ ಸಾವಪ್ಪುವುದು ದುಃಖದ ಸಂಗತಿಯಾಗಿ ಕಂಡುಬರುತ್ತದೆ. ಇದು ವಿರೋದಾಭಾಸದಂತೆ ಕಾಣುತ್ತದೆ. ಆದರೆ ಗಾಂಧಿಯ ಅಹಿಂಸಾ ತತ್ವಗಳು ಹಾಗೂ ಬೋಸ್‌ರ ಕ್ರಾಂತಿಕಾರಿ(ಕಮ್ಯುನಿಷ್ಟ್) ತತ್ವಗಳ ಮುಖ್ಯ ಉದ್ದೇಶ ಒಂದೇ ಆಗಿ ಕಾಣುವುದು ಪ್ರಮುಖವಾದುದು. ಆದರೆ ಬದಲಾದ ಸಾವಿತ್ರಿಯ ಮಾವ (ಶ್ರೀಕಂಠಶಾಸ್ತ್ರೀ) ಗಾಂಧಿಯ ಟೊಪ್ಪಿ, ಹಾಕಿದನ್ನು ನೋಡಿ "ಗಾಂಧಿ ಇನ್ನಿಲ್ಲ ಮಾವಯ್ಯ.... ಗಾಂಧಿ ಇನ್ನಿಲ್ಲ....ಟೊಪ್ಪಿ ಮಾತ್ರ ಇದೆ"(ಪು೪೬)ಎನ್ನುವ ಸಾವಿತ್ರಿಯ ಮಾತಿನಲ್ಲಿ ದುಃಖ ಇದ್ದರೂ ಗಾಂಧಿಯ ಆದರ್ಶಗಳು, ಅವರ ತತ್ವಗಳು ನಮ್ಮ ಜೊತೆಗಿವೆ. ಅವುಗಳ ಮೂಲಕ ಸಮಾಜೋದ್ಧಾರ ಮಾಡಬೇಕು ಎನ್ನುವುದು ಕಾದಂಬರಿಯ ಆಶಯವಾಗಿ ಉಳಿದಂತೆ ತೋರುತ್ತದೆ.

ಸಾಮಾಜಿಕ ಜೀವನದಲ್ಲಿ ಸಂಪ್ರದಾಯಗಳ ವಿರುದ್ಧ ಮನೋಭಾವವನ್ನು ಬೆಳೆಸಿಕೊಂಡ ವಿದ್ಯಾವಂತ ವರ್ಗವು ನಾಡಿಗೆ ಗಾಂಧೀಬಂದ ಹಿನ್ನೆಲೆಯಲ್ಲಿ ಅವರ ಪ್ರಭಾವಕ್ಕೆ ಒಳಗಾಗಿ ಸಮಾಜದ ಪರಿವರ್ತನೆಗಾಗಿ, ಬ್ರಿಟಿಷ್ ವಸಾಹತುಶಾಹಿ ಆಡಳಿತದ ವಿರುದ್ಧ, ಹೋರಾಟದ ಪ್ರಜ್ಞೆಯನ್ನು ಮೂಡಿಸುವಲ್ಲಿ, ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವಲ್ಲಿ, ಪ್ರಜ್ಞಾವಂತರು ಯೋಚಿಸಿದ ಕ್ರಮ ಇಲ್ಲಿ ವ್ಯಕ್ತವಾಗಿದೆ.

ನಾಡಿಗೆ ಗಾಂಧೀಜೀ ಅವರು ನಾಡಿಗೆ ಬಂದ ಹಿನ್ನೆಲೆಯಲ್ಲಿ ಬಿಚ್ಚಿಕೊಳ್ಳುವ ಕನ್ನಡ ಜಿಲ್ಲೆಯ ಗ್ರಾಮೀಣ ಪರಿಸರದಲ್ಲಿದ್ದ ಬದುಕು ವಿಶಿಷ್ಟವಾದದ್ದು. ವಸ್ತು ಒಂದೇಯಾಗಿದ್ದರೂ ಕಾದಂಬರಿಯ ರಚನಾ ಕೌಶಲ್ಯ ಬೇರೆ ಬೇರೆಯಾಗಿರುವಂತದ್ದು. 'ಗಾಂಧಿಬಂದ' ಕಾದಂಬರಿಯಲ್ಲಿ ಸಂಪ್ರದಾಯಸ್ಥರು,

ಜಮೀನ್ದಾರರ ಗೇಣಿಪದ್ಧತಿ, ಇದನ್ನು ಸಾಗುಮಾಡುವ ಒಕ್ಕಲಾಳು ಇದರಿಂದ ಬದುಕುವ ದುಡಿಯುವ ವರ್ಗದ ಬದುಕು, ಇವರ ದೈವ ಶ್ರದ್ಧೆ. ಆಚರಣೆಗಳು, ಗಾಂಧೀಜಿಯ ಪ್ರಭಾವದಿಂದ ಪ್ರಭಾವಿತರಾದ, ಸುಸಂಸ್ಕೃತ ವರ್ಗ, ಇವರ ಜೊತೆಗೆ ನಿರಂತರ ಹಸಿವಿನಿಂದ ಕೂಡಿದ, ಸಮುದಾಯದ ಎಲ್ಲರನ್ನೂ ಒಂದುಗೂಡಿಸುವ ಅಂಶ ಕಾದಂಬರಿಯಲ್ಲಿ ಮುಖ್ಯವಾದದ್ದು. ಈ ಎಲ್ಲಾ ಅನುಭವದ ಮೂಲಕ ಸಾರವತ್ತಾಗಿ ಕಥೆ ಕಟ್ಟಿಕೊಡುವಲ್ಲಿ ಲೇಖಕಿಯ ಧೋರಣೆ ಒಂದು ಸಂಸ್ಕೃತಿಯ ನಾಡಿಮಿಡಿತವನ್ನು ಕಾಣಿಸುವುದೇ ಆಗಿದೆ. ಆದರೆ 'ಹೆಜ್ಜೆ' ಕಾದಂಬರಿ ಕೇವಲ ಒಂದು ಕುಟುಂಬಕ್ಕೆ ಸೀಮಿತವಾಗಿದೆ.

'ಗಾಂಧಿಬಂದ' ಕಾದಂಬರಿ ರಾಜಕೀಯ ವಿಷಯಗಳನ್ನೊಳಗೊಂಡಿದ್ದರೂ, ಅದು ಸಾಮಾಜಿಕವೇ ಆದ ಜೀವನ ಚಿತ್ರಣವನ್ನು ಹೊಂದಿದೆ. ಆದರೆ 'ಹೆಜ್ಜೆ' ಕಾದಂಬರಿ ರಾಜಕೀಯ ಅಂಶಗಳನ್ನೇ ಹೇಳುವುದು ಮುಖ್ಯವಾದ್ದರಿಂದ. ಸಾಮಾಜಿಕವಾದ ಅಂಶಗಳು ಇದಕ್ಕೆ ಪೂರಕವಾಗಿ ತಕ್ಕಮಟ್ಟಿಗೆ ಕಾಣಿಸಿಕೊಂಡಿವೆ.

ಎರಡೂ ಕಾದಂಬರಿಯಲ್ಲಿ ಸಂಪ್ರದಾಯಸ್ಥ ಕುಟುಂಬದ ಬದುಕು, ಕೆಳವರ್ಗದ ಜೀವನ ಕ್ರಮವು ಗಾಂಧೀಜಿ ಬಂದ ಪರಿಣಾಮವಾಗಿ ಅಲ್ಲಿನ ಕುಟುಂಬ ಅಥವಾ ವ್ಯಕ್ತಿಗಳಲ್ಲಿ ಬದಲಾವಣೆಗಳು ಶುರುವಾಗುತ್ತವೆ. ಇಡೀ ಪರಿಸರದಲ್ಲಿನ ಜನರನ್ನು ಒಟ್ಟುಗೂಡಿಸಿ, ಅವರಲ್ಲಿ ಬದಲಾವಣೆಯನ್ನು ತರಲು ಎರಡೂ ಕಾದಂಬರಿಗಳಲ್ಲಿ ಗಾಂಧಿವಾದಿಗಳಾದ ಮಾರಪ್ಪ ಶೆಟ್ಟಿ, ತಿಂಗಳಾಯ, ಅದ್ರಾಮ, - ವಿದ್ಯಾಧರ, ಸಾವಿತ್ರಿ ಇವರ ಹಿತೈಷಿಗಳಾದ ಪಾಂಡುಶೆಟ್ಟಿ, ತೌಡಶೆಟ್ಟಿ, ಸುಧಾಕರರಾವ್, ಸಂಕಯ್ಯ ಮಾಸ್ತರ್, ಮಖನ್‌ವಾಲಾ, ರಫಿಸುರ್ತಿ ಇವರೆಲ್ಲ ಕಾಣಿಸಿಕೊಂಡಿದ್ದಾರೆ.

'ಗಾಂಧಿಬಂದ' ಕಾದಂಬರಿ ವಿಶಿಷ್ಟ ಆಚರಣೆಗಳ ಮೂಲಕ ಪ್ರದೇಶಿಕ ಜನರ ಜೀವನದ ರೀತಿ ನೀತಿಗಳನ್ನು, ಸಂಪ್ರದಾಯಸ್ಥ ಕುಟುಂಬಗಳಲ್ಲಿನ ಧೀಮಂತ ವ್ಯಕ್ತಿಗಳು, ಕೆಳವರ್ಗದ ಜನರನ್ನು ದಾರುಣವಾಗಿ ದುಡಿಸಿಕೊಳ್ಳುವ ಶೋಷಿಸುವ ಪರಿಯನ್ನು ಚಿತ್ರಿಸುತ್ತದೆ. ಇಂತವರಲ್ಲಿ ಸಂಪ್ರದಾಯ ನಿಷ್ಟರಾದ ಶೀನಪ್ಪಯ್ಯ ಹೆಬ್ಬಾರರು ಶೋಷಣೆಯ ಪ್ರತೀಕವಾಗಿದ್ದಾರೆ. ದ್ರೌಪದಿಗೆ ಸಂಪ್ರದಾಯಬದ್ಧ ತಂದೆ- ತಾಯಿಗಳೇ ನಾನಾಹಿಂಸೆ, ನಿರ್ಬಂಧ ಹಾಕುತ್ತಾರೆ. ಹೆತ್ತರವ ಸಣ್ಣತನ, ಆತುರಬುದ್ಧಿ ವಂಚನೆಗಳೆದುರು ವಿಚಲಿತಳಾದರೂ ಸಂಪ್ರದಾಯದ ಕೊಳಕುತನದ ವಿರುದ್ಧ ಅಸಹನೇ ಹೊಂದಿದಾಗ ಆದ್ರಾಮನೆ ಇವಳನ್ನು ಮರು ಮದುವೆಯಾಗುವ ಮೂಲಕ ಪಾರು ಮಾಡುತ್ತಾನೆ. ಬದುಕಿನ ಬಗ್ಗೆ ನಿಜವಾದ ಸ್ಪಂದನೆಯುಳ್ಳ ದ್ರೌಪದಿ ಸ್ತ್ರೀ ಪ್ರಗತಿಯ ಸೂಚಕವಾಗಿದ್ದಾಳೆ. ಸಂಪ್ರದಾಯ. ಇಡೀ ಸಮಾಜದ ಹೆಣ್ಣಿನ ಸಾಂಸ್ಕೃತಿಕ ಸ್ಥಿತಿಯನ್ನು ತೆರೆದಿಡುವಂತ ಆ ಸಮುದಾಯದ ಅಂತ್ಯ ಶೋಧನೆಗೆ

ಕಾರಣ ಈಕೆಯೇ ಆಗಿರುವುದು ಇಲ್ಲಿನ ವೈಶಿಷ್ಟ್ಯ. ಆದರೆ 'ಹೆಜ್ಜೆ' ಕಾದಂಬರಿ ರಾಜಕೀಯ ಹೋರಾಟವನ್ನು ಬಿಂಬಿಸುವ ಕಾದಂಬರಿ. ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಕಾಲದಲ್ಲಿ ಮತ್ತು ಗಾಂಧೀಜಿಯ ನಾಯಕತ್ವದ ಕಾಂಗ್ರೆಸನ ಸ್ವತಂತ್ರ್ಯ ಹೋರಾಟದ ಸಮಯದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ ಪರಿಸರದಲ್ಲಿನ ಕೊಡದೂರು-ಕೆಡದೂರುಗಳನ್ನು ಕೇಂದ್ರ ವಾಗಿಟ್ಟುಕೊಂಡು, ಸಂಪ್ರದಾಯಸ್ಥ ಕುಟುಂಬದ ಬದುಕು, ಕೆಳವರ್ಗದ ಜೀವನ, ಗಾಂಧೀಜಿಯ ಅವರ ಪ್ರಭಾವಕ್ಕೆ ಒಳಗಾದ ಸುಶಿಕ್ಷಿತ ಸುಸಂಸ್ಕೃತ ವಿದ್ಯಾವಂತ ವರ್ಗ ಇಡೀ ಸಮುದಾಯದ ಎಲ್ಲರನ್ನೂ ಬದಲಾವಣೆ ಮಾಡುವ, ಆ ಮೂಲಕ ಯುವ ಜನಾಂಗವು ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಂದಿಸಿದ ರೀತಿಯನ್ನು ಹಾಗೂ ಮುಂಬೈ ಜೀವನದ ಒಳನೋಟಗಳನ್ನು ವಿಶಿಷ್ಟವೆನಿಸುವ ರೀತಿಯಲ್ಲಿ ಚಿತ್ರಿಸುತ್ತದೆ.

ಈ ಕಾದಂಬರಿಯಲ್ಲಿನ ನಾಯಕಿ ಗಾಂಧೀಜಿಯ ಪ್ರಗತಿಪರ ವಿಚಾರಗಳನ್ನು ತನ್ನ ಚಿಕ್ಕಪ್ಪ ಶಂಕರ ಸೋಮಯಾಜಿಯಿಂದ ತಿಳಿದವಳು. ಅವರ ಆದರ್ಶಗಳಿಗೆ ಒಳಗಾದವಳು. ಆದರೆ ಸಂಪ್ರದಾಯಸ್ಥವಾದ ಇವರ ಕುಟುಂಬ ಹೇಗೆ ಗಾಂಧಿಯ ಪ್ರಭಾವಕ್ಕೆ ಒಳಗಾಯಿತು ಎನ್ನುವುದು ಕಾದಂಬರಿಯಲ್ಲಿ ಮೂಡಿಬಂದಿದೆ. ಸಾವಿತ್ರಿ - ವಿದ್ಯಾನನ್ನು ಮದುವೆಯಾಗುವ ಮೂಲಕ ಗಾಂಧಿಯ ಸಮಾಜೋದ್ಧಾರದ [illegible] ಸಿಕ್ತು. ತಮ್ಮ ಕುಟುಂಬದಲ್ಲಿ ಬದಲಾವಣೆ ತರುವ ಮೂಲಕ ಸಮಾಜದ ವ್ಯವಸ್ಥೆಯ ಎಲ್ಲಾ ಸ್ತರಗಳಲ್ಲೂ ಸುಧಾರಣೆ ತರಲು ರಾಜಕೀಯ ಹೋರಾಟದಲ್ಲಿ ಲೀನವಾಗುವ ವಿದ್ಯಾ ಆದರ್ಶ ಪಾತ್ರವಾಗಿ ಚಿತ್ರಿಸಲಾಗಿದೆ. ಆ ಮೂಲಕ ವಿಧವೆಯಾಗುವ ಸಾವಿತ್ರಿ ಗಾಂಧಿಯ ತತ್ವಗಳನ್ನು ಅನುಸರಿಸುವ ಜೊತೆಯಲ್ಲಿಯೇ ಆಕೆ ಬಂಡೆದ್ದ ಯುವಶಕ್ತಿಯ ಪ್ರಾಮಾಣಿಕ ಜೀವನಾಕಾಂಕ್ಷೆಯ ಪ್ರತೀಕವೂ ಆಗುತ್ತಾಳೆ. ಮಾನವರೆಲ್ಲರ ನೋವು-ಯಾತನೆಗಳಿಗೆ, ವಾಹಕವಾಗುವ ಉದಾತ್ತ ಪಾತ್ರವಾಗಿದ್ದಾಳೆ. ಈ ಎಲ್ಲಾ ಬದಲಾವಣೆಗೆ ಸಾವಿತ್ರಿ ಯೇ ಕಾರಣಳಾಗುತ್ತಾಳೆ. ಇಲ್ಲಿ ದ್ರೌಪದಿ ಹಾಗೂ ಶಾಂಭವಿ ವೈಚಾರಿಕತೆಯ ನಿಲುವಿನಲ್ಲಿ ಸಮಾನಾಗಿ ನಿಲ್ಲುವವರು.

ಈ ಎರಡೂ ಕಾದಂಬರಿಗಳಲ್ಲಿನ ಸ್ತ್ರೀ ಪಾತ್ರಗಳಾದ ದ್ರೌಪದಿ, ದಾರು, ಮತ್ತು ಪುಟ್ಟಮ್ಮ ಹಾಗೂ ಸಾವಿತ್ರಿ, ಶಾಂಭವಿ ಮತ್ತು ನಾಗಿ ಸ್ತ್ರೀಯರು ಸಾಮಾಜಿಕ ಪರಿವರ್ತನೆಗೆ ಕಾರಣರಾಗುವ ನೆಲೆಯನ್ನು ಕಾದಂಬರಿಯ ಉದ್ದಕ್ಕೂ ಕಾಣಬಹುದು.

ಅಧ್ಯಾಯ ೪

ಸಾಮಾಜಿಕ ಜೀವನದಲ್ಲಿ ಗಾಂಧಿ ಆಗಮನದಿಂದಾಗುವ ಪರಿವರ್ತನೆಗಳು

ಗಾಂಧಿಬಂದ

ತುಳುನಾಡ ಜಾನಪದೀಯ ಸಾಂಸ್ಕೃತಿಕ ಆಚರಣೆಗಳನ್ನು ಹತ್ತಿರದಿಂದಲೇ ಕಂಡ ಕಾದಂಬರಿಕಾರರು ಆ ವಿಶಿಷ್ಟ ಸಂಸ್ಕೃತಿಯನ್ನು ಪರಿಚಯಿಸುತ್ತಲೇ ಸಾಮಾಜಿಕ ಸಮಸ್ಯೆಗಳ ಜೊತೆಗೆ ರಾಜಕೀಯ ಹೋರಾಟವನ್ನು ಚಿತ್ರಿಸಿದ್ದಾರೆ.

ಬ್ರಿಟೀಶ್ ವಸಾಹತುಶಾಹಿ ಆಡಳಿತದಿಂದ ಭಾರತವನ್ನು ಮುಕ್ತಿಗೊಳಿಸುವ ಕ್ರಿಯಾತ್ಮಕ ಕಾರ್ಯ ಗಾಂಧೀಜೀ ಮತ್ತು ಇತರ ರಾಷ್ಟ್ರೀಯ ನಾಯಕರ ನೇತೃತ್ವ ಗಟ್ಟಿಗೊಂಡಿತು. ಭಾರತದ ಸ್ವಾತಂತ್ರ್ಯ ಹೋರಾಟದ ಸಂಘಟನೆಗಾಗಿ ಭಾರತದಾದ್ಯಂತ ಗಾಂಧೀಜೀ ಸಂಚರಿಸಿದರು. ಈ ಸಂದರ್ಭದಲ್ಲಿಯೇ ಮಂಗಳೂರು ಪ್ರದೇಶದ ಸಾಮಾಜಿಕ ಜೀವನದ ಮೇಲೂ ಪರಿಣಾಮ ಬೀರಿ ನಾಡಿನ ಜನತೆಯಲ್ಲಾದ ಬದಲಾವಣೆ, ಆ ಮೂಲಕ ಸುಧಾರಣೆಯ ನೈತಿಕ ಹೋರಾಟ ಕಾದಂಬರಿಯಲ್ಲಿ ಮಿಳಿತಗೊಂಡಿದೆ.

ಗಾಂಧೀಜಿಯ ವಿಚಾರಗಳಿಂದ ಪ್ರೇರಿತರಾದ ಕಾದಂಬರಿಯ ಆದರ್ಶ ಪಾತ್ರಗಳಾದ ಮಾರಪ್ಪಶೆಟ್ಟಿ, ತಿಂಗಳಾಯ ಮತ್ತು ಅದ್ರಾಮರು ಭಿನ್ನ ಸಮುದಾಯದವರಾಗಿದ್ದರೂ ಗಾಂಧೀಯ ತತ್ವಗಳಾದ ಹರಿಜನೋದ್ಧಾರ. ವಿಧವಾವಿವಾಹ, ಖಾದಿ, ಪಾನ ನಿಷೇದ, ವರ್ಗ ವೈಷಮ್ಯಗಳನ್ನು ಇಲ್ಲವಾಗಿಸುವ,

ಆದರ್ಶದ ಕನಸು ಹೊತ್ತ ಈ ಪಾತ್ರಗಳು ಜನರಲ್ಲಿ ಗಾಂಧೀಜಿಯ ವಿಚಾರಗಳನ್ನು ಪ್ರೇರೇಪಿಸಿ, ಆ ಮೂಲಕ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಂದಿಸಿದ ರೀತಿಯನ್ನು, ಅದರ ಜೊತೆಯಲ್ಲೆ ದಟ್ಟವಾದ ಸಾಮಾಜಿಕ ಬದುಕಿನಲ್ಲಿ ತಿರುವುಗಳನ್ನು ತಂದು ಕೊಡುವ ಪಾತ್ರಗಳಾಗಿವೆ. ಕರಾವಳಿಯ ವಿಶಿಷ್ಟ ಸಾಂಸ್ಕೃತಿಕ ಆಚರಣೆಗಳನ್ನು ಬಿಂಬಿಸುವ ಮೂಲಕ ಪ್ರಾರಂಭವಾಗುವ ಕಾದಂಬರಿ ಸುರಗಿಮಠದ ಪ್ರತಿಷ್ಠಿತ ಸಂಪ್ರದಾಯಸ್ಥ ಕುಟುಂಬದ ಸೀನಪಯ್ಯ ಹೆಬ್ಬಾರರ ಮಗಳು ಎಳೆಯ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡವಳು. "ಜಟಕಾ ಒಡೆಮ ಜೀವನ ಸಾಗಿಸುತ್ತಿದ್ದ ಗಾಂಧಿಯ ಹುಚ್ಚು ಹಚ್ಚಿಕೊಂಡ, ಮುಸ್ಲಿಂನಾದ ಅದ್ರಾಮನನ್ನು ಹೆಬ್ಬಾರರು ಜಟಕಾ ನಿಲ್ಲಿಸಿ, ಮಾಬಲ ಬಂಢಾರಿಯನ್ನು ಇಲ್ಲಿಗೆ ಕಳಿಸಿಕೊಡು ಮಾರಾಯ....... ದ್ರೌಪದಿಯ ತಲೆ ಬೋಳಿಸುವುದಿದೆ" ಎನ್ನುವ ಮಾತಿಗೆ "ತಲೆಬೋಳಿಸಿದರೆ ಆಕೆಯ ಹೋದ ಬದುಕು ಮರಳಿ ಮತ್ತೆ ಬರುತ್ತಾ ಭಟ್ರೇ, ಆಕೆಗೊಂದು ಮದುವೆ ಮಾಡಿಬಿಡಿ"(ಪು.೧೫)ಎನ್ನುವ ಅದ್ರಾಮನ ಮಾತು ಇಡೀ ಸಮಾಜದ ಸಂಪ್ರದಾಯ ಕುಟುಂಬಕ್ಕೆ ನೀತಿಯ ಮಾತಿನಂತೆ ಹಾಗೂ ಹೆಣ್ಣಿನ ಬದುಕು ಹಸನಾಗಬೇಕು, ಮರಳಿ ಜೀವನ ಪಡೆಯಬೇಕು, ಈ ನಿಟ್ಟಿನಲ್ಲಿ ಸಮಾಜದಲ್ಲಿ ಸ್ತ್ರೀ ಪ್ರಗತಿಯಾಗಬೇಕು ಎನ್ನುವುದನ್ನು ಧ್ವನಿಸುತ್ತದೆ. ಇದು ಗಾಂಧೀ ಅನುಯಾಯಿಯಾದ ಅದ್ರಾಮನಿಂದ ನಡೆದದ್ದು.

ಅದ್ರಾಮ ಮತ್ತು ದ್ರೌಪದಿಯ ನಿಷ್ಕಲ್ಮಷವಾದ ಎರಡು ಮನಸ್ಸುಗಳಲ್ಲಿ ಯೌವ್ವನ ಸಹಜ ಜೀವನೋತ್ಸಾಹ, ಸಹಜವಾಗಿಯೇ ಅದುಮಿಡಲಾಗದ ಭಾವನೆಗಳು ಇವರಲ್ಲಿ ಉಕ್ಕಿ, ಸಂಪ್ರದಾಯದ ವಿರೋಧದ ನಡುವೆಯೇ ಇವರ ಪ್ರೇಮ ಬಲಿತು ಬೆಳೆಯುತ್ತದೆ. ಇದಕ್ಕೆ ಗುತ್ತಿನ, ಮಾರಪ್ಪನಾದಿಯಾಗಿ ಇಡೀ ಶೂದ್ರರೆಲ್ಲರ ನೆರವುಸಿಕ್ಕು ಆಕೆಯನ್ನು ಹಾರಿಸಿಕೊಂಡು ಹೋಗಿ ಅದ್ರಾಮ ಮರು ಮದುವೆಯಾಗುತ್ತಾನೆ. ಇಲ್ಲಿ ದ್ರೌಪದಿ ಸಂಪ್ರದಾಯದ ಕಟ್ಟಳೆಗಳನ್ನು ಮೀರಿ ಅವುಗಳು ಕೊಡುವ ನೋವೆ ಅವಳನ್ನು ಬಿಡುಗಡೆಗೆ ಎಳೆಸಿದವು. ಆಗ ಅವರು ತಮ್ಮದೆ ಆದ ಪುಟ್ಟ ಸಂಸಾರವನ್ನು ಹೊಂದುತ್ತಾರೆ. ನಂತರ ಗಾಂಧೀಜಿಯ ಸಮಾಜೋದ್ಧಾರದ ತತ್ವಗಳಲ್ಲಿ ಪ್ರಭಾವಿತನಾದ ಅದ್ರಾಮ ಉಪ್ಪಿನ ಸತ್ಯಾಗ್ರಹದ ಚಳುವಳಿಯಲ್ಲಿ ಭಾಗವಹಿಸಿ ಸಾವನ್ನಪ್ಪುತ್ತಾನೆ. ಕಾದಂಬರಿಯಲ್ಲಿ ಬ್ರಾಹ್ಮಣ್ಯದ ಕಠೋರ-ಕಟ್ಟಳೆಗಳನ್ನು ವಿನೋದ ಮತ್ತು ವಿಡಂಬನೆ ಮಾಡುತ್ತಾ ದ್ರೌಪದಿಯನ್ನು ಸಂಪ್ರದಾಯದಿಂದ ಹೊರಗೆಳೆದು ವಿಧವೆ ಹೆಣ್ಣಿಗೆ ಮರುಮದುವೆ ಮಾಡುವಲ್ಲಿ ಧಾರ್ಮಿಕ ಬದಲಾವಣೆ ತರಲು ಅದ್ರಾಮನ ಪಾತ್ರವನ್ನು ತಾನು ಗಟ್ಟಿಯಾಗಿ ನಂಬಿದ ಮೌಲ್ಯಗಳ ಪ್ರತಿಪಾದನೆಗೆಬೇಕಾದಂತೆ ಕಾದಂಬರಿಕಾರರು ದುಡಿಸಿಕೊಂಡಿದ್ದಾರೆ. ಸ್ತ್ರೀ ಸೌಂದರ್ಯಕ್ಕೆ ಸಹಜವಾದ ಸೌಭಾಗ್ಯವನ್ನು ಅಥವಾ

ಹೆಣ್ಣಿಗೆ ಶಾಶ್ವತವಾಗಿರಬೇಕು ಎಂದು ಬಯಸುವ ಹೂವು, ಕುಂಕುಮ, ಮೂಗುತಿ ಮೊದಲಾದ ಅಲಂಕಾರಿಕ ವಸ್ತುಗಳನ್ನು ಗಾಂಧಿಯ ಮೂಲಕ ಕೊಡಿಸುವಲ್ಲಿ, ಸಮಾಜದಲ್ಲಿ ಈ ಪ್ರಕ್ರಿಯೆ ಬೇರೂರಬೇಕೆನ್ನುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಕಾದಂಬರಿಯ ಮುಖ್ಯವಾದ ಅಂಶಗಳಲ್ಲಿ ದ್ರೌಪದಿಯನ್ನು ಇಂಥ ವ್ಯವಸ್ಥೆಯ ವಿರುದ್ಧ ಎತ್ತಿ ಕಟ್ಟುವುದು ಒಂದಾಗಿದೆ.

ಇನ್ನೊಂದು ಕಡೆ ಕಟ್ಟಾ ಗಾಂಧಿವಾದಿಯಾದ ಮಾರಪ್ಪಶೆಟ್ಟಿ ತಾಯಿ ಸೂರಕ್ಕೆಯ ವಿರೋಧದ ನಡುವೆಯೇ ನಾಡಿನಲ್ಲಿ ಖಾದಿ ತತ್ವ, ಹರಿಜನೋದ್ಧಾರ, ಪಾನ ನಿಷೇಧ, ಅಸಹಕಾರ ಚಳುವಳಿಗಳ ಬಗ್ಗೆ ಪ್ರಚಾರ ಮಾಡುತ್ತಾ ಗಾಂಧಿಯ ವಿಚಾರಗಳನ್ನು ಜನರಲ್ಲಿ ಬಿತ್ತುತ್ತಾ ಜಾಗೃತಗೊಳಿಸುತ್ತಾನೆ. ತಾನು ಮದುವೆಯಾದರೆ ಗಾಂಧಿಯ ತತ್ವಗಳ ಪ್ರಚಾರ ಹಾಗೂ ಸ್ವಾತಂತ್ರ್ಯ ಸಂಘಟನೆಗೆ ಧಕ್ಕೆಯಾಗುತ್ತದೆಂದು ತಿಳಿದಿದ್ದ ಈತ "ಧಾರುಣ ವೈಧವ್ಯದ ವ್ಯಥೆಯಲ್ಲಿ ಬೇಯುತ್ತಿರುವ ಮಹಿಳೆಗೆ ಬದುಕು ನೀಡುವುದೇ ನಿಜವಾದ ಮಾನವತೆ"(ಪು.೯೮)ಎನ್ನುವ ಕಾರ್ನಾಡ ಸದಾಶಿವರಾಯರ ಭಾಷಣದ ಮೋಡಿಗೆ ಒಳಗಾಗಿ ತಾನು ಅಂತ ಒಂದು ಹೆಣ್ಣಿಗೆ ಬಾಳು ಕೊಡಬೇಕೆಂದು ಆಲೋಚಿಸಿದ. ಆದರೆ ಹಾಗಾಗದೆ ಪ್ರಕೃತಿಯ ಶಿಕ್ಷೆಗೆ ಗುರಿಯಾಗಿ ಶಿಕಂಡಿ ಅಪವಾದ ಹೊತ್ತ, ಜೀವನದಲ್ಲಿ ನೊಂದ ಸುಬ್ಬಯ್ಯಶೆಟ್ಟರ ಮಗಳು ದಾರುವಿಗೆ ಬಾಳುಕೊಡುತ್ತಾನೆ. ಆ ಮೂಲಕ ಮಾರಪ್ಪ ಗಾಂಧಿಯ ಸಮಾಜೋದ್ಧಾರದ ಕನಸನ್ನು ನನಸು ಮಾಡಿದ. ಇದರ ಪರಿಣಾಮವಾಗಿ ಕುಟುಂಬ ಹಾಗೂ ವ್ಯಕ್ತಿಗಳಲ್ಲಿನ ಸಂಕಷ್ಟಗಳು ದೂರವಾಗಿ ಸಮಾಜ ಬದಲಾವಣೆಗೆ ಪ್ರೇರಕವಾಗಿದೆ.

ಗಾಂಧೀಜೀಯ ತತ್ವಗಳಲ್ಲಿ ಒಂದಾದ ಹರಿಜನೋದ್ಧಾರವು ಕಾದಂಬರಿಯ ಪ್ರಮುಖ ಅಂಶಗಳಲ್ಲೊಂದು. ಜಮೀನ್ದಾರರಲ್ಲಿ ಜೀತದಾಳುಗಳಾಗಿ ಕೊರಗರ ಪೊತ್ಪೆಲ, ಐತು, ಬೆಸ್ತರು, ಶೂದ್ರರ ಕೂಸಮ್ಮೆಲಿ, ಅಂತಪ್ಪೂಜಾರಿ, ಅಂಗರ ಮೂಲ್ಯ, ಗುತ್ತಿನ ಫಿಜಿನ ಮೂಲ್ಯ, ಮಂಜಪ್ಪ, ಮುಂಡಾಲರಮುಕಾರಿ ಬಾಡ, ಮುಗೇರರದೋಗು, ಹೆಬ್ಬಾರರ ಮೂಲ ಗೇಣಿ, ಚಾಲಗೇಣಿ ಒಕ್ಕಲಿಗರೆಲ್ಲ ಕೆಲಸ ಮಾಡಿದರೂ, ಗಾಂಧಿ ಮಂಗಳೂರಿಗೆ ಬಂದು ಹೋದದು ಅವರ ಪ್ರಭಾವಕ್ಕೆ ಒಳಗಾದ ಹಾಗೂ ಗಾಂಧಿವಾದಿಗಳಾದ ಮಾರಪ್ಪ, ತಿಂಗಳಾಯರ ಪ್ರೇರಣೆಯಿಂದ ಜಮೀನ್ದಾರರ ವಿರುದ್ಧ ಮಾತಾಡುವ, ಯೋಗತ್ಯೆಯನ್ನು ಬೆಳೆಸಿಕೊಳ್ಳುತ್ತಾರೆ. ಒಮ್ಮೆ ಪೆಣಂಬೂರು ದೇವಸ್ಥಾನದ ಅರ್ಚಕ ಭೂತೈತಾಳರು ಶೂದ್ರರನ್ನು ಶೋಷಿಸುವ, ಜಾತಿ ಭೇದ ಮಾಡುವ ಕ್ರಮವನ್ನು ಗಾಂಧಿವಾದಿಗಳಾದ ಕಾರ್ನಾಡ ಸದಾಶಿವರಾಯ, ಮಾರಪ್ಪ, ತಿಂಗಳಾಯ ಭೂತೈತಾಳರನ್ನು ಕಂಡು ಬರುವ ಪೆಣಂಬೂರು ಜಾತ್ರೆಯಲ್ಲಿ ಎಲ್ಲಾ ಜಾತಿಯವರಿಗೂ ದೇವಸ್ಥಾನದ ಒಳಗಡೆ ಹಾಗೂ ಬ್ರಾಹ್ಮಣರ ಜೊತೆಯಲ್ಲೇ ಊಟ

ಬಡಿಸಬೇಕು ಎಂದು ವಾದಿಸಿದರು. ಇದಕ್ಕೆ ಒಪ್ಪದೆ ಇದ್ದರೂ ದೇವಸ್ಥಾನದಲ್ಲಿ ಪ್ರವೇಶ ಪಡೆಯುವಂತೆ ಬದಲಾವಣೆ ಮಾಡಿದರು. ಆ ಮೂಲಕ ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಮಾನತೆಯನ್ನು ನೆಲೆಗೊಳ್ಳಲು ಪ್ರಯತ್ನಿಸಿದರು. ಇದರ ಹಿಂದೆ ಜನಪರವಾದ ಸಾಂಸ್ಕೃತಿಕ ಹೋರಾಟವೇ ಇವರ ಮುಖ್ಯ ಉದ್ದೇಶವಿದ್ದಂತೆ ತೋರುತ್ತದೆ. ಇದರ ಪರಿಣಾಮವಾಗಿ ಗಾಂಧಿಯ ಆಗಮನದಿಂದ ಧಾರ್ಮಿಕವಾಗಿ ಸಂಪ್ರದಾಯಸ್ಥ ಪದ್ಧತಿಗಳು ಬದಲಾದವು.

ಸಾಮಾಜಿಕವಾಗಿ ಜಾತಿಯ ತಾರತಮ್ಯ ನಿವಾರಣೆಗೆ ಪ್ರಯತ್ನಿಸಿದರೂ ಕೆಳಜಾತಿಯಲ್ಲೇ ಜಾತಿಯ ತರತಮ ಹೆಚ್ಚು ಇರುವುದರಿಂದ ಕಾದಂಬರಿಯ ಮಾತುಗಳನ್ನೇ ಉಲ್ಲೇಖಿಸುವುದಾದರೆ, "ಈ ಅಬ್ರಾಹ್ಮಣ ಶೂದ್ರ ಜಗತ್ತಿನೊಳಗೇ ಜಾತಿ-ಬೇಧಗಳ ವಿಷ ಬ್ರಾಹ್ಮಣರಿಗಿಂತ ಸ್ವಲ್ಪ ವಿಷಮವೇ ಇದೆಯೆಂದು ತಿಳಿದ ಮಾರಪ್ಪ-ತಿಂಗಳಾಯ ಅಂದೇ ಅವರಿಬ್ಬರೂ ಈ ವಿಚಾರದಲ್ಲಿ ಮೌನವಾದರು" (ಪು.೧೪೬) ಆದರೆ ಈ ಸಮಸ್ಯೆ ಇಂದಿಗೂ ಬಗೆಯಹರಿಯಲಾರದ್ದಾಗಿ ಬೆಳೆದಿದೆ. ಇದೊಂದು ಸಾಮಾಜಿಕ ಪಿಡುಗು. ಸಮಾಜ ಇರುವವರೆಗೂ ಇದು ತಪ್ಪಿದ್ದಲ್ಲ. ಆದರೆ ಗಾಂಧೀಯ ಚಿಂತನೆ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾದ ಜನತೆ ವೈಯಕ್ತಿಕ ಆಸೆ-ಆಮಿಷಗಳನ್ನು ಮರೆತು ಸ್ವಾತಂತ್ರ್ಯ ಹೋರಾಟದ ಚಳುವಳಿಗೆ ಸಹಾಯಕರಾದರು.

ಸಂಪ್ರದಾಯಸ್ಥ ಕುಟುಂಬದ ಪುಟ್ಟಮ್ಮಕ್ಕ ಗಂಡನಿದ್ದರೂ ಬೇರೊಬ್ಬ ಬ್ರಾಹ್ಮಣರ (ಹೆಬ್ಬಾರರ) ಜೊತೆ ಅನೈತಿಕ ಸಂಸಾರ ಮಾಡಬೇಕಾಗಿ ಅನಿವಾರ್ಯದ ಜೀವನ ನಡೆಸುತ್ತಿದ್ದಳು. ಗಾಂಧೀಯನ್ನು ನೋಡಲು ಹಾತೊರೆಯುವ ಆಕೆಯ ಮನಸ್ಸು "ಗಾಂಧೀ ಮುಖ್ಯವೋ-ಗಂಡ ಮುಖ್ಯವೋ ಎನ್ನುವ ದ್ವಂದ್ವದ ಸುರಳಿಯೊಂದನ್ನು ಎಸೆದು, ಹಾಗೇ ಕಣ್ಣಡ್ಡ ಮಾಡಿದ್ದ ನಾರಾಯಣ ಭಟ್ಟರಿಗೆ ಎಚ್ಚರಿಕೆಯಾಗುವಷ್ಟರಲ್ಲಿ ಪುಟ್ಟಮ್ಮಕ್ಕ ಗಂಡನನ್ನು ಆರಿಸಿಕೊಂಡು, ಗಾಂಧಿಯವರನ್ನು ಬದಿಗೊತ್ತಿದ್ದರು" ಎನ್ನುವ ಕಾದಂಬರಿಯ ಮಾತಿನಲ್ಲಿ, ಈಕೆ ಸಮಾಜ-ಸಂಪ್ರದಾಯಕ್ಕೆ ಸೋಲುವ ಹೆಣ್ಣನ್ನು ಪ್ರತಿನಿಧಿಸುವಂತೆ ಕಾಣುತ್ತಾರೆ.

ಸಂಪ್ರದಾಯದ ಹಳೆಯ ಅನಿಷ್ಟ ಪದ್ಧತಿಗಳು ಬದಲಾಗಬೇಕೆಂದು ಬಯಸುವ ದ್ರೌಪದಿಯ ಮಾವ ಕೇಶವಶಾನುಭೋಗರು ಬದಲಾಗುತ್ತಿರುವ ಸಂಪ್ರದಾಯ ಕುಟುಂಬಗಳ ವ್ಯಕ್ತಿಗಳನ್ನು ಪ್ರತಿನಿಧಿಸುವಂತವರು. ಐತು ಸಂಸಾರ ಕಡಲ ಕೆರೆಯಲ್ಲಿ ಆಮೆ ಹಿಡಿದು ಅದನ್ನು ತಿನ್ನುವುದಾಗಲಿ, ಮಾರುವುದಾಗಲಿ ಕಾರಣ ಇವರ ಹಸಿವನ್ನು ನೀಗಿಸಿಕೊಳ್ಳುವ ಬದುಕಿನ ಕಸುಬಾಗಿತ್ತು. ಆಕಸ್ಮಿಕವಾಗಿ ಗಾಂಧೀವಾದಿ ತಿಂಗಳಾಯರ ಕಣ್ಣಿಗೆ ಬಿದ್ದ ಐತುವಿನ ಆಮೆ ಹಿಡಿಯುವ ಕೆಲಸವನ್ನು ನೋಡಿ "ಬಿಡೋ ಅದನ್ನು:

ಗಾಂಧಿ ಏನು ಹೇಳಿದ್ದಾರೆ ಗೊತ್ತಾ? ಹಿಂಸೆ ಮಾಡಬಾರದು ಅಹಿಂಸೆ....."(ಪು.೩೩೨)ಎನ್ನುವ ತಿಂಗಳಾಯರ ಈ ಮಾತಿಗೆ ಗಾಂಧಿಯ ಹೆಸರು ಕೇಳಿಯೇ ಐತು ಚಪ್ಪಾಗಿ "ಇನ್ನೆಂದು ಆಮೆಯನ್ನು ಹಿಡಿಯಲಾರೆ, ಮೊಟ್ಟೆಯನ್ನು ಕದಿಯಲಾರೆ ಎಂದು ನಿರ್ಧರಿಸಿದ"(ಪು.೩೩೩)ಇಲ್ಲಿ ಗಾಂಧೀಯ ತತ್ವಗಳು ಸಮಾಜದ ಜನರ ಜೀವನಾಡಿಗಳಲ್ಲಿ ಹೇಗೆ ನೈತಿಕತೆಯನ್ನು ತರುವ ಎಚ್ಚರದ ಶಕ್ತಿಗಳಾಗಿದ್ದವು ಎನ್ನುವುದು ಮಹತ್ವದ ಸಂಗತಿಯಾಗಿ ಕಾಣುತ್ತದೆ.

ದೇಶದಲ್ಲಿ ಹರಡಿದ ಪಾನ ನಿಷೇದ ಚಳುವಳಿ, ಸ್ಥಳೀಯರ ಮೇಲೆ ಪ್ರಭಾವ ಬೀರಿತು.ಇದು ಗಾಂಧೀಯ ಮುಖ್ಯ ತತ್ವ ಹಾಗೂ ಕುಡಿತದಿಂದಾಗುವ ನಾಶದ ಬಗ್ಗೆ ಅವರಿಗೆ ಬಂದ ಅರಿವು ಅವರನ್ನು ಹೋರಾಟಕ್ಕೆಳೆಸಿತ್ತು. ಗಾಂಧೀ ಭಕ್ತರಾದ ಮಾರಪ್ಪನ ಪ್ರಯತ್ನದಿಂದ ಕೆಳಜಾತಿಯ ಅಂತಪ್ಪುಜಾರಿ, ಕೂಸ ಮೈಲಿಯಾದಿಯಾಗಿ ಉಳಿದ ಶೂದ್ರರೆಲ್ಲರೂ ಕುಡಿತ ಬಿಟ್ಟರು. ಇದರ ಪರಿಣಾಮವಾಗಿ ಬದುಕು ಹಸನುಗೊಳಿಸಿಕೊಂಡರು, ಸಾಮಾಜಿಕವಾಗಿ ಈ ಅನಿಷ್ಟ ಚಟ ತೊಲಗಿಸಲು ಅವರಿಗೆ ಗಾಂಧೀ ಪ್ರೇರಣೆಯಿಂದ ಸಾಧ್ಯವಾಯಿತು.

ಮಂಗಳೂರು ಪ್ರದೇಶಕ್ಕೆ ಗಾಂಧೀಜಿ ಬಂದ ಪರಿಣಾಮವಾಗಿ ರೂಢಿಸಂಪ್ರದಾಯಗಳ ಸಂಕೋಲೆಗಳಿಂದ ಬಿಡಿಸಿಕೊಂಡು ಬದುಕು ಹೊಸದಾಗಿ ರೂಪಿಸಿಕೊಳ್ಳಬೇಕೆಂಬ ಹಂಬಲದಿಂದ ದ್ರೌಪದಿ, ಅದ್ರಾಮನನ್ನು ಮರು ಮದುವೆಯಾಗುವಲ್ಲಿ, ಮಾರಪ್ಪ ಮಾನವೀಯ ನೆಲೆಯಲ್ಲಿ ದಾರುವಿಗೆ ಬಾಳುಕೊಡುವಲ್ಲಿ ಎಲ್ಲಾ ಶೋಷಿತ ಜೀತದಾಳುಗಳು ಗಾಂಧಿಯ ವಿಚಾರಗಳಿಗೆ ಒಳಗಾಗಿ ಸ್ವಾತಂತ್ರ್ಯದ ಬದುಕನ್ನು ಪಡೆಯುವ ಮೂಲಕ ಧಾರ್ಮಿಕವಾಗಿ, ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕ ಬದಲಾವಣೆಯನ್ನು ತಂದುಕೊಂಡರು.

ಹೆಜ್ಜೆ

ಮಂಗಳೂರು ಪ್ರದೇಶದ ಕೊಡದೂರು, ಕೆಡದೂರು ಮೊದಲಾದ ಗ್ರಾಮೀಣ ಪರಿಸರವನ್ನು ಕೇಂದ್ರವಾಗಿಟ್ಟುಕೊಂಡು ಬೆಳೆಯುವ ಕಾದಂಬರಿ ಇದು. ರಾಜಕೀಯ ವಸ್ತುವುಳ್ಳದ್ದಾದರೂ ಸಾಮಾಜಿಕ ಜೀವನದ ಕಾಲಗತಿಯ ಸ್ಥಿತ್ಯಂತರಗಳನ್ನು ಕಥಾನಕದ ವ್ಯಾಪ್ತಿಗೆ ಒಳಪಡಿಸಿಕೊಂಡಿದೆ. ಜಗತ್ತಿನಲ್ಲಿ ಭೀಕರವಾಗಿ ನಡೆಯುತ್ತಿರುವ ಎರಡನೆಯ ಮಹಾಯುದ್ಧದ ಸಮಯದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ ದಕ್ಷಿಣ ಭಾರತಕ್ಕೆ ಪ್ರಚಾರಕ್ಕೆ ಬಂದ ಸಂದರ್ಭದಲ್ಲಿ ಗಾಂಧಿಯ ವಿಚಾರಗಳಿಂದ ಪ್ರೇರಿತರಾದ ನಾಡಿನ ಜನರಲ್ಲಿ ಹೇಗೆ ಬದಲಾವಣೆಗಳಾದವು? ಆ ಮೂಲಕ ರಾಜಕೀಯ ಸ್ವಾತಂತ್ರ್ಯಕ್ಕೆ

ವಿದ್ಯಾವಂತ ಯುವ ಜನಾಂಗ ಸ್ಪಂದಿಸಿದ ರೀತಿಯನ್ನು, ಸಾವಿತ್ರಿ ಮತ್ತು ವಿಧ್ಯಾರ ಪಾತ್ರದ ಮೂಲಕ ಗಾಂಧೀಜಿಯ ರಾಷ್ಟ್ರೀಯತೆಯ ವಿಚಾರಗಳಿಗೆ ಕ್ರಿಯಾತ್ಮಕ ರೂಪಕೊಡುತ್ತಾ, ಸಮಾಜದ ಸಂಪ್ರದಾಯಿಕ ಮೌಲ್ಯಗಳಲ್ಲಿ, ವ್ಯಕ್ತಿಗಳಲ್ಲಿ ತಿರುವನ್ನು ತರುವ ಮೂಲಕ ಕಥೆ ಸಾಗುತ್ತದೆ.

ಎರಡನೆಯ ಮಹಾಯುದ್ಧದ ಘೋರ ಪರಿಣಾಮಗಳು, ಅದರಿಂದ ಉದಯಿಸಿದ ಸಮಸ್ಯೆಗಳು ಹಾಗೂ ನಾಡಿಗೆ ಗಾಂಧೀ ಬಂದ ಪರಿಣಾಮವಾಗಿ ಭಾರತದ ರಾಜಕೀಯ ಸ್ವಾತಂತ್ರ್ಯಕ್ಕೆ, ದೇಶದ ಹಾಗೂ ನಾಡಿನಲ್ಲಾದ ಸಮಾಜದ ಬದಲಾವಣೆ, ಆ ಮೂಲಕ ಕುಟುಂಬಗಳಲ್ಲಿನ, ವ್ಯಕ್ತಿಗಳಲ್ಲಿನ ಮೌಢ್ಯಗಳನ್ನು ಬದಲಾಯಿಸಿ ಜನರನ್ನು ಹೊಸ ಬದುಕಿಗೆ ರೂಢಿಸುವ ರಾಜಕೀಯ ಸ್ವಾತಂತ್ರ್ಯ ಪಡೆಯುವ ಸುಧಾರಣೆಯ ನೈತಿಕ ಹೋರಾಟ ಕಾದಂಬರಿಯಲ್ಲಿ ವ್ಯಕ್ತವಾಗಿದೆ.

ಕಾದಂಬರಿಯಲ್ಲಿನ ಶ್ರೀಕಂಠಶಾಸ್ತ್ರೀ, ನಾರಾಯಣಶಾಸ್ತ್ರೀ, ವೆಂಕಟೇಶ ಕಮ್ತಿ, ಆನಂದಸೋಮ ಯಾಜಿ, ಪರಮೇಶ್ವರ ಐತಾಳ ಹೀಗೆ ಪ್ರತಿಯೊಂದು ಸಂಪ್ರದಾಯಿಕ ಕುಟುಂಬಗಳು ಕಟ್ಟುನಿಟ್ಟಿನ ಸನಾತನ ಸಂಪ್ರದಾಯದ ಆಚರಣೆಗಳನ್ನು ಹೊಂದಿದವರಾಗಿದ್ದರೂ ಇಲ್ಲಿನ ಪ್ರತಿಯೊಂದು ಕುಟುಂಬದಲ್ಲಿ ಸಾಕಷ್ಟು ವ್ಯತ್ಯಾಸಗಳು ಕಾಣಬಹುದು. ಶ್ರೀಕಂಠಶಾಸ್ತ್ರೀಯ ಮಕ್ಕಳು ಗಂಗಾಧರ, ಶಶಿಧರ, ವಿದ್ಯಾಧರ ಮತ್ತು ಶ್ರೀಧರ ಇವರೆಲ್ಲ ತಮ್ಮ ತಮ್ಮ ಸಂಸ್ಕಾರಗಳಿಗೆ ತಕ್ಕಂತೆ ಬೆಳೆದವರು. ಇವರಲ್ಲಿ ವಿದ್ಯಾಧರ ಮಾತ್ರ ಎಸ್.ಎಸ್.ಎಲ್.ಸಿ. ಮುಗಿಸಿ ಕೊಡದೂರಿನಲ್ಲಿ ಶಿಕ್ಷಕನಾಗಿದ್ದನು. ಈತನಿಗೆ ತಂದೆ ಮದುವೆ ಮಾಡಬೇಕೆಂದು ನಿಶ್ಚಯಿಸಿದ್ದರು. ಗಾಂಧೀವಾದಿ ಕುಟುಂಬದ ಆನಂದ ಸೋಮಯಾಜಿಗಳ ಮಗಳು ದೇವಸ್ಥಾನಕ್ಕೆ ಬರುತ್ತಿದ್ದ ಸಾವಿತ್ರಿಯನ್ನು ಮಿತ್ರರಾದ ವೆಂಕಟೇಶ್ ಕಮ್ತಿ ತೋರಿಸಿ, ಇವಳೇ ಆನಂದ ಸೋಮಯಾಜಿಗಳ ಮಗಳು ಎಂದಾಗ ತನ್ನ ಮಡದಿ ಗಂಗಮ್ಮನಿಗೆ ಅನಿಸಿದಂತೆಯೇ ಆ ನಗುಮುಖದಲ್ಲಿ ಸೂಸುವಂತಿದ್ದ ವಿಲಕ್ಷಣ ಕಾಂತಿ ಅವರನ್ನು ಯೋಚನೆಗೀಡು ಮಾಡಿತ್ತು. ಗೃಹಮಿತ್ರತ್ವ ಇಷ್ಟು ಚೆನ್ನಾಗಿ ಹೊಂದಿಕೊಂಡಿರುವ ಮುದ್ದಾಗಿ ಕಾಣುವ ಹುಡುಗಿಯನ್ನು ತಂದೆ-ತಾಯಿ ಗಾಂಧೀವಾದಿಗಳೆಂದು ಬಿಟ್ಟು ಬಿಡುವುದು ಸರಿಯೇ? ಎಂಬ ಯೋಚನೆ ಕಾಡಿ, ಕೊನೆಗೊಂದು ದಿನ ತನ್ನ ಆತ್ಮೀಯ ಹಾಗೂ ಪಂಡಿತ ಬಳಗದ ಹಲವರ ಜೊತೆಗೂಡಿ "ಹುಡುಗಿಗೆ ಚಿಕ್ಕಪ್ಪನೊಬ್ಬ ಗಾಂಧಿವಾದಿಯಾದ ಕಾರಣ ಪ್ರಶಸ್ತ ಜಾತಕದ ಕುಲೀನ ಮನೆತನದ ಹುಡುಗಿಯನ್ನು ಸೊಸೆಯಾಗಿ ತಂದುಕೊಳ್ಳುವುದರಲ್ಲೇನು ಹಾನಿಯಿಲ್ಲ" (ಪು.೧೯)ಎಂಬ ಪಂಡಿತ ಬಳಗದ ಅಭಿಪ್ರಾಯ ಮೂಡಿದ ಮೇಲೆಯೇ ಶಾಸ್ತ್ರೀಗಳು ವಿದ್ಯಾಧರ ಮತ್ತು ಸಾವಿತ್ರಿಯ ಮದುವೆ ಬಗ್ಗೆ ಮಾತನಾಡಲು ನಾರಾಯಣನನ್ನೇ ಸೋಮಯಾಜಿಗಳ ಮನೆಗೆ ಕಳುಹಿಸಿದ್ದರು.

ಎಲ್ಲಾ ದೃಷ್ಟಿಯಿಂದಲೂ ಅತ್ಯಂತ ಯೋಗ್ಯ ಮನೆತನವೆನಿಸಿದ್ದ ಶಾಸ್ತ್ರೀಗಳ ಸಂಬಂಧ ಸೋಮಯಾಜಿಗಳಿಗೆ ಒಪ್ಪಿಸಿ ಮದುವೆಗೆ ಸಮ್ಮತಿಸಿದರು. ಆದರೆ ಗಾಂಧಿಯ ವಿಚಾರಗಳಲ್ಲಿ ಪ್ರೇರಿತಳಾದ ಸಾವಿತ್ರಿ ಸಮಾಜಕ್ಕೆ, ದೇಶಕ್ಕೆ ಏನನ್ನಾದರೂ ಸೇವೆ ಮಾಡಬೇಕು ಎಂಬ ಹಂಬಲವಿದ್ದ ಈಕೆ ಮದುವೆಯನ್ನು ವಿರೋಧಿಸಿದಾಗ, ಮಗಳ ಮಾತಿಗೆ ಸಿಟ್ಟಿನಿಂದ "ನನಗೂ ಗಾಂಧೀಂತಂದ್ರ ಗೌರವ ಇದೆ. ಆದರೆ ಅವರ ವಿಚಾರಗಳ ಬೆನ್ನಹಿಂದೆ ಓಡೋದು ಸರಿಯೇ ಎಂಬ ತಿಳುವಳಿಕೆನೂ ಇದೆ. ಹೊರಗಿನ ವಿಚಾರಕ್ಕೆ ಗಾಂಧೀ ಸರಿ ಸಾವಿತ್ರೀ, ಆದರೆ ನಮ್ಮ ಕುಟುಂಬದ ಸಮಸ್ಯೆಗಳಿಗೆ, ಗಾಂಧೀ ಉತ್ತರ ಕೊಡೋಲ್ಲ"(ಪು.೨೦) ಎನ್ನುವ ಇವರ ಮಾತಿನಲ್ಲಿ ಮಗಳ ಭವಿಷ್ಯದ ಬಗ್ಗೆ ಸಹಜವಾಗಿಯೇ ಇರುವ ಕಾಳಜಿ. ಜೊತೆಗೆ ಗಾಂಧೀ ಸಾಮಾಜಿಕವಾಗಿ ಬದುಕಿನಲ್ಲಿ ವೈಚಾರಿಕತೆಯನ್ನು ನೈತಿಕತೆಯನ್ನು ತರುವವರಾಗಿದ್ದರೂ, ವ್ಯಕ್ತಿಯ ಸಮಸ್ಯೆಗಳಿಗೆ ಗಾಂಧೀತತ್ವಗಳು ಮೂಕಸಾಕ್ಷಿಯಾಗಿದ್ದಂತೆ ತೋರುತ್ತದೆ. ಆದರೆ ಗಾಂಧಿಯ ತತ್ವಗಳು ವರ್ತಮಾನದಲ್ಲಿ ಅವು ಬೇರೊಂದು ರೂಪದಲ್ಲಿ ಸಮಾಜದಲ್ಲಿ ಗುಪ್ತವಾಗಿ ಚಲನೆಯಲ್ಲಿ ಇದ್ದಂತೆ ಕಾಣುತ್ತವೆ. ಗಾಂಧೀ ಅವರನ್ನು ಗ್ರಹಿಸುವ ಬಗೆ ಇಲ್ಲಿ ವ್ಯಕ್ತವಾಗಿದೆ.

ಸಾವಿತ್ರಿ ತಾಯಿಯ ವಾತ್ಸಲ್ಯಕ್ಕೆ ಮಣಿದು ನೋವಿನಿಂದ "ಏನು ಬೇಕಾದರೂ ಮಾಡಿ ಅಪ್ಪ, ನಿಮಗೆ ಸರಿಕಂಡ ಹಾಗೆ ಮಾಡಿ, ಅದೇ ಅಲ್ಲವೆ ಈಗ ರೂಢಿ"(ಪು.೨೦) ಎನ್ನುವ ಈ ಮಾತುಗಳ ಹಿಂದೆ ಹೆಣ್ಣಿನ ಸ್ವಾತಂತ್ರ್ಯಕ್ಕೆ ದಕ್ಕೆ ತರುವ, ಅವರ ಇಷ್ಟಾನಿಷ್ಟಗಳನ್ನು ಹತ್ತಿಕ್ಕುವ, ಪುರುಷರು ಹೇಳಿದ ಹಾಗೆ ಕೇಳಬೇಕು ಎನ್ನುವ ಈ ಸಮಾಜದಲ್ಲಿ ಹೆಣ್ಣಿನ ದಾಸ್ಯದ ಬದುಕಿನ ಚಿತ್ರಣ ಈಕೆಯ ಮಾತುಗಳ ಹಿಂದೆ ಅಡಗಿದೆ. ಗಾಂಧಿಯ ಬಗ್ಗೆ ಅಥವಾ ಆತನ ವಿಚಾರಗಳ ಬಗ್ಗೆ ಸಂಪ್ರದಾಯಸ್ಥ ಕುಟುಂಬಗಳು ಸಹಜವಾಗಿಯೇ ವಿರೋಧವಿದ್ದ ಕಾಲದಲ್ಲಿ ಗಾಂಧಿಯ ಪ್ರಭಾವಕ್ಕೆ ಒಳಗಾದ ಮನೆತನದ ಹುಡುಗಿಯನ್ನು ಸೊಸೆಯನ್ನಾಗಿ ಹೇಗೆ ಸ್ವೀಕರಿಸಿದರು ಎನ್ನುವ ಪ್ರಶ್ನೆ ಸಹಜವಾಗಿರುವಂತದ್ದು. ಇದಕ್ಕೆ ಕಾರಣ ಜಾತಕ ಇರಬಹುದು, ಅವಳ ಹಸನ್ಮುಖತೆ ಇರಬಹುದು ಅಥವಾ ಈಕೆಯ ಇಂಗ್ಲೀಷ್ ಜ್ಞಾನದ ವಿದ್ಯಾವಂತಿಕೆ ಇರಬಹುದು. ಆದರೆ ಸಂಪ್ರದಾಯಸ್ಥ ಕುಟುಂಬ ಅಥವಾ ವ್ಯಕ್ತಿಗಳಲ್ಲಿ ಸಾವಿತ್ರಿಯ ಮೂಲಕ ಬದಲಾವಣೆಯನ್ನು ತರುವುದು ಕಾದಂಬರಿಯ ಉದ್ದೇಶವಿದ್ದಂತೆ ತೋರುತ್ತದೆ. ಸಾವಿತ್ರಿಯನ್ನು ಸೊಸೆಯನ್ನಾಗಿ ಪಡೆಯುವುದಕ್ಕೆ ಆಕೆಯಲ್ಲಿರುವ ಚೆಲುವು, ವಿದ್ಯೆಗಳೂ ಕಾರಣವಾಗಿವೆ. ಗಾಂಧೀಜಿಯನ್ನು ಆರಾಧಿಸುವ ಸಾವಿತ್ರಿಯನ್ನು ಸ್ವೀಕರಿಸುವ ವಿಚಾರದಲ್ಲಿ ನಡೆದ ದ್ವಂದ್ವ ಆ ಕಾಲದ ವಾಸ್ತವ ಸಂಗತಿಯೇ. ಗಾಂಧೀಜಿ ವೈದಿಕರಿಗೆ ಯಾವ ರೀತಿಯಲ್ಲಿ ಪ್ರಭಾವ ಬೀರಿದ್ದ ಎನ್ನುವುದು ಕುತೂಹಲ ಸಂಗತಿಯಾಗಿದೆ.

ಸಾವಿತ್ರಿಯ ಮುಖದಲ್ಲಿ ಮತ್ತೆ ಉಲ್ಲಾಸದ ಗೆರೆ ಮೂಡಿದ್ದು ವಿದ್ಯಾಧರನನ್ನು ಮದುವೆಯಾಗಿ ಗುರಿ ಕಂಡುಕೊಂಡಾಗ. ಆದರೆ ಗಾಂಧಿಯನ್ನು ದ್ವೇಷಿಸುತ್ತಿದ್ದ ಶ್ರೀಕಂಠಶಾಸ್ತ್ರೀಗಳ ಮನೆ ಸೇರಿದ ಮೇಲೆಯೂ ಆಕೆ ತನ್ನ ನಂಬಿಕೆಯನ್ನು ಮುಂದುವರಿಸುವ ಕೋಣೆಯಲ್ಲಿನ 'ಗಾಂಧಿಯ ಫೋಟೋ' ಗಂಗಾಧರನ ಕಣ್ಣಿಗೆ ಬೀಳುವ ಮೂಲಕ ಆ ಕುಟುಂಬದಲ್ಲಿ ವ್ಯಕ್ತಿಗಳ ವ್ಯತಿರಿಕ್ತವಾದ ತಾಕಲಾಟಗಳು ಆರಂಭವಾಗುತ್ತವೆ. ಮುಂದೆ ಸಾಮಾಜಿಕ ಬದಲಾವಣೆಗಳು ಕಾಣಿಸುತ್ತವೆ. ಇದಕ್ಕೆ ಗಾಂಧೀಯ ಅನುಯಾಯಿಯಾದ ಸಾವಿತ್ರಿಯೇ ಕಾರಣಗಳಾಗುತ್ತಾಳೆ. ಅಂದರೆ ಸಾವಿತ್ರಿ ಗಂಡನನ್ನು ತನ್ನಂತೆ ಮಾಡಿಕೊಳ್ಳುವ ಮೂಲಕ ತನ್ನ ದಾರಿಯನ್ನು ಸುಗಮಗೊಳಿಸಕೊಳ್ಳುತ್ತಾಳೆ.

ಗಾಂಧಿಯ ತತ್ವಗಳಾದ ಅಹಿಂಸೆ, ಹರಿಜನೋದ್ಧಾರ, ಸತ್ಯಾಗ್ರಹ ಮೊದಲಾದ ವಿಚಾರಗಳಿಗೆ ಒಳಗಾದ ವಿದ್ಯಾನಿಗೆ ಓದಿನ ಹುಚ್ಚು ಹಿಡಿಸಿದ್ದು, ಗಾಂಧಿಯ ತತ್ವಗಳನ್ನು ತಿಳಿಸಿದ್ದು ಸಾವಿತ್ರಿಯೇ. ಅದು ಬೆಳೆಯುತ್ತಾ ಹೋದದ್ದು ಹೇಗೆ ಎಂಬ ಕಾರಣಗಳನ್ನು ಶೋಧಿಸ ಹೊರಡುವಾಗ ಆತನಿಗೆ ಒಂದು ವಿಚಿತ್ರ ರೀತಿಯ ಆತಂಕ. ತನ್ನ ತಿಳುವಳಿಕೆಯಲ್ಲ ವ್ಯರ್ಥ ಎಂದು ಗೋಚರಿಸಿದ್ದು ಸುಧಾಕರರಾಯರ ಮನೆಗೆ ಪಾಠಕ್ಕೆಂದು ಬರುತ್ತಿದ್ದ ಹರಕು ಬಟ್ಟೆ, ಸ್ನಾನ ಕಾಣದ ಆದರೂ ಕಲಿಯುವ ಉತ್ಸಾಹದ ಕೆಂಚನಿಂದಲೇ. ಆಗಾಗ ಸಂಕಯ್ಯಮಾಸ್ತರರ ಜೊತೆಗೆ ಕೊರಗರ ಕೊಪ್ಪಕ್ಕೆ ಹೋಗುತ್ತಿದ್ದಾಗ ಕಾಣುತ್ತಿದ್ದ ಬಡಪಾಯಿಗಳ ನಿಕೃಷ್ಟ ಬದುಕಿನ ಅರಿವಾದಾಗ ವಿದ್ಯಾನಿಗೆ ಸುಧಾಕರರಾಯರು ತನ್ನ ಮುರುಕು ಮರದ ಕಪಾಟಿನಿಂದ ಓದಲೆಂದು ಕೊಡುತ್ತಿದ್ದ ಗ್ರಂಥಗಳು ಮತ್ತು ಸಾಮ್ಯವಾದವೇನೆಂದು ತಿಳಿಯದಿದ್ದ ತನಗೆ ಅದರ ಸೂಕ್ಷ್ಮ ಪರಿಚಯ ಮಾಡಿಕೊಟ್ಟ ಸುಧಾಕರ ರಾಯರು ಮತ್ತು ಘಾಟಿಮಾಮರಿಂದ ಗಾಂಧೀವಾದಕ್ಕಿಂತ ಬೇರೆ ವಿಚಾರಗಳು ಮೂಡಿದವು. ಆದರೆ ವಿದ್ಯಾನಿಗೆ ಕಾರ್ಲ್‌ಮಾರ್ಕ್ಸ್‌ನ ವಿಚಾರಗಳನ್ನು ಸರಿಯಾಗಿ ಪರಿಚಯಿಸಿದವರು ಸುಧಾಕರರಾಯರ ಮಂಗಳೂರಿನ ಮಿತ್ರರು. "ನಿಮ್ಮ ಗಾಂಧಿಯವರಿಂದ ಬ್ರಿಟಿಷರು ಭಾರತದಿಂದ ತಾನಾಗಿಯೇ ತೊಲಗೋದು ಕಷ್ಟ ಶಾಸ್ತ್ರೀಗಳೇ ಒಂದು ವೇಳೆ ತೊಲಗಿದರೂ ನಮ್ಮ ಬಡತನ ಅಸಮಾನತೆ ಎಲ್ಲ ಅಷ್ಟರಿಂದಲೇ ಹೊರಟು ಹೋಗದು, ಇದಕ್ಕೆ ಬೇಕಾಗಿರೋದು ಒಂದು ರೀತಿಯ ಕ್ರಾಂತಿ"(ಪು.೨೨)ಈ ಎಲ್ಲಾ ವಿಚಾರಗಳಿಂದ ವಿಚಲಿತನಾದ ವಿದ್ಯಾ ಕಮ್ಯುನಿಷ್ಟನಾಗುವುದು, ಸಾವಿತ್ರಿಯ ಮೂಲಕ ಗಾಂಧಿ ಟೊಪ್ಪಿಯನ್ನು ಧರಿಸುವುದು ತನ್ನ ಜುಟ್ಟನ್ನು ಕತ್ತರಿಸಿಕೊಳ್ಳುವುದು, ಕುಟುಂಬದ ವಿರೋಧದ ನಡುವೆಯೂ ಕೆಂಚನಿಗೆ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಿಕೊಡುವುದು, ತಿಂದುಂಡ ಎಂಜಲೆಲೆಗಳಲ್ಲಿ ಊಟ ಮಾಡಬಾರದೆಂದು ಹೇಳಿ ಕೊರಗರಲ್ಲಿ ಜಾಗೃತಿ ಮೂಡಿಸುವುದು ಈ ಎಲ್ಲಾ ಬದಲಾವಣೆಗಳ

ನಡುವೆಯೂ ಟ್ರೈನಿಂಗ್ ಎಂದು ಸುಳ್ಳು ಹೇಳಿ ಮಂಗಳೂರಿಗೆ ಹೋಗಿ ಅಲ್ಲಿ ಸಮಾಜದ ಸಮಸ್ಯೆಗಳಲ್ಲಿ ಸಿಕ್ಕುಕೊಂಡು ಬ್ರಿಟಿಷ್ ಸರಕಾರದ ವಿರೋಧಕ್ಕೆ ಗುರಿಯಾಗಿ ಶಿಕ್ಷೆ ಅನುಭವಿಸುವುದು. ನಂತರ ಮಂಗೇಶರಾಯರ ಸಹಾಯದಿಂದ ಬಿಡುಗಡೆಯಾಗಿ ಬರುವುದು. ಹೀಗೆ ಗಾಂಧೀಯ ತತ್ವಗಳಿಂದ ಪ್ರೇರಿತನಾಗಿ, ಮುಂದೆ ಬದಲಾದ ಅವನ ವಿಚಾರಗಳಿಂದ ಅವನ ದಾರಿ ಬೇರೆಯಾದರೂ ಇವೆಲ್ಲ ಬದಲಾವಣೆ ತರುವಲ್ಲಿ ಸಮಾಜದಲ್ಲಿಯಾಗುವ ಪರಿಣಾಮಗಳು, ವಿದ್ಯಾ ಸಂಪ್ರದಾಯಸ್ತ ಕುಟುಂಬದ ಅನಿಷ್ಟ ಮೌಢ್ಯಗಳಿಂದ ಹೊರಬಂದು ಸಮಾಜದಲ್ಲಿ ವೈಚಾರಿಕತೆಯನ್ನು ಬೆಳೆಸಲು ಪ್ರೇರಕನಾದನು. ಕೆಂಚನಿಗೆ ಶಿಕ್ಷಣ ಕೊಡುವ ಮೂಲಕ ಬದುಕಿನಲ್ಲಿ ಹೊಸ ಭಾವ ಮತ್ತು ಬೌದ್ಧಿಕತೆಯ ಬದಲಾವಣೆ ಇಂಥ ಬದಲಾವಣೆಯಿಂದ ಸಾಮಾಜಿಕವಾಗಿ ಅವಮಾನಕ್ಕೊಳಗಾದ ಜಾತಿ-ವರ್ಗಗಳಲ್ಲಿ ಹೊಸ ಕನಸುಗಳು ಹುಟ್ಟಿದವು.

ಕೊರಗರು ಎಂಜಲೆಲೆಯನ್ನು ತಿನ್ನದೆ ನಿಕೃಷ್ಟ ಬದುಕಿನಿಂದ ಹೊರಬಂದುದು, ಶೂದ್ರರಿಗೆ ದೇವಾಲಯಗಳಲ್ಲಿ ಪ್ರವೇಶ ದೊರೆತುದುದು. ಇವೆಲ್ಲ ಸಮಾಜದಲ್ಲಿ ಸಾಂಸ್ಕೃತಿಕವಾಗಿ ಈ ವರ್ಗಗಳಿಗೆ ಭದ್ರವಾದ ನೆಲೆ ಸಮಾಜದಲ್ಲಿ ವರ್ಗ-ವೈಷಮ್ಯಗಳು ಇಲ್ಲವಾಗಿಸಿ ಸಾಂಸ್ಕೃತಿಕ ಸಮಾನತೆಯು ದೊರೆತುದುದು ಪ್ರಮುಖಾಂಶವಾಗಿ ತೋರುತ್ತದೆ. ಇದಕ್ಕೆಲ್ಲಾ ಗಾಂಧಿವಾದಿಯಾದ ಸಾವಿತ್ರಿಯೂ, ವಿದ್ಯಾನ ಮೂಲಕ ಈ ವಿಚಾರಗಳನ್ನು ಪ್ರಚೋದಿಸಿ ಈ ಎಲ್ಲಾ ಬದಲಾವಣೆಗೆ ಕಾರಣವಾಗುತ್ತಾಳೆ. ಇಲ್ಲಿ ವಿದ್ಯಾ ಗಾಂಧೀಜಿ ವಿಚಾರಗಳಿಗೆ ಒಳಗಾಗಿ ಕಮ್ಯುನಿಸ್ಟನಾಗಲು ಕಾರಣವೆಂದರೆ ಆಗ ದೇಶದುದ್ದಕ್ಕೂ ಗಾಂಧೀಜಿ ಅವರ ಅಹಿಂಸಾವಾದದ ಕ್ರಾಂತಿಗಿಂತಲೂ ಹೆಚ್ಚಾಗಿ ಹಿಂಸಾತ್ಮಕವಾದ ಸಶಸ್ತ್ರ ಬಂಡಾಯದಿಂದ ಬ್ರಿಟೀಷರನ್ನು ಹೋಡಿಸಬೇಕು ಎನ್ನುವ ಕ್ರಾಂತಿಕಾರಿ ಮನೋಭಾವ ರೂಪುಗೊಂಡಿತ್ತು. ಅಂತ ಗುಪ್ತಪಡೆಗೆ ವಿದ್ಯಾ ಸೇರಿದ್ದ.

ಸಮಾಜೋದ್ಧಾರದ ಮಹತ್ವಾಕಾಂಕ್ಷೆ ಹೊಂದಿ ಹೋರಾಟದ ಕೇಂದ್ರವಾಗಿದ್ದ ಮುಂಬೈ ಮಹಾನಗರಕ್ಕೆ ಬಂದ ಅಲ್ಲಿನ ವಿದ್ಯಾಮಾನಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದರ ಪರಿಣಾಮವಾಗಿ ದೇಶದ ಸ್ವಾತಂತ್ರ್ಯಕ್ಕೆ ವಿದ್ಯಾಧರ-ಸಾವಿತ್ರಿ ತಮ್ಮ ಬದುಕನ್ನೇ ಪಣವಾಗಿಟ್ಟವರು. ವಿಧವೆಯಾದ ಸಾವಿತ್ರಿ ಗಾಂಧಿಯ ತತ್ವಗಳನ್ನು ನಿರಂತರವಾಗಿ ಮುಂದುವರೆಸಿಕೊಂಡು ಬರುವ ನಾಯಕಿಯಾಗಿ ಪರಿವರ್ತನೆ ಹೊಂದುತ್ತಾಳೆ.

ಶಾಸ್ತ್ರೀಗಳ ಹಿರಿಯ ಮಗ ಗಂಗಾಧರ ಧರ್ಮದ ಚೌಕಟ್ಟನ್ನು ಮೀರಿ ತಂದೆಯ ವಿರೋಧದ ನಡುವೆಯೂ ಕೊಡದೂರ ಬಿಟ್ಟು ಉಡಿಪಿಯಲ್ಲಿ ಹೋಟೆಲ್ ತೆಗೆಯುವುದು. ಅಲ್ಲಿ ಗಾಂಧಿಯ

ಪ್ರಭಾವವಿದ್ದುದರಿಂದ ತನ್ನ ಹೋಟೆಲ್ ಲಾಭಕ್ಕಾಗಿ, ಗಾಂಧೀಯ ಬಗ್ಗೆ ಅಸಹನೆ ಇದ್ದರೂ ಅನಿವಾರ್ಯವಾಗಿ ತನ್ನ ಹೋಟೆಲ್ ಮಾಣಿಗಳಿಗೆ ಗಾಂಧೀ ಟೊಪ್ಪಿ ಕೊಡಿಸುವುದು. ಅವನ ಸ್ವಾರ್ಥವೇ ಕಾರಣವಾಗಿದೆ. ಇಲ್ಲಿ ಹಣಗಳಿಸುವುದು ಆ ಮೂಲಕ ಜೀವನ ನಡೆಸುವ ಕ್ರಮಕ್ಕೆ ಹೊಂದಿಕೊಳ್ಳುತ್ತಾನೆ. ಬದಲಾಗುತ್ತಿರುವ ಸಮಾಜದಲ್ಲಿ ಅದಕ್ಕೆ ಹೊಂದಿಕೊಳ್ಳುವ ಸ್ಥಿತಿಗೆ ತಲುಪುತ್ತಾನೆ.

ನಾರಾಯಣಶಾಸ್ತ್ರೀಗಳ ಮಗಳು ಚಿಕ್ಕಂದಿನಲ್ಲೆ ವಿಧವೆಯಾದವಳು. ಆದರೆ ಇವಳು ಸಂಪ್ರದಾಯದ ಸಂಕೋಲೆಯಲ್ಲಿ ಸಿಲುಕದೆ ಮನೆಯವರ ಅನುಕಂಪದ ಅಲೆಯಲ್ಲಿ ಶಿಕ್ಷಣವನ್ನು ಕಲಿಯಲು ಒಪ್ಪಿಗೆಯನ್ನು ಪಡೆದು ಶ್ರದ್ಧೆಯಿಂದ ಓದಿ ಶಿಕ್ಷಕಳಾಗಿ ತನ್ನ ಸಹೋದ್ಯೋಗಿ ರಘುನನ್ನೇ ಮರುಮದುವೆಯಾಗಿ ಆ ಮೂಲಕ ಸ್ವಾತಂತ್ರ್ಯದ ಬದುಕನ್ನು ರೂಢಿಸಿಕೊಳ್ಳುತ್ತಾಳೆ. ಇಲ್ಲಿ ಸುಶಿಕ್ಷಿತಳಾದ ಸ್ತ್ರೀ ಬದುಕಿನ್ನಲಿ ಹೇಗೆ ಸ್ವತಂತ್ರ ನಿರ್ಧಾರದಿಂದ ಜೀವನವನ್ನು ಹಸನುಗೊಳಿಸಿಕೊಳ್ಳಬಹುದು ಎನ್ನುವುದಕ್ಕೆ ಶಾಂಭವಿ ಮಾದರಿಯಾಗಿದ್ದಾಳೆ. ವೆಂಕಟೇಶ್ ಕಮ್ತಿಯ ಮಗ ಮಾಧವ ಕಮ್ತಿ ಸಂಪ್ರದಾಯದ ಬದುಕನ್ನು ಧಿಕ್ಕರಿಸಿ ಕಮ್ಯುನಿಷ್ಟನಾಗುವುದು ಇದರ ಪರಿಣಾಮವಾಗಿ ಸಮಾಜದ ಸ್ವಾತಂತ್ರ್ಯ ಹೋರಾಟಕ್ಕೆ ಜನರಲ್ಲಿ ಜಾಗೃತ ಗೊಳಿಸುವತ್ತ ನೆರವಾಗುತ್ತಾನೆ.

ಕೆಳವರ್ಗದ ಕೊರಗರ ಪುಟ್ಟಧೂಮ ಮಕ್ಕಳು ಕೆಂಚ-ದೂಜಿ ನಿಕೃಷ್ಟವಾದ ಬದುಕನ್ನು ಹೊಂದಿದವರು. ಗಾಂಧೀಯ ತತ್ವಗಳಲ್ಲಿ ಒಂದಾದ ಹರಿಜನೋದ್ಧಾರಕ್ಕೆ ಶ್ರಮಿಸಿದ ವಿದ್ಯಾ ಮತ್ತು ಸಾವಿತ್ರಿಯು ಕೆಂಚನಿಗೆ ಶಿಕ್ಷಣ ಕೊಡುವ ಮೂಲಕ ಸಮಾಜದಲ್ಲಿ ಕೆಳವರ್ಗದ ಜನರ ಆಶೋತ್ತರಗಳನ್ನು ಚಿಗುರಿಸಲು ಸಾಧ್ಯವಾಗುತ್ತದೆ. ಬಡತನದಿಂದ ತನ್ನ ಸ್ವಾಭಿಮಾನವನ್ನು ಬಿಟ್ಟು ಹಾದರಕ್ಕಿಳಿದ ನಾಗಿ ಗಾಂಧೀಯ ಪ್ರೇರಣೆಗೆ ಒಳಗಾದ ತಮ್ಮ ವೇಣುವಿನ ಸಹಾಯದಿಂದ ಸ್ವಂತ ಉದ್ಯೋಗ ಹುಡುಕಿಕೊಂಡು ಸ್ವತಂತ್ರ್ಯದ ಬದುಕನ್ನು ಪಡೆಯುತ್ತಾಳೆ. ಇದು ಸಮಾಜದಲ್ಲಿ ಈ ವರ್ಗದ ಜನರಲ್ಲಿ ಬದುಕುವ ಆತ್ಮವಿಶ್ವಾಸಕ್ಕೆ ದಾರಿ ಮಾಡಿಕೊಡುತ್ತಾಳೆ.

ಮುಂಬೈ ವಾಸಿಯಾದ ಹಿದಯತ್ತುಲ್ಲಾರ ಕುಟುಂಬದಲ್ಲಿ ಗಾಂಧೀಯ ತತ್ವಗಳಲ್ಲಿ ಪ್ರಭಾವವಿದ್ದವರಾದರೂ, ಮುಂಬೈ ಆಡಳಿತ ಅಲ್ಲಿನ ರಾಜಕೀಯ ವಿದ್ಯಾಮಾನಗಳು ಇವರ ಕುಟುಂಬದಲ್ಲಿ ವಿಭಿನ್ನ ವ್ಯಕ್ತಿತ್ವಗಳನ್ನು ಬೆಳೆಸಿದ್ದವು. ಎರಡನೆಯ ಮಹಾಯುದ್ಧದ ಭೀಕರತೆಯಿಂದ ಹೊರಬಂದ ಬ್ರಿಟೀಷರು ೧೯೪೭ರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿದರು. "ತುಂಡಾದ ದೇಶದ ತುಂಬಾ ಸ್ವಾತಂತ್ರ್ಯದ ಉತ್ಸಾಹ ಹರಡುತ್ತಲೇ ಇತ್ತು. ಆದರೆ ಒಂದು ವಾರಲ್ಲೆ ಉತ್ತರ ಭಾರತದಲ್ಲಿ ಅದರಲ್ಲೂ ಪಂಜಾಬದಲ್ಲಿ ಜಾತಿಯ ಮಾರಣ ಹೋಮ ನಡೆಯಲಾರಂಭಿಸಿತು. ತಲೆ-ತಲಾಂತರಗಳಿಂದ

ವಾಸಿಸುತ್ತಿದ್ದ"(ಪು.೪೮೨)ಜನ ಸಮುದಾಯಗಳು ದೇಶದಿಂದ ದೇಶಕ್ಕೆ ಸ್ಥಳಾಂತರವಾದವು. ಹಿದಾಯತ್ತುಲ್ಲಾರ ಮಗಳು ನಜ್ಮಾ ಪಾಕಿಸ್ತಾನಕ್ಕೆ ಹೋದಳು. ಗಾಂಧಿಯಿಂದಲೇ ಎಲ್ಲಾ ಆಗುತ್ತೆ ಎಂದು ತಿಳಿದ ಹಿದಾಯತ್ತುಲ್ಲಾರು ಪಾಕಿಸ್ತಾನಕ್ಕೆ ಹೋಗುವ ಹಂಬಲವನ್ನು ರಫಿಗೆ ಹೇಳಿದಾಗ ತಂದೆಯ ಈ ಮಾತು ಕೇಳಿ ಆಶ್ಚರ್ಯದ ನಡುವೆ, ದೇಶಕ್ಕೆ ಸ್ವಾತಂತ್ರ್ಯ ಯಾಕಾದರೂ ಬಂತು ಎಂದು ಬೇಸರಗೊಂಡನು. ಇಲ್ಲಿ ಸಂಪ್ರದಾಯವಾದಿಗಳಾದ ಮುಸ್ಲಿಂ ಸಮುದಾಯ ಜಾತಿಯ ಕಟ್ಟುಪಾಡುಗಳನ್ನು ಬಿಡದವರಾಗಿ ಮುಂದುವರೆದಿದ್ದಾರೆ. ಆದರೆ ರಫಿಯಂತವನು ಇದಕ್ಕೆ ಅಪವಾದವಾಗಿ ನಿಲ್ಲುತ್ತಾನೆ. ಸ್ವಾತಂತ್ರ್ಯ ಬಂತು ನಾಡು ಎರಡಾದ ಬಗೆಯನ್ನು ಇಲ್ಲಿ ತಿಳಿಸಲಾಗಿದೆ.

ಎರಡನೆಯ ಮಹಾಯುದ್ಧದ ಭೀಕರತೆ ಜಗತ್ತಿನ್ನೆಲ್ಲೆಡೆ ಪಸರಿಸುತ್ತಿದ್ದ ಕಾಲದಲ್ಲಿ ನಾಡಿನಲ್ಲಿ ಗಾಂಧಿಯ ಆಗಮನದಿಂದ ಆತನ ವಿಚಾರಗಳಲ್ಲಿ ಪ್ರೇರಿತರಾದ ವ್ಯಕ್ತಿಗಳಲ್ಲಿ, ಕುಟುಂಬಗಳಲ್ಲಿ ವ್ಯತಿರಿಕ್ತವಾದ ಬದಲಾವಣೆಗಳಾದವು. ಇದರ ಪರಿಣಾಮವಾಗಿ ಸಂಪ್ರದಾಯಸ್ತ ಕುಟುಂಬದಲ್ಲಿನ ವ್ಯಕ್ತಿಗಳು ಹಳೆಯ ಪದ್ಧತಿಗಳಿಂದ ಹೊರಬಂದು ಸಮಾಜದಲ್ಲಿ ಸ್ವಾತಂತ್ರ್ಯ, ಸಮಾನತೆಯನ್ನು ಕಾಣುವ ಮುಖಾಂತರ ವಸಾಹತುಶಾಹಿ ಆಡಳಿತದ ವಿರುದ್ಧ ಹೋರಾಟಕ್ಕೆ ಅಣಿಗೊಳಿಸುವ, ರಾಜಕೀಯ ಸ್ವಾತಂತ್ರ್ಯ ಪಡೆಯುವ ಗಾಂಧೀ ಮತ್ತು ಇತರ ರಾಷ್ಟ್ರೀಯ ನಾಯಕರ ಬೆಂಬಲಕ್ಕೆ ಮುಂದಾದರು. ಗಾಂಧೀಯ ಆಗಮನದಿಂದಾಗಿ ಸಾಮಾಜಿಕ ಜೀವನದಲ್ಲಿ ಆದ ಬದಲಾವಣೆ ಮೇಲಿನಂತೆ ಅರ್ಥಮಾಡಿಕೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ ಇಪ್ಪತ್ತನೇ ಶತಮಾನದ ಮೂವತ್ತರ ದಶಕದಲ್ಲಿ ಗಾಂಧೀಬಂದ ಹಿನ್ನೆಲೆಯಲ್ಲಿ ಎರಡೂ ಕಾದಂಬರಿಗಳು, ಒಂದೇ ಚಾರಿತ್ರಿಕ ವಸ್ತುವನ್ನೊಳಗೊಂಡು ಅಲ್ಲಿನ ಗ್ರಾಮೀಣ ಬದುಕಿನಲ್ಲಿ, ರಾಜಕೀಯವಾಗಿ ಗಾಂಧಿಯ ವಿಚಾರಗಳಿಗೆ ಪ್ರಭಾವಿತರಾದ ಜನಾಂಗ ಸಂಪ್ರದಾಯದ ಮೌಲ್ಯಗಳನ್ನು ಧಿಕ್ಕರಿಸಿ, ಸಮಾನತೆಯ ಬದುಕನ್ನು ರೂಢಿಸಿಕೊಳ್ಳುವ ಮೂಲಕ ರಾಜಕೀಯ ಹೋರಾಟಕ್ಕೆ ಸಂಘಟಿತರಾದರು. ಇಲ್ಲಿ ಗಾಂಧೀಜಿಯವರ ಅನುಯಾಯಿಯಾಗಲು ಮುಖ್ಯಕಾರಣ ಅವರು ಸಮಸ್ತ ಜನತೆಗೂ ಅನ್ವಯವಾಗುವಂಥ ಸಮಸ್ಯೆಗಳನ್ನು ಎತ್ತಿಕೊಂಡು ಎಲ್ಲರ ಸಹಯೋಗದೊಡನೆ ಹೋರಾಟ ರೂಪಿಸುವುದಾಗಿತ್ತು. ಆದ್ದರಿಂದಲೇ ಈ ಹೋರಾಟಕ್ಕೆ ಅಪಾರ ಬೆಂಬಲ ದೊರೆಯಿತು. 'ಗಾಂಧಿಬಂದ'ಕ್ಕೂ 'ಹಜ್ಜೆ' ಕಾದಂಬರಿಗೂ ಕೇವಲ ಒಂದು ವರ್ಷ ಅಂತರವಿದೆ. ಆದರೆ ಪ್ರಾದೇಶಿಕ ಪರಿಸ್ಥಿತಿಗಳು, ಲೇಖಕರ ಚಿಂತನೆಯ ಧೋರಣೆಗಳು ಎರಡೂ ಕೃತಿಯಲ್ಲಿ ವ್ಯಕ್ತವಾಗಿವೆ. ಪುರುಷ ಪಾತ್ರಗಳ ಸ್ತ್ರೀ ಸಂಬಂಧಗಳ ಧೋರಣೆಯಲ್ಲಿ ಸ್ವಲ್ಪ ಅಂತರವನ್ನು

ಸೃಷ್ಟಿಸಿವೆ. 'ಗಾಂಧಿಬಂದ' ಕಾದಂಬರಿಯನ್ನು "ತುಳುನಾಡಿನ ಸಾಂಸ್ಕೃತಿಕ ಆತ್ಮಕಥನ, ಇತಿಹಾಸವನ್ನು ಪ್ರತಿಬಿಂಬಿಸುವಂತದ್ದು" ಎಂದು ಹೇಳಿರುವ ಲೇಖಕರು. ಅದರ ಒಳಗೆ ತತ್ಕಾಲದ ರಾಜಕೀಯ-ಸಾಮಾಜಿಕ-ಧಾರ್ಮಿಕ ತಾಕಲಾಟಗಳನ್ನು ಸ್ಪಷ್ಟಪಡಿಸಿದ್ದಾರೆ. ಆದರೆ ಹೆಚ್ಚೆ ರಾಜಕೀಯವೆನಿಸಬಹುದಾದ ಕಾದಂಬರಿ ಎಂದು ಲೇಖಕರು ಕರೆದಿರುವರಾದರೂ, ಅದರ ಒಡಲಲ್ಲಿ ಸಾಮಾಜಿಕ ಜೀವನದಲ್ಲಿನ ಪರಿವರ್ತನೆಯನ್ನು ಕಾಣುತ್ತೇವೆ.

ಈ ಎರಡೂ ಕಾದಂಬರಿಗಳು ಪ್ರಾದೇಶಿಕ ಪರಿಸರದಲ್ಲಿನ ಸಾಂಸ್ಕೃತಿಕ ಜೀವನವು ಗಾಂಧೀಜಿ ಬಂದ ಹಿನ್ನೆಲೆಯಲ್ಲಿ ಕುಟುಂಬದಲ್ಲಿನ ಪರಿವರ್ತನೆ, ಇದರ ಪರಿಣಾಮವಾಗಿ ವಿಧವಾ ವಿವಾಹ, ಕೇಶ ಮುಂಡನ, ಜಾತಿ-ವೈಷಮ್ಯ, ಸಮಾನತೆಯನ್ನು ತರುವ ಅನೇಕ ಬದಲಾವಣೆಗಳ ಜೊತೆಗೆ ಭಾರತದ ರಾಜಕೀಯ ಹೋರಾಟವನ್ನು ಚಿತ್ರಿಸುತ್ತವೆ.

ಎರಡೂ ಕಾದಂಬರಿಗಳು ಮಾರಪ್ಪಶೆಟ್ಟಿ, ತಿಂಗಳಾಯ, ಅದ್ರಾಮ ಹಾಗೂ ವಿದ್ಯಾ, ಸಾವಿತ್ರಿ, ಸುಧಾಕರ ರಾವ್, ರಫಿಸುರ್ತಿ, ಮಖಿನ್‌ವಾಲಾರಂತವರ ಮೂಲಕ ಜೀವನ ಪರವಾದ ಪ್ರಗತಿ ಪರವಾದ ಮಾನವೀಯ ಧೋರಣೆಗಳನ್ನು, ಕೇಶವ ಶಾನುಭೋಗ, ಪಾಂಡುಶೆಟ್ಟಿ, ದ್ರೌಪದಿ ಹಾಗೂ ಮಂಗೇಶರಾಯ, ರಘು, ಶಾಂಭವಿಯ ಮೂಲಕ ವೈಚಾರಿಕತೆಯನ್ನು, ದ್ರೌಪದಿ-ದಾರು ತಾಯಿ-ತಂದೆಯರ ಮೂಲಕ ಹಾಗೂ ಸಾವಿತ್ರಿ-ವಿದ್ಯಾಧರ ತಾಯಿ-ತಂದೆಯರ ಮೂಲಕ ಸಂಪ್ರದಾಯಸ್ಥ ಜನರ ಬದುಕನ್ನೂ ಮತ್ತು ಕೊರಗರ ಅಂತಪ್ಪೂಜಾರಿ, ಕೂಸಮೊಲಿ ಹಾಗೂ ಕೆಂಚ, ನಾಗಿ, ರುಕ್ಕು ಎಂವಲಾದವರ ಮೂಲಕ ಕೆಳವರ್ಗದ ಜನರ ದಾರುಣ ಬದುಕನ್ನೂ ಚಿತ್ರಿಸಿದ್ದಾರೆ. ದ್ರೌಪದಿ-ಶಾಂಭವಿ, ಸಾವಿತ್ರಿ-ವಿದ್ಯಾ ಸಂಪ್ರದಾಯಸ್ಥ ಆವರಣದಲ್ಲಿ ಬೆಳೆದ ಇವರು ಈ ಎಲ್ಲಾ ವಿರುದ್ಧ ಪರಿಸರದಲ್ಲಿ ಅನುಭವಿಸಬಹುದಾದ ಅಂತರೀಕ ತಳಮಳಗಳಾಗಲೀ, ಸಂಪ್ರಾದಾಯಿಕ ಶಕ್ತಿಗಳಿಗೆ ಸಾಮಾಜಿಕವಾಗಿರುವ ಭದ್ರವಾದ ಪ್ರಭಾವವಾಗಲೀ, ವಾಸ್ತವ ರೀತಿಯಲ್ಲಿ ಗ್ರಹಿಸಲ್ಪಡದೆ ಸುಧಾರಣೆಯ ಅಗತ್ಯವನ್ನು ಎತ್ತಿ ಹಿಡಿಯುವುದೇ ಈ ಇಬ್ಬರೂ ಲೇಖಕರ ಗುರಿಯಾಗಿರುವುದರಿಂದ. ಆ ಗುರಿ ಸಾಧನೆಗೆ ಅನುಗುಣವಾಗಿ ಲೇಖಕರ ವಿಚಾರಗಳಿಗೆ ಈ ಪಾತ್ರಗಳು ಮುಖವಾಣಿಯಾಗುವಂತೆ ಅವರ ಬೌದ್ಧಿಕತೆಯ ಚಿತ್ರಣವು ದೊರೆಯುತ್ತದೆ.

ಸಂಪ್ರದಾಯಸ್ಥ ಮನೆತನದ ಕುಟುಂಬಗಳಲ್ಲಿ ಕೂಡ ಮೂಲಪದ್ಧತಿಗಳನ್ನು ವಿರೋಧಿಸುವಂತ ದಿಟ್ಟತನವು ಸಾಧ್ಯವಿತ್ತೆ? ಎಂಬ ಪ್ರಶ್ನೆಯೇಳುವುದು ಸಹಜ. ಆದರೆ ಸ್ವಾತಂತ್ರ್ಯ ಬಂದ ನಂತರ ಬದಲಾದ ಇಂದಿನ ಸಮಾಜ ಜೀವನದ ಉದಾಹರಣೆಗಳು ಲೇಖಕರ ಕಣ್ಣೆದುರಿಗಿವೆ. ಆದ್ದರಿಂದ

ಕಾದಂಬರಿಗಳಲ್ಲಿ ಬರುವ ಕುಟುಂಬಗಳ ಸಮ್ಮಿಲನದಲ್ಲಿ ಆದ ಬದಲಾವಣೆಗೆ ಇಂದಿನ ಸಮಾಜ ಜೀವನದ ಚಿತ್ರಣವನ್ನೇ ದೃಷ್ಟಿಯಲ್ಲಿಟ್ಟುಕೊಂಡಿದ್ದಾರೆ. ಹೀಗೆ ಈ ಕಾದಂಬರಿಗಳು ಸಾಮಾಜಿಕ ಪ್ರಗತಿಯ ಆಶಯದ ಸೂಚಕವಾಗಿವೆ. ಈ ಕೃತಿಗಳಲ್ಲಿ ಸಮಾಜ ಸುಧಾರಣೆಯ ಕಳಕಳಿಯು ಮುಖ್ಯವಾಗಿದ್ದು ಸಮಾಜದ ಕುಟುಂಬಗಳಲ್ಲಿ ಗಾಂಧೀಯಿಂದ ಸ್ವೀಕರಿಸಿದ್ದ ಮೌಲ್ಯಗಳು (ತತ್ವಗಳು) ಆದರ್ಶವೆನಿಸಿ, ಸಮಾಜದ ರೀತಿ ನೀತಿಗಳು ಬದಲಾಗದೆ ಇರುವ ವಿಷಾದವಿದೆ. ತಮಗೆ ಆರಾಧ್ಯವಲ್ಲವೆನಿಸಿದ್ದರ ವಿಡಂಬನೆ, ನೈತಿಕ ಕ್ರೋಧಗಳು ಒಂದು ಕಡೆ, ಮೆಚ್ಚುಗೆಯಾಗುವುದರ ಬಗ್ಗೆ ಸಮರ್ಥನೆ, ಪ್ರಶಂಸೆ ಮತ್ತೊಂದು ಕಡೆ. ಹೀಗೆ ಕಾದಂಬರಿಕಾರರ ವಿಚಾರಗಳು ಸ್ಪಷ್ಟವಾದ ನಿಲುವುಗಳನ್ನು ಹೊಂದಿವೆ. 'ಹೆಜ್ಜೆ' ಕಾದಂಬರಿ ವಸ್ತುಸ್ಥಿತಿಯ ಶೋಧನೆಗೆ ಮಹತ್ವಕೊಟ್ಟಿದೆ. 'ಗಾಂಧಿಬಂದ' ಕೃತಿಯಲ್ಲಿ ಸಮಾಜದ ವಿವಿಧ ಪ್ರತಿಕ್ರಿಯೆಗಳನ್ನು ಸಾಂಸ್ಕೃತಿಕ ಆಚರಣೆಗಳ ಮೂಲಕ ವಾಸ್ತವ ದೃಷ್ಟಿಯಿಂದ ಸೆರೆಹಿಡಿಯುವ ಯತ್ನವಿದೆ. ತುಳು ಪ್ರಭಾವವಿರುವ ಮಂಗಳೂರು ಭಾಷೆ, ಆಚರಣೆಗಳ ಮೂಲಕ ವಿಶಿಷ್ಟ ಸಂಸ್ಕೃತಿಯನ್ನು ಕಟ್ಟಿಕೊಡುವ ಕಥೆಯಾದ್ದರಿಂದ ವಾಸ್ತವ ಚಿತ್ರಣಕ್ಕೆ ಪೂರಕವಾಗಿದೆ. ಹಾಗಿದ್ದೂ ಈ ಇಬ್ಬರೂ ಕಾದಂಬರಿಕಾರರ ಧೋರಣೆಯು ಭಿನ್ನವಾಗಿದೆ. ಕಾದಂಬರಿಯಲ್ಲಿ ಪ್ರಸ್ತಾಪಿಸಿದ ವಿವಿಧ ಧೋರಣೆಗಳನ್ನು ಪ್ರತಿನಿಧಿಸುವಂತೆಯೇ ಅವರ ಪಾತ್ರಗಳು ಸೃಷ್ಟಿಯಾಗಿವೆ. ಸುಧಾರಕರೆಂದು ಕರೆಸಿಕೊಳ್ಳುವ ವ್ಯಕ್ತಿಗಳ ಒಳಹೊರಗುಗಳ ಅಂತರವನ್ನು ತಿಳಿಸುತ್ತಾ, ಸುಶಿಕ್ಷಿತರಲ್ಲದಿದ್ದರೂ ಸುಸಂಸ್ಕೃತರಾಗಿ ಆದರ್ಶೀಕರಿಸಲ್ಪಟ್ಟ ಮಾರಪ್ಪ, ದಾರು, ದ್ರೌಪದಿ, ಅದ್ರಾಮರ ಪರಿಶುದ್ಧ ಪ್ರೇಮ ಕಥೆಯನ್ನು ಹೇಳುತ್ತಾರೆ.

ದ್ರೌಪದಿ-ಅದ್ರಾಮ ಇವರ ಹಿತೈಷಿಯರು ಹಿಂದೂ ಧರ್ಮದ ಪಾರಂಪರಾಗತ ಉನ್ನತ ಆದರ್ಶಗಳನ್ನು ಧಿಕ್ಕರಿಸಿ ಮಾನವತೆಗೆ ಶ್ರಮಿಸುವ ಪ್ರತೀಕಗಳಾಗುತ್ತಾರೆ. ಇವರ ಸುತ್ತಲೂ ಜಮೀನ್ದಾರರು, ಪೊಳ್ಳು ವ್ಯಕ್ತಿಗಳು, ಸುಧಾರಣೆಯ ಬಡಾಯಿಗಳ ಒಳಗೊಳಗೆ ಸತ್ವರಹಿತ ಬದುಕು ನಡೆಸುವವರು. ದೊಡ್ಡ ಸಮೋಹವೇ ಚಿತ್ರಿತವಾಗುತ್ತದೆ. ಆದರೆ 'ಹೆಜ್ಜೆ' ಕಾದಂಬರಿಯ ವಿದ್ಯಾಧರ-ಸಾವಿತ್ರಿ ಗಾಂಧಿಯ ವಿಚಾರಗಳಿಗೆ ಒಳಗಾದ ಇವರು ಸಂಪ್ರದಾಯದೊಳಗೆ ಇದ್ದುಕೊಂಡು ಸಾಮಾಜಿಕ ಬದಲಾವಣೆಗಳನ್ನು ತರುತ್ತಾರೆ. ಆ ಮೂಲಕ ಸಮಾನತೆಯನ್ನು ತರಲು ಶ್ರಮಿಸುತ್ತಾರೆ. ಇವರ ಹಿತೈಷಿಗಳಾದ ಸುಧಾಕರ ರಾವ್, ಆನಂದ ಸೋಮಯಾಜಿ, ರಫಿಸುರ್ತಿ ಮೊದಲಾದವರೆಲ್ಲ ಇವರಿಗೆ ಬೆಂಬಲವಾಗಿದ್ದಾರೆ. ಇವರ ಸುತ್ತಲೂ ಸಂಪ್ರದಾಯ ನಿಷ್ಠೆವುಳ್ಳವರು, ಅರೆ ವಿದ್ಯಾವಂತರೂ, ಪೊಳ್ಳು ವ್ಯಕ್ತಿಗಳು, ಸುಧಾರಣೆಯ ಬದುಕು ನಡೆಸುವವರೂ ಇದ್ದಾರೆ.

'ಗಾಂಧಿಬಂದ' ಮತ್ತು 'ಹೆಜ್ಜೆ' ಕಾದಂಬರಿಗಳನ್ನು ಒಟ್ಟಾಗಿ ಗಮನಿಸಿದಾಗ ಮೂವತ್ತರ ದಶಕದ ಅವಧಿಯಲ್ಲಿ ಸಮಾಜದಲ್ಲಿ ಗಾಂಧೀ ಪ್ರಭಾವದಿಂದ ಜನಸಮುದಾಯಗಳಲ್ಲಿ ಪ್ರಗತಿಪರವೂ, ವಿರುದ್ಧವೂ, ಆದ ಅಭಿಪ್ರಾಯಗಳ ತಾಕಲಾಟಗಳೆದಿದ್ದು ಈ ಲೇಖಿಕರು ಆ ತಾಕಲಾಟಗಳಿಗೆ ಅಭಿವ್ಯಕ್ತಿ ನೀಡಲು, ಸ್ತ್ರೀ ಪಾತ್ರಗಳನ್ನು ಕೆಲವು ನಿರ್ದಿಷ್ಟ ವಿಚಾರ ಹಾಗೂ ಆಶಯಗಳನ್ನು ಬಿಂಬಿಸಲು ಬಳಸಿಕೊಂಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಲೇಖಕರ ಅದ್ವೈತ ಧರ್ಮದ ಜಿಜ್ಞಾಸೆಯ ಕಡೆಗೆ, ಹಿಂದೂ ಧರ್ಮದ ಅನಿಷ್ಟ ಅಂಶಗಳ ಖಂಡನೆಗೆ, ಸ್ತ್ರೀ ಪ್ರಗತಿಗೆ, ಅಸಮಾನತೆಯ ನಿವಾರಣೆಗೆ, ಜಮೀನ್ದಾರರ ದಬ್ಬಾಳಿಕೆಯನ್ನು ತೋರಿಸುವುದು ಮುಖ್ಯವಾಗಿದೆ.

'ಗಾಂಧಿಬಂದ'ಕಾದಂಬರಿಯ ಸಂಪ್ರದಾಯಸ್ಥ ಕುಟುಂಬದ ದ್ರೌಪದಿ ಮೊದಲೆ ವಿಧವೆಯಾದವಳು. ಆದರೆ 'ಹೆಜ್ಜೆ' ಕಾದಂಬರಿಯ ನಾಯಕಿ ಸಾವಿತ್ರಿ ಗಾಂಧೀಯ ತತ್ವಗಳಲ್ಲಿ ಪ್ರಭಾವಿತಳಾಗಿ ತನ್ನ ಗಂಡ ಸಂಪ್ರದಾಯಸ್ಥ ಮನೆತನದ ವಿದ್ಯಾಧರನನ್ನು ಗಾಂಧಿಯ ವಿಚಾರಗಳಿಗೆ ಪ್ರೇರೆಪಿಸಿ ಅವನು ಬದಲಾಗುವ ಮುಖಾಂತರ ಸಂಪ್ರದಾಯಿಕ ಕುಟುಂಬದಲ್ಲಿ ಪರಿವರ್ತನೆಯನ್ನು ತಂದು ಆ ಮೂಲಕ ಸಾಮಾಜಿಕ ಜೀವನದಲ್ಲಿ ಬದಲಾವಣೆಯನ್ನು ತರಲು ಕಾರಣರಾಗುತ್ತಾರೆ. ಗಂಡ ರಾಜಕೀಯ ಹೋರಾಟದಲ್ಲಿ ಸಾವನ್ನಪ್ಪುತ್ತಾನೆ. ವಿಧವೆಯಾದ ಸಾವಿತ್ರಿಯನ್ನು ಲೇಖಕರು ಗಾಂಧಿಯ ವಿಚಾರಗಳನ್ನು ಬೆಳೆಸುವ, ಆ ಮೂಲಕ ಬದಲಾವಣೆಯನ್ನು ತರುವ ಆಶಯವಾಗಿ ಉಳಿಸಿಕೊಂಡಿದ್ದಾರೆ. ಮೊದಲೆ ವಿಧವೆಯಾದ ಸಂಪ್ರದಾಯಸ್ಥ ಮನೆತನದ ದ್ರೌಪದಿ ಸಂಪ್ರದಾಯದ ಚೌಕಟ್ಟುಗಳನ್ನು ಮೀರಿ ಅನ್ಯಧರ್ಮೀಯನಾದ ವ್ಯಕ್ತಿಯನ್ನು ಮದುವೆಯಾಗುವ ಮೂಲಕ ಸ್ತ್ರೀ ಸ್ವಾತಂತ್ರ್ಯ-ಸ್ತ್ರೀಪ್ರಗತಿಗೆ ಕಾರಣಳಾಗುತ್ತಾಳೆ. ಈಕೆಯನ್ನೇ ಹೋಲುವ ಸಂಪ್ರದಾಯದ ಅನಿಷ್ಟ ಪದ್ಧತಿಗಳಿಂದ ಹೊರಬಂದ ಸುಶಿಕ್ಷಿತಳಾದ ಶಾಂಭವಿಯೂ ಬೇರೆ ಜಾತಿಯ ರಘುವನ್ನು ಮರುಮದುವೆಯಾಗಿ ಸುಧಾರಣೆ ತಂದುಕೊಂಡು ಬದುಕಿದವಳು. ಸಾವಿತ್ರಿ ಇಬ್ಬರಿಗಿಂತಲೂ ಭಿನ್ನವಾಗಿ ಉಳಿಯುವಂತವಳು.

ವಿದ್ಯಾ ಸಾವಿತ್ರಿಯ ಮೂಲಕ ಗಾಂಧಿಯ ತತ್ವಗಳಲ್ಲಿ ಪ್ರಭಾವಿತನಾಗಿ, ಮುಂದೆ ಓದು ಹೆಚ್ಚಿದಂತೆಲ್ಲ, ಗಾಂಧಿಯ ಶಾಂತಿಯ ತತ್ವಗಳಲ್ಲಿ ನಿರುತ್ಸಾಹಿತನಾಗಿ ದೇಶಕ್ಕೆ ಸ್ವಾತಂತ್ರ್ಯ ಬರಬೇಕಾದರೆ ಕ್ರಾಂತಿಯಿಂದಲೇ ಎಂದು ತಿಳಿದ ಈತ ಕಮ್ಯುನಿಷ್ಟ್ ನಾಗುವುದು. ಆ ಮೂಲಕ ಹೋರಾಟದಲ್ಲಿ ಭಾಗವಹಿಸಿ ಬ್ರಿಟಿಷರ ಗುಂಡಿಗೆ ಬಲಿಯಾಗುತ್ತಾನೆ. ಅಹಿಂಸೆ, ಶಾಂತಿಯ ಮಂತ್ರಗಳಿಂದ ಸುಧಾರಣೆ ತರಲು ಸಾಧ್ಯವಿಲ್ಲವೆಂದು ಆತ ನಂಬಿದಂತೆ ಕಾಣುತ್ತಾನೆ. ಸಾವಿತ್ರಿಯ ಮೂಲಕ ಗಾಂಧಿಯ ತತ್ವಗಳನ್ನು ಪ್ರಚುರಪಡಿಸುವ ಜೊತೆಗೆ ಕಮ್ಯುನಿಷ್ಟ್ ತತ್ವಗಳನ್ನು ವಿದ್ಯಾಧರ, ಮಾಧವಕಮ್ಮಿ,

ಸುಧಾಕರ ರಾವ್ ಇವರ ಮೂಲಕ ಪ್ರಚುರ ಪಡಿಸುತ್ತಾರಾದರೂ ಅಂತಿಮವಾಗಿ ಗಾಂಧೀಯ ತತ್ವಗಳೂ ಸಮಾಜದ ಅಭಿವೃದ್ಧಿಗೆ ಪೂರಕವಾಗಲಾರವು ಎನ್ನುವಂತೆ "ಗಾಂಧಿ ಇನ್ನಿಲ್ಲ ಮಾವಯ್ಯ..... ಗಾಂಧಿ ಇನ್ನಿಲ್ಲ....... ಟೊಪ್ಪಿ ಮಾತ್ರ ಇದೆ"(ಪು.೪೮೩)ಎಂದು ಹೇಳಲಾಗುತ್ತದೆ. ಗಾಂಧೀ ಹೆಸರಿನಲ್ಲಿ ರಾಜಕೀಯ ಮಾಡಲಾಗುತ್ತದೆ ಎಂಬ ಧ್ವನಿ ಇಲ್ಲಿ ವ್ಯಕ್ತವಾಗುತ್ತದೆ.

ಗಾಂಧೀ ಬಂದ ಹಿನ್ನೆಲೆಯಲ್ಲಿ ಅವರ ಆದರ್ಶಗಳಿಗೆ ಒಳಗಾದ, ಸುಶಿಕ್ಷಿತರಲ್ಲದಿದ್ದರೂ ಸುಸಂಸ್ಕೃತರಾದ ಮಾರಪ್ಪಶೆಟ್ಟಿ, ತಿಂಗಳಾಯ, ಅದ್ರಾಮರು ತಮ್ಮ ಮಾನವೀಯ ಹಾಗೂ ವೈಚಾರಿಕ ನಿಲುವಿನಿಂದ ಗಾಂಧೀಯ ಆದರ್ಶದ ಕನಸನ್ನು ನನಸು ಮಾಡಲು ಪ್ರಯತ್ನಿಸಿದರು. ಆದರೆ ನಂತರದ ಬೆಳವಣಿಗೆಗಳು ವ್ಯತಿರಿಕ್ತವಾಗಿವೆ.

ಸಾವಿತ್ರಿ, ದ್ರೌಪದಿ ಪಾತ್ರಗಳ ಮೂಲಕ ಧಾರ್ಮಿಕ, ಸಾಮಾಜಿಕ ಬದಲಾವಣೆಯ ಪ್ರತಿಪಾದಿಸುವಲ್ಲಿ ವಾಸ್ತವ ನೆಲೆ ಕಂಡುಕೊಳ್ಳಲಾಗಿದೆ.

'ಗಾಂಧಿಬಂದ', 'ಹೆಜ್ಜೆ' ಈ ಎರಡೂ ಕಾದಂಬರಿಗಳು ನಾಡಿಗೆ ಗಾಂಧೀಜಿ ಬಂದ ಹಿನ್ನೆಲೆಯಲ್ಲಿ ಗಾಂಧೀಯ ಪ್ರಭಾವಕ್ಕೊಳಗಾದ ಕುಟುಂಬಗಳಲ್ಲಿ ಅಥವಾ ವ್ಯಕ್ತಿಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ ಪರಿವರ್ತನೆಗಳಾಗಿ, ಬ್ರಿಟೀಷ್ ವಸಾಹತುಶಾಹಿ ಆಡಳಿತದ ವಿರುದ್ಧ ಜನ-ಜಾಗೃತರಾಗಿ, ಸ್ವಾತಂತ್ರ್ಯದಿಂದ, ಸಾಮಾಜಿಕ ಸಮಾನತೆಯನ್ನು ರೂಢಿಸಿಕೊಳ್ಳುವಲ್ಲಿ ಕಾದಂಬರಿಗಳ ಪಾತ್ರಗಳಲ್ಲಿ ವ್ಯಕ್ತವಾಗಿದೆ. ಎರಡರಲ್ಲೂ ಸ್ತ್ರೀಯರ ಅಥವಾ ಎಲ್ಲಾ ಮಾನವರ ಬದುಕಿನ ಪ್ರಗತಿಯ ಚಿಂತನೆಗೆ ಅಡ್ಡಿಯಾಗಿರುವ ಅಂಶಗಳನ್ನು ಈ ಕಾದಂಬರಿಗಳಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ೫

ಗಾಂಧಿಯ ಪ್ರಭಾವ: ಕೌಟುಂಬಿಕ ಬದಲಾವಣೆ

ಮಹಾತ್ಮಗಾಂಧೀಜಿ ಅವರು ಜನರ ಜೀವ ನಾಡಿಗಳಲ್ಲಿಳಿದು ಹೋಗಲು ಆತನ ತತ್ವಗಳೇ ಮುಖ್ಯ ಕಾರಣವಾಗಿದ್ದವು. ೧೯೧೮ರಲ್ಲಿ 'ಹಿಂದ್ ಸ್ವರಾಜ್' ಬರೆದರು. ಅದರಲ್ಲಿ ಅವರ ಚಿಂತನೆಗಳಿವೆ. ಅವು ಇಂದಿಗೂ ಯೋಚಿಸುವಂತಿವೆ. ಅವುಗಳನ್ನೇ ಮೂಲವಾಗಿಟ್ಟುಕೊಂಡು ಅವರು ೧೯೧೭ರಲ್ಲಿ ಭಾರತದ ರಾಜಕೀಯಕ್ಕೆ ಸಕ್ರೀಯವಾಗಿ ಪ್ರವೇಶಿಸಿದರು. ಗಾಂಧೀಜಿಯವರ ಪ್ರಭಾವ, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಭಾರತೀಯರ ಆಲೋಚನಾ ಕ್ರಮಕ್ಕೆ ರೂಪ ಕೊಟ್ಟದ್ದು ಈ ಕಾಲದಲ್ಲಿಯೇ. ವಸಾಹತುಶಾಹಿ ಆಡಳಿತದ ವಿರುದ್ಧ ಜನರನ್ನು ಹೋರಾಟಕ್ಕೆ ಕರೆ ನೀಡಿದರು. ಜಾತಿ ಪದ್ಧತಿ, ಅಸ್ಪೃಶ್ಯತೆ, ಮೊದಲಾದ ಅನಿಷ್ಟಗಳನ್ನು ಹೋಗಲಾಡಿಸಲು ಅವುಗಳ ವಿರುದ್ಧ ಹೋರಾಟವನ್ನು ನಡೆಸುವುದು ಆ ಮೂಲಕ ರಾಜಕೀಯ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ತರುವುದು ಗಾಂಧೀಜಿ ಅವರ ಗುರಿಯಾಗಿತ್ತು.

ಸ್ವಾತಂತ್ರ್ಯ ಹೋರಾಟದ ಸಂಘಟನೆ ಪ್ರಕರ್ಷಕ್ಕೆ ಬಂದದ್ದು ೧೯೩೦ ರ ದಶಕದಲ್ಲಿ. ಗಾಂಧೀಜಿಯ ನಾಯಕತ್ವದಲ್ಲಿ ರೂಪಗೊಂಡ ಕಾಂಗ್ರೆಸ್ ಚಳುವಳಿ ದೇಶದಲ್ಲೆಲ್ಲಾ ತನ್ನ ಸಂಘಟನಾತ್ಮಕ ಶಕ್ತಿಯಿಂದ ವಸಾಹತುಶಾಹಿ ಆಡಳಿತದ ವಿರುದ್ಧ ಹೋರಾಟವನ್ನು ನಡೆಸಲು ತನ್ನ ರಚನಾತ್ಮಕ ಕಾರ್ಯಗಳನ್ನು

ಕೈಗೊಂಡಿತು. ಇದರ ಅಂಗವಾಗಿ ಪ್ರಚಾರದ ಉದ್ದೇಶದಿಂದ ಗಾಂಧೀಮಂಗಳೂರಿಗೆ ಬಂದರು. ಗಾಂಧೀಜಿ ಪ್ರಭಾವಕ್ಕೆ ಒಳಗಾದ ಅನೇಕ ಸಮುದಾಯಗಳು ಗಾಂಧೀಜಿಯ ಅನುಯಾಯಿಗಳಾದರು.

ಈ ಹಿನ್ನೆಲೆಯನ್ನು ಕುರಿತು ರಚನೆಯಾದ 'ಗಾಂಧಿಬಂದ' ಮತ್ತು 'ಹೆಜ್ಜೆ' ಕಾದಂಬರಿಗಳು ಪ್ರಾದೇಶಿಕ ಬದುಕಿನ ಜೀವನ ಚಿತ್ರಣದ ಜೊತೆಗೆ ಗಾಂಧಿಯ ಪ್ರಭಾವಕ್ಕೆ ಒಳಗಾದ ಪ್ರತಿಯೊಬ್ಬರೂ, ತಮ್ಮ ಬದುಕಿನ ಸಂದರ್ಭಗಳಲ್ಲಿ ದೇಶದ ರಾಜಕೀಯ ವಿದ್ಯಮಾನಗಳನ್ನು ಗ್ರಹಿಸುವುದಷ್ಟೇ ಅಲ್ಲ ಹೋರಾಟಕ್ಕೆ ಸಂಘಟನೆಯಾಗುವ ಮೂಲಕ ರಾಜಕೀಯ ಸ್ವಾತಂತ್ರ್ಯ ಸಮಾನತೆಯನ್ನು ತರಲು ಹೊಸವಾತಾವರಣವನ್ನು ನಿರ್ಮಿಸಿಕೊಂಡರು.

'ಗಾಂಧಿಬಂದ' ಕಾದಂಬರಿ ತುಳುನಾಡಿನ ಸಾಂಸ್ಕೃತಿಕ ಆಚರಣೆಗಳ ಜೊತೆಗೆ ಪ್ರಾದೇಶಿಕ ಜನರ ಜೀವನ ಕ್ರಮ, ಹಾಗೂ ಗಾಂಧೀ ಪ್ರಭಾವಿತರು, ಆತನ ತತ್ವಗಳಿಗೆ ಪ್ರೇರಿತರಾದ ವ್ಯಕ್ತಿಗಳು - ಕೌಟುಂಬಿಕವಾಗಿ - ಸಾಮಾಜಿಕ ಬದಲಾವಣೆಗೆ ಹೇಗೆ ಕಾರಣರಾದರು ಎನ್ನುವುದನ್ನು ಯಥಾವತ್ತಾಗಿ ಕಾದಂಬರಿ ಚಿತ್ರಿಸುತ್ತದೆ.

ತುಳುನಾಡಿನ ವಿಶಿಷ್ಟ ಸಾಂಸ್ಕೃತಿಕ ಆಚರಣೆಗಳ ಪಲಕುಗಳನ್ನು ಪರಿಚಯಿಸುತ್ತಲೇ ಆರಂಭವಾಗುವ ಕಾದಂಬರಿಯಲ್ಲಿ ಗಾಂಧಿಯ ಪ್ರಭಾವಕ್ಕೆ ಒಳಗಾದ ಸುಧಾರಕರೆನಿಸಿದ ಮಾರಪ್ಪ ಶೆಟ್ಟಿ, ತಿಂಗಳಾಯ, ಅದ್ರಾಮ ಇವರು ಗಾಂಧೀ ತತ್ವಗಳಾದ ಖಾದಿ ಪ್ರಚಾರ, ಹರಿಜನೋದ್ಧಾರ, ಮದ್ಯಪಾನ ನಿಷೇದ, ಅಹಿಂಸೆ, ಸ್ವರಾಜ್ಯ ಚಳುವಳಿ ಈ ಮೊದಲಾದ ವಿಚಾರಗಳನ್ನು ಪ್ರಾದೇಶಿಕವಾಗಿ ಜನರಲ್ಲಿ ಪ್ರಚಾರ ಮಾಡುತ್ತಾ ಕುಟುಂಬಗಳಲ್ಲಿ-ವ್ಯಕ್ತಿಗಳಲ್ಲಿ ಜಾಗೃತಿಯನ್ನು ಮೂಡಿಸಿದರು.

ಸಂಪ್ರದಾಯಸ್ತ ಕುಟುಂಬದವರಾದ ಸೀನಪ್ಪಯ್ಯ ಹೆಬ್ಬಾರ, ಮೀನಕಳಿಯದ ವಾಸುಭಟ್ಟ, ಪೆರೆಂಬೂರು ದೇವಸ್ಥಾನದ ಅರ್ಚಕರಾದ ಭೂತ್ಕೆತಾಳ, ಕಿಟ್ಟುಭಟ್ಟರು ಇವರೆಲ್ಲ ಸಾಂಪ್ರದಾಯದ ಆಚರಣೆಗಳನ್ನು ನಿಷ್ಠೆಯಿಂದ ಆಚರಿಸುವಂತವರು. ಮೇಲಾಗಿ ಸಮಾಜದ ಯಾವುದೇ ಬದಲಾವಣೆಯನ್ನು ಬಯಸದ ಪ್ರವೃತ್ತಿಯವರು. ಆದರೆ ಇವರಿಗೆ ಭಿನ್ನವಾದ, ಸಂಪ್ರದಾಯಸ್ಥರಾದರೂ ತಣ್ಣೀರು ಬಾವಿಯ ಕೇಶವಶಾನುಭೋಗರು ಬದಲಾಗುತ್ತಿರುವ ಸಮಾಜದ ಪ್ರವೃತ್ತಿಗಳಿಗೆ ಆಧುನಿಕತೆಗೆ ಹೊಂದಿಕೊಳ್ಳಲು ಹವಣಿಸುವಂತವರು. ಬ್ರಿಟಿಷ್ ಆಡಳಿತದಲ್ಲಿ ಶ್ಯಾನುಬೋಗಿಕೆಯ ಅಧಿಕಾರ ಹೊಂದಿದ್ದರೂ ಕೂಡ ಗಾಂಧಿಯ ಪ್ರಭಾವಕ್ಕೆ ಒಳಗಾದ ಇವರು ಅದನ್ನು ತ್ಯಜಿಸಲೂ ಬಯಸಿದರು. ಒಮ್ಮೆ ಗಾಂಧಿವಾದಿಗಳಾದ ಮಾರಪ್ಪ, ತಿಂಗಳಾಯರು ಸ್ವರಾಜ್ಯಗಳಿಕೆಗೆ ಹಣವನ್ನು ಕೇಳಲು ಇವರ ಮನೆಗೆ ಬಂದಾಗ 'ಜಿಲ್ಲೆಯ

ಐರಿಷ್ ಕಲೆಕ್ಟರರು' ವಿಹಾರಕ್ಕೆ ಬರುತ್ತಾರೆ ಎನ್ನುವುದನ್ನು ತಿಳಿದ ಇವರು "ಬಂದರೆ ಬರ್ತಾರೆ; ನೋಡಿದರೆ ನೋಡ್ತಾರೆ, ಹೆಚ್ಚೆಂದರೆ ನನ್ನ ಕೈಯಿಂದ ಶಾನುಬೋಗಿಕೆ ಕಸಿದು ಕೊಳ್ಳಬಹುದು ಅಷ್ಟೇ ಅಲ್ವೆ, ಹಾರಿ ಹೋಗಲಿ ಇಷ್ಟು ವರ್ಷ ಮಾಡಿದ್ದೇ ಜಾಸ್ತಿಯಾಯ್ತು"(ಪು.೧೫) ಎನ್ನುವ ಇವರ ಮಾತಿನಲ್ಲಿ ವಸಾಹತುಶಾಹಿ ಆಡಳಿತದಲ್ಲಿ ಅಧಿಕಾರವನ್ನು ಪಡೆದಿದ್ದರೂ ಕೂಡ ಗಾಂಧೀ ಪ್ರಭಾವದಿಂದ ಬದಲಾಗಿದ್ದರು. ಅಧಿಕಾರ ಪಡೆದವರೇ ಬದಲಾದದ್ದು ಸಾಮಾನ್ಯವಲ್ಲ. ಇನ್ನು ಜನಸಾಮಾನ್ಯರಿಗೆ ಯಾರ ಹಂಗೂ ಇರಲಿಲ್ಲ.

ಸಂಪ್ರದಾಯಸ್ಥ ಕುಟುಂಬದ ಪ್ರತಿಷ್ಠಿತರಾದ ಸೀನಪ್ಪಯ್ಯ ಹೆಬ್ಬಾರರು ಗಾಂಧಿಯ ಎಲ್ಲಾ ವಿಚಾರಗಳಲ್ಲಿ ವಿರೋಧವುಳ್ಳವರು ಮೇಲಾಗಿ ಕೆಳವರ್ಗದ ಜನರನ್ನು ಪೀಡಿಸುವ ವ್ಯಕ್ತಿತ್ವದವರು. ಎಳೆಯ ವಯಸ್ಸಿಯಲ್ಲಿಯೇ ವಿಧವೆಯಾದ ಮಗಳು ದ್ರೌಪದಿಗೆ ಸಂಪ್ರದಾಯದ ನಿಷ್ಠೆಯಲ್ಲಿ ಇರಲು ಒತ್ತಾಯಿಸುತ್ತಿದ್ದರು. ಮಗಳ ಮನಃಸ್ಥಿತಿಯನ್ನು ಅರಿಯುವ ವ್ಯಕ್ತಿ ಅವನಾಗಿರಲಿಲ್ಲ. ಇಲ್ಲಿ ಜಡಗೊಂಡ ಸಂಪ್ರದಾಯಕ್ಕಾಗಿ ಮಾನವೀಯತೆಯನ್ನೇ ಬಲಿ ಕೊಟ್ಟವರು. ಈ ಎಲ್ಲಾ ನಿರ್ಬಂಧದ ವಿರುದ್ಧ ಬಂಡಾಯವೆದ್ದ ದ್ರೌಪದಿಯ ಹತ್ತಿಕ್ಕಲಾರದ ಭಾವನೆಗಳ ಮನಸ್ಸು ಗಾಂಧಿಯ ಪ್ರಭಾವಕ್ಕೊಳಗಾದ ಅದ್ರಾಮನ ಸ್ನೇಹ - ಪ್ರೀತಿಯನ್ನು ಬಯಸುತ್ತದೆ. ಇದನ್ನು ತಿಳಿದ ಸಂಪ್ರದಾಯನಿಷ್ಠೆಯ ಹೆಬ್ಬಾರರು ಈ ಪ್ರೀತಿಯನ್ನು ಹತ್ತಿಕ್ಕುವ ಪ್ರಯತ್ನವನ್ನು ಬಲವಾಗಿ ಮಾಡುತ್ತಾರೆ.

ಗಾಂಧಿಯ ಪ್ರಭಾವಕ್ಕೆ ಒಳಗಾದ ಅದ್ರಾಮ ಜಟಕಾ ಓಡಿಸಿ ಜೀವನ ನಡೆಸುವಂತವನು. ವಿಧವೆಯಾದ ದ್ರೌಪದಿಯ ಹೆಣ್ತನಕ್ಕೆ, ಆಕೆಯ ದುರಂತದ ಬದುಕನ್ನು ಚಿಗುರುಸುವ, ಬ್ರಾಹ್ಮಣ್ಯದ ಅಂಧ ಮೌಲ್ಯಗಳಿಂದ ಮುಕ್ತಿಗೊಳಿಸುವ ಉದ್ದೇಶದಿಂದ ಆಕೆಯನ್ನು ಮರು ಮದುವೆಯಾಗುತ್ತಾನೆ. ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಧರ್ಮದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳದೆ, ಬರೀಯ ಮೌಢ್ಯಗಳನ್ನು ಅಳವಡಿಸಿಕೊಂಡು ಬಂದಿದ್ದ ಸನಾತನ ಸಂಪ್ರದಾಯದ ನಿಷ್ಠೆಯ ಕುಟುಂಬಗಳಲ್ಲಿ ಬದಲಾವಣೆಯನ್ನು ತರುವಲ್ಲಿ, ದ್ರೌಪದಿ ಮತ್ತು ಅದ್ರಾಮರ ಅಂತರ್ ಜಾತೀಯ ಮರುಮದುವೆ ಸಮಾಜದ ಸಂಪ್ರದಾಯ ಕುಟುಂಬಗಳ ಬದಲಾವಣೆಗೆ ಸೂಚನೆಯಾಗಿದೆ. ದ್ರೌಪದಿ ಮತ್ತು ಅದ್ರಾಮನ ನಡುವೆ ನಡೆಯುವ ಮದುವೆ ಗಾಂಧೀಯುಗದ ಫಲವಾಗಿ ಬಂದಂತೆ ಕಾಣುತ್ತದೆ.

ಗಾಂಧಿಯ ತತ್ವಗಳಿಗೆ ಒಳಗಾದ ಮಾರಪ್ಪಶೆಟ್ಟಿ ಸ್ಥಳೀಯವಾಗಿ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಹುಟ್ಟಿಸಲು ಖಾದಿಬಟ್ಟೆಯೇ ಸ್ವರಾಜ್ಯ ಗಳಿಕೆಯ ಅಸ್ತ್ರವಾಗಿ ಮುಂದಿಡುತ್ತಿದ್ದನು. ತನ್ನ ವೈಯಕ್ತಿಕ ಬದುಕನ್ನೆಲ್ಲಾ ತ್ಯಾಗ ಮಾಡಿ ಸ್ವಾತಂತ್ರ್ಯ ಹೋರಾಟದ ಚಳುವಳಿಗೆ ತನ್ನನ್ನು ತಾನು ಅರ್ಪಿಸಿಕೊಂಡಿದ್ದನು.

ತಾಯಿ ಸೂರಕ್ಕ ಮುದುವೆಗೆ ಒತ್ತಾಯಿಸುತ್ತಿದ್ದರೂ ತಾನು ಮದುವೆಯಾದರೆ ತನ್ನ ಸ್ವರಾಜ್ಯಗಳಿಕೆ ಖಾದಿ ಪ್ರಚಾರ, ಚಳುವಳಿ ನಿಂತು ಹೋದರೆ ಹೇಗೆ? ಎಂಬ ಗೊಂದಲದಲ್ಲಿದ್ದ ಈತನಿಗೆ "ವಿಧವೆಯಾದ ಹೆಣ್ಣಿಗೆ ಬಾಳು ಕೊಡುವುದೇ ನಿಜವಾದ ಮಾನವೀಯತೆ"(ಪು.೯೧)ಎನ್ನುವ ಕರ್ನಾಡರ ಮಾತಿನ ಮೋಡಿಗೆ ಒಳಗಾಗಿ ತಾನು ಅಂತ ಒಂದು ಹೆಣ್ಣಿಗೆ ಬಾಳು ಕೊಡಬೇಕೆಂದು ಯೋಚಿಸುತ್ತಾನೆ. ಪ್ರಕೃತಿಯ ಶಿಕ್ಷೆಗೆ ಒಳಗಾದ ಹೆಣ್ಣಿನ ಮನಸ್ಸಿನ ನಿರ್ಲಿಪ್ತತೆ ಹಾಗೂ ಅವಳ ಅಮಾನವೀಯ ಜೀವನವನ್ನು ಕಂಡ ಈತ ಜಾರಿಗೆ ಬೆಟ್ಟನ ಸುಬ್ಬಯ್ಯ ಶೆಟ್ಟರ ಮಗಳು ದಾರುವನ್ನು ಮದುವೆಯಾಗುತ್ತಾನೆ. ಗಾಂಧಿಯ ಕನಸನ್ನು ಕಾರ್ಯರೂಪಕ್ಕಿಳಿಸಿದ ಮಾರಪ್ಪ ಆ ಕುಟುಂಬದಲ್ಲಿ ಕವಚಿದ್ದ ದುಃಖ ದುಮ್ಮಾನಗಳನ್ನು ನಿವಾರಿಸುವ ಮೂಲಕ ಒಂದು ಹೆಣ್ಣಿಗೆ ಬದುಕು ನೀಡಿ ಸಾಮಾಜಿಕವಾಗಿ ಸ್ತ್ರೀ ಪ್ರಗತಿಗೆ ನೆರವಾಗುತ್ತಾನೆ.

ಗಾಂಧಿ ಒಬ್ಬ ಅವತಾರ ಪುರುಷ ಮಾನವ ಕುಲಕೋಟಿಯ ರಕ್ಷಕನೆಂದು ತಿಳಿದ ಸ್ಥಳೀಯ ಜನತೆ ದೇಶದ ಸ್ವಾತಂತ್ರ್ಯಕ್ಕಾಗಿ ನಿರ್ಗತಿಕರ ಏಳಿಗೆಗಾಗಿ ತಮ್ಮ ಎಲ್ಲಾ ಆಸೆ ಆಮಿಷಗಳನ್ನು ತೊರೆದು ನಿಧಿಯನ್ನು ಸಂಗ್ರಹಿಸಿ ಕೊಡುವಲ್ಲಿ ಮುಂದಾದರು. ಆರ್ಥಿಕ ದುರ್ಬಲತೆಯಿಂದ ಬದುಕಿನ ನಿರ್ಬರತೆ ಯಿಂದ ಹಸಿವನ್ನು ನೀಗಿಸಿಕೊಳ್ಳಲು ಹಿಂಸೆಯ ದಂಗೆಗಿಳಿದಿದ್ದ ಕೊರಗರು ಗಾಂಧಿಯ ಪ್ರಭಾವಕ್ಕೆ ಒಳಗಾದ ಐತು, ಕೂಸಮೊಲಿ, ಅಂಗರಮೂಲ್ಯ ಮೊದಲಾದವರು ಪ್ರಾಣಿ ಹಿಂಸೆಯನ್ನು, ಮಧ್ಯಪಾನ ಸೇವನೆಯನ್ನು ಬಿಟ್ಟರು. ಆ ಮೂಲಕ ತಮ್ಮ ಕೌಟುಂಬಿಕ ಬದುಕಿನಲ್ಲಿ ಹೊಸ ವಾತಾವರಣವನ್ನು ತಂದುಕೊಂಡರು. ಸ್ವರಾಜ್ಯಗಳಿಕೆಗೆ ಹಣ ಸಂಗ್ರಹಿಸಿ ಕೊಡುವಲ್ಲಿ ವೈಯಕ್ತಿಕ ಭಿನ್ನಾಭಿಪ್ರಾಯಗಳಿದ್ದರೂ, ಮಾನವೀಯ ಸಂಬಂಧವುಳ್ಳ ಎಲ್ಲರೂ ಸಮಸ್ಯೆಯ ಸುಧಾರಣೆಯ ಕಡೆಗೆ ಅವರು ಒಂದುಗೂಡುತ್ತಾರೆ.

ಗಾಂಧಿಬಂದು ಹೋದ ಪರಿಣಾಮವಾಗಿ ಆತನ ಪ್ರಭಾವಕ್ಕೆ ಒಳಗಾದ ವ್ಯಕ್ತಿಗಳು-ಕೌಟುಂಬಿಕ ಬದಲಾವಣೆಯನ್ನು ತಂದುಕೊಂಡು ಬದುಕಿನಲ್ಲಿ ಸಮಾನತೆಯನ್ನು ರೂಢಿಸಿಕೊಳ್ಳಲು ಪ್ರಯತ್ನಿಸಿದರು.

ಹೆಜ್ಜೆ

ಕರಾವಳಿಯ ಗ್ರಾಮೀಣ ಪರಿಸರದಲ್ಲಿ ಆರಂಭವಾಗುವ ಕಾದಂಬರಿಯಲ್ಲಿ ಗಾಂಧಿಯ ತತ್ವಗಳಿಗೆ ಒಳಗಾದ ವ್ಯಕ್ತಿಗಳು, ಕೌಟುಂಬಿಕ ಬದಲಾವಣೆಯ ಜೊತೆಗೆ ಸಾಂಸ್ಥಿಕ ಹೋರಾಟದ ವಿರುದ್ಧ, ವಸಾಹತುಶಾಹಿ ಆಡಳಿತದ ವಿರುದ್ಧ ಹೋರಾಡುವ ಮೂಲಕ ಸಾಂಸ್ಕೃತಿಕವಾಗಿ ಸ್ಥಿತ್ಯಂತರಕ್ಕೊಳಗಾಗಿದ್ದ ಮೌಲ್ಯಗಳಲ್ಲಿ ಬದಲಾವಣೆಯನ್ನು ತರಲು ಸ್ವಾತಂತ್ರ್ಯವನ್ನು ಹೊಂದಲು ಮುಂದಾದರು.

ಈ ಕಾದಂಬರಿಯ ಸಂಪ್ರದಾಯಸ್ಥ ಕುಟುಂಬಗಳಾದ ಕೊಡದೂರಿನ ಶ್ರೀಕಂಠಶಾಸ್ತ್ರೀ, ನಾರಾಯಣ ಶಾಸ್ತ್ರೀ, ಅಂಗಡಿ ವ್ಯಾಪಾರಿ ವೆಂಕಟೇಶ್ ಕಮ್ತಿ, ಗಂಗೊಳ್ಳಿಯ ಪರಮೇಶ್ವರ ಐತಾಳ, ಪಟೇಲ್ ಸೀನಪ್ಪಯ್ಯ ಶಾನುಭೋಗ ಇವರೆಲ್ಲ ಗಾಂಧಿಯ ತತ್ವಗಳಲ್ಲಿಯಾಗಲಿ, ಸ್ವರಾಜ್ಯ ಚಳುವಳಿಯಲ್ಲಿಯಾಗಲಿ ವಿರೋಧವುಳ್ಳವರು. ಸ್ವಾತಂತ್ರ್ಯ, ವಿಮೋಚನೆಯ ಒಂದು ದಾರಿಯಾಗಬಹುದು, ನಮ್ಮ ಸಂಪ್ರದಾಯದ ಕಟ್ಟಳೆಗಳಿಗೆ ದಕ್ಕೆಯಾಗಬಹುದೆಂದು ಇವರು ಬಲವಾದ ನಂಬಿಕೆ ಉಳ್ಳವರಾಗಿದ್ದರು. ಆದರೆ ಕೆಡದೂರಿನ ಪೊಟೋಗ್ರಾಪರ್ ಆನಂಧಸೋಮಯಾಜಿಗಳದು ಸಂಪ್ರದಾಯ ಕುಟುಂಬವಾದರೂ ಗಾಂಧಿಯ ವಿಚಾರಗಳಿಗೆ ಆತನ ತತ್ವಗಳಿಗೆ ಬದ್ದವಾಗಿದ್ದರು. ಇಲ್ಲಿ ಶ್ರೀಕಂಠಶಾಸ್ತ್ರೀ ಮತ್ತು ಆನಂದ ಸೋಮಯಾಜಿ ಈ ಎರಡು ಸಂಪ್ರದಾಯಸ್ಥ ಕುಟುಂಬಗಳಾದರೂ ಆನಂದ ಸೋಮಯಾಜಿ ಮನೆತನ ಗಾಂಧಿಯ ಪ್ರಭಾವಕ್ಕೆ ಹೇಗೆ ಒಳಗಾಯಿತು ಎನ್ನುವು ಕಾದಂಬರಿಯಲ್ಲಿ ಜಟಿಲವಾದ ಪ್ರಶ್ನೆಯಾದರೂ, ಸಮಾಜದ ಸಂಪ್ರದಾಯಸ್ಥ ಕುಟುಂಬಗಳಲ್ಲಿ ಬದಲಾವಣೆಯನ್ನು ತರುವುದೇ ಕಾದಂಬರಿಕಾರರ ಉದ್ದೇಶವಿದ್ದಂತೆ ತೋರುವುದರಿಂದ ಈ ಎರಡೂ ಕಟುಂಬಗಳಲ್ಲಿ ಸಂಬಂಧ ಏರ್ಪಡುತ್ತದೆ. ಶಾಸ್ತ್ರಿಗಳ ಮಗ ವಿದ್ಯಾಧರ ಕೊಡದೂರಿನ ಶಾಲೆಯಲ್ಲಿ ಶಿಕ್ಷಕನಾಗಿದ್ದವನು. ಸೋಮಯಾಜಿಗಳ ಮಗಳು ಸಾವಿತ್ರಿ ತನ್ನ ಚಿಕ್ಕಪ್ಪ ಶಂಕರನಿಂದ ಗಾಂಧಿಯ ಪ್ರಭಾವಕ್ಕೆ ಒಳಗಾಗಿದ್ದ ಈಕೆ, ತಂದೆ-ತಾಯಿಯ ಒತ್ತಾಯದಿಂದ ವಿದ್ಯಾನನ್ನು ಮದುವೆಯಾಗಿ ಸಂಪ್ರದಾಯಸ್ಥ ಕುಟುಂಬದ ಶ್ರೀಕಂಠಶಾಸ್ತ್ರೀಗಳ ಸೊಸೆಯಾಗಿಬಂದ ಈಕೆ ಗಾಂಧಿಯ ನೆನಪಾಗಿ ತಂದದ್ದು - ಒಂದು ಗ್ರಾಂ ಪೋನ್, ಖಾದಿ ನೂಲುವ ತಕಲಿ ಮತ್ತು ಗಾಂಧೀಜಿಯ ಭಾವಚಿತ್ರ. ಇವುಗಳ ಮೂಲಕ ವಿದ್ಯಾನ ಮಡದಿಯಾಗಿ ಪ್ರವೇಶಿಸಿದ್ದ ಸಾವಿತ್ರಿ. ವಿದ್ಯಾಧರನನ್ನು ಗಾಂಧಿಯ ವಿಚಾರಗಳಲ್ಲಿ ಆತನ ತತ್ವಗಳಲ್ಲಿ ಪ್ರಚೋದಿಸಿ (ಪ್ರೇರೇಪಿಸಿ), ಅವನ ಮೂಲಕ ಸಮಾಜದ ಸಂಪ್ರದಾಯದ ಮನೆತನಗಳಲ್ಲಿ ಬದಲಾವಣೆಯನ್ನು ತರುವಲ್ಲಿ, ಆ ಮೂಲಕ ಗಾಂಧಿಯ ತತ್ವಗಳಿಗೆ ಕ್ರಿಯಾತ್ಮಕ ಚಲನೆಯ ಶಕ್ತಿಯನ್ನು ಕೊಡುತ್ತಾಳೆ.

ಸಾವಿತ್ರಿಯ ಮೂಲಕ ಗಾಂಧಿಯ ತತ್ವಗಳಿಗೆ ಒಳಗಾದ ವಿದ್ಯಾ ಸಂಪ್ರದಾಯಕ್ಕೆ ವಿರೋಧವೆನಿಸಿದ್ದ, ಗಾಂಧೀ ಟೋಪ್ಪಿ ಧರಿಸುವುದು, ತನ್ನ ಜುಟ್ಟನ್ನು ಕತ್ತರಿಸಿಕೊಳ್ಳುವುದು, ಗಾಂಧಿಯ ತತ್ವಗಳಲ್ಲಿ ಒಂದಾದ ಹರಿಜನೋದ್ಧಾರ ಮಾಡಲು ಕೊರಗರನ್ನು ಎಂಜಲೆಲೆಯ ಊಟವನ್ನು ತಿನ್ನದೆ ಬಿಡಿಸಿ ಅವರನ್ನು ಬದಲಾಯಿಸುವುದು, ದೇವಸ್ಥಾನದಲ್ಲಿ ಪ್ರವೇಶ ದೊರೆಯುವಂತೆ ಮಾಡುವುದು, ಕೀಳುಜಾತಿಯ ಕೆಂಚನಿಗೆ ಶಿಕ್ಷಣ ಕೊಡಿಸುವುದು, ಈ ಎಲ್ಲಾ ಬದಲಾವಣೆಯ ಮೂಲಕ ವಿದ್ಯಾಧರನ ಕುಟುಂಬದಲ್ಲಿ ಸಮುದಾಯದಲ್ಲಿ ಸಾಂಸ್ಕೃತಿಕ ಘರ್ಷಣೆಗಳಾಗಿ ಬದಲಾವಣೆಯಾಗುತ್ತವೆ.

ಗಾಂಧೀಯ ತತ್ವಗಳಿಗೆ ಒಳಗಾದ ವಿದ್ಯಾನ ಓದಿನ ವಿಸ್ತಾರ ಹೆಚ್ಚಾದಂತೆ ಸುಧಾಕರರಾವ್ ಮೊದಲಾದವರಿಂದ ಸಾಮ್ಯವಾದವನ್ನು ತಿಳಿದ ಈತನಿಗೆ ಗಾಂಧೀಯ ತತ್ವಗಳ ಜೊತೆಗೆ ಕಮ್ಯುನಿಸ್ಟ್ ತತ್ವಗಳೂ ಸ್ವಾತಂತ್ರ್ಯಕ್ಕೆ, ಸಮಾಜದ ಅಭಿವೃದ್ಧಿಗೆ ಪೂರಕವಾದಂತವು ಎಂದು ತಿಳಿದು ತನ್ನ ಆದರ್ಶದ ಕನಸುಹೊತ್ತು ಮುಂಬೈ ಮಹಾನಗರಕ್ಕೆ ಬಂದ ಇವನು ಮುಖಿನ್ ವಾಲಾ, ರಫಿಯಂತವರಿಂದ ರಾಜಕೀಯ ವಿದ್ಯಾಮಾನಗಳನ್ನು ತಿಳಿದ ವಿದ್ಯಾ ಸಾವಿತ್ರಿಯ ಮೂಲಕ ಗಾಂಧೀಯ ವಿಚಾರಗಳಿಗೆ ಒಳಗಾಗಿ ಕ್ರಮೇಣ ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಯ ತತ್ವಗಳೇ ಸಾಕಾಗೊಲ್ಲವೆಂದು ತಿಳಿದ ಈತ ಕಮ್ಯುನಿಸ್ಟ್ ನಾಗಿ ಸ್ವತಂತ್ರ್ಯ ಹೋರಾಟದಲ್ಲಿ ಧುಮುಕಿ. ತನ್ನ ಬದುಕನ್ನೇ ಪಣವಾಗಿಟ್ಟು ಕೊನೆಗೆ ಚಳುವಳಿಯಲ್ಲಿ ಸಾವಿಗೀಡಾಗುತ್ತಾನೆ. ಆ ಕಾಲಕ್ಕೆ ವಿದ್ಯಾವಂತ ಯುವಕರ ಮೆಲೆ ಗಾಂಧೀಯ ಆ ಹಿಂಸಾ ತತ್ವಕ್ಕಿಂತ ಕ್ರಾಂತಿಯ ತತ್ವಗಳು ಹೆಚ್ಚಾಗಿ ಪ್ರಬಾವ ಬೀರಿದಂತೆ ತೋರುತ್ತದೆ.

ಸಂಪ್ರದಾಯಸ್ಥ ಕುಟುಂಬದ ವಿಧವೆಯಾದ ಶಾಂಭವಿಯದು ಆದರ್ಶೀ ಕೃತವಾದ ಪಾತ್ರ. ಸುತ್ತಲಿನ ಮೌಢ್ಯ, ಕಂದಾಚಾರ ಸಂಪ್ರದಾಯಗಳಿಂದ ಈಕೆ ಬಂಧಿತಳಾದರೂ ಸಾವಿತ್ರಿಯ ಮೂಲಕ ಸುಶಿಕ್ಷಿತಳಾಗಿ ಓದು ಮುಗಿಸಿ ಶಿಕ್ಷಕಿಯಾಗಿ ಅನ್ಯ ಜಾತಿಯ ರಘುವನ್ನು ಮರು ಮದುವೆಯಾಗಿ ಸಂಪ್ರದಾಯದ ಕಂದಾಚಾರಗಳಲ್ಲಿದ್ದ ಕುಟುಂಬಕ್ಕೆ ಬದಲಾವಣೆ ತಂದವಳು. ಇದು ಗಾಂಧೀಯ ಪ್ರಭಾವದಿಂದ ಸಾಧ್ಯವಾಗುತ್ತದೆ. ವಿಧವಾವಿವಾಹ ಬ್ರಿಟಿಷ್‌ರ ಆಡಳಿತದ ಫಲವಾಗಿಯೂ ಹೌದು.

ಬ್ರಾಹ್ಮಣ್ಯದ ನಿಯಮಗಳನ್ನು ನಿಷ್ಠೆಯಿಂದ ಅನುಸರಿಸುವಲ್ಲಿ ಬದುಕು ಸಂದಿಗ್ಧವಾದಾಗ ವ್ಯಾಪಾರದ ಮನೋಭಾವ ಹೊಂದಿದ ಗಂಗಾಧರ ಸಂಪ್ರದಾಯವನ್ನು ಮೀರಿ ಉಡುಪಿಯಲ್ಲಿ ಹೊಟೇಲ್ ತೆಗೆದು ಆ ಮೂಲಕ ಬದುಕಿನಲ್ಲಿ ಆಧುನಿಕತೆಯನ್ನು ರೂಢಿಸಿಕೊಳ್ಳಲು ಹವಣಿಸಿ ಅದರಲ್ಲಿ ಜೀವನ ಕಂಡು ಕೊಂಡವನು ಶ್ರೀಕಂಠಶಾಸ್ತ್ರೀಗಳ ಮನೆತನದ ಈ ಎಲ್ಲಾ ಬದಲಾವಣೆಗೆ ಗಾಂಧೀಯ ಪ್ರಭಾವವಿದ್ದ ಸಾವಿತ್ರಿಯೇ ಕಾರಣವಾದವಳು. ಗಂಗಾಧರ ಕರ್ಮಠನಾದರೂ ಆರ್ಥಿಕ ತೊಂದರೆಯಿಂದ ಅದನ್ನು ನೀಗಿಸಿಕೊಳ್ಳಲು ಹೋಟೆಲ್ ತೆಗೆದು ಸಂಪಾದಿಸುವುದು ಕೂಡ ಬ್ರಿಟಿಷ್‌ರ ಆಗಮನದಿಂದ ಸಮಾಜದಲ್ಲಿ ಮೂಡಿದ ಆಧುನಿಕತೆಯ ಫಲವಾಗಿದೆ.

ಸಂಪ್ರದಾಯಸ್ಥ ಕುಟುಂಬದ ವೆಂಕಟೇಶ್ ಕಮ್ತಿಯ ಮಗ ಮಾಧವ ಕಮ್ತಿ ಕಮ್ಯುನಿಸ್ಟ್ ತತ್ವಗಳಲ್ಲಿ ನಂಬಿಕೆ ಇಟ್ಟು ಅವನು ಸ್ವಾತಂತ್ರ್ಯ ಹೋರಾಟದ ಸಂಘಟನೆ ಕಟ್ಟಿ ಶೋಷಿತರ ಪರ ನಿಲುವನ್ನು ತಳೆದು ಸಂಪ್ರದಾಯದ ಕುಟುಂಬಗಳಲ್ಲಿ ಬದಲಾವಣೆಯನ್ನು ತರಲು ಕಾರಣನಾದನು. ಕೆಳಜಾತಿಯ ಪುಟ್ಟಮೂಮನ ಮಗ ಕೆಂಚ, ವಿದ್ಯಾ ಮತ್ತು ಸಾವಿತ್ರಿಯ ಮೂಲಕ ಶಿಕ್ಷಣವನ್ನು ಕಲಿತು ಬದಲಾಗುತ್ತಿರುವ

ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಹೊಸ ಬದುಕಿನ ಆಶೋತ್ತರಗಳನ್ನು ಪ್ರತಿ ಬಿಂಬಿಸುವಂತವನು. ಶಿಕ್ಷಣದ ಮೂಲಕ ಬದುಕಿನಲ್ಲಿ ಬದಲಾವಣೆ ತಂದುಕೊಂಡ ಇವನು ಶಿಕ್ಷಣದ ಮಹತ್ವ ತಿಳಿಸುವಂತವನು.

ಗಾಂಧಿಯ ಪ್ರಭಾವಕ್ಕೆ ಒಳಗಾದ ನಾಗಿಯ ತಮ್ಮ ವೇಣುವಿನ ಸಹಾಯದಿಂದ ಹಾದರದ ಅಮಾನವೀಯ ಬದುಕಿನಿಂದ ಹೊರಬಂದು ಸ್ವಾತಂತ್ರ್ಯದ ಹೊಸ ಬದುಕನ್ನು ರೂಢಿಸಿಕೊಂಡಳು. ತನ್ನ ಜನಾಂಗದ ಬದುಕಿನ ಆಶೋತ್ತರಗಳಿಗೆ ಕನಸುಗಳಿಗೆ ಪ್ರೇರಕವಾಗುತ್ತಾಳೆ. ಕೆಳವರ್ಗದ ಕೊರಗರಿಗೆ ದೇವಸ್ಥಾನದಲ್ಲಿ ಪ್ರವೇಶ ದೊರೆಯುವ ಮೂಲಕ ಜಾತಿ ವರ್ಗಗಳಲ್ಲಿ ಹೊಸ ಕನಸುಗಳು ಹುಟ್ಟಿದವು. ಆದರೆ ಈ ಕನಸಿನ ದಾರಿಗೆ ಆದರ್ಶವಾದದ್ದು ಗಾಂಧಿಯ ಪ್ರಭಾವವೇ. ಈ ಘಟನೆಯಿಂದ ಕೆಳವರ್ಗದವರು ಸಾಮಾಜಿಕ ಅವಮಾನದಿಂದ ಹೊರಬಂದು ಸಾಂಸ್ಕೃತಿಕವಾಗಿ ಸಮಾನತೆಯನ್ನು ಪಡೆಯುವಂತಾಯಿತು.

ಸಂಪ್ರದಾಯದ ಆಚರಣೆಯ ಮೌಲ್ಯಗಳು ಒಂದು ಕಡೆ, ಗಾಂಧಿಯ ಪ್ರೇರಣೆಯಿಂದ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆ ಒಂದು ಕಡೆ ಈ ದ್ವಂದ್ವಗಳಿಗೆ ಸಿಲುಕಿದ ಸಂಪ್ರದಾಯಸ್ತ ಕುಟುಂಬದ ಶ್ರೀಕಂಠಶಾಸ್ತ್ರಿ ವೆಂಕಟೇಶ್ ಕಮ್ತಿ ಬದಲಾಗುತ್ತಿರುವ ವ್ಯವಸ್ಥೆಗೆ ಹೊಂದಿಕೊಂಡವರು. ಈ ಮೂಲಕ ಸಮಾಜದಲ್ಲಿ ಸಂಪ್ರದಾಯದ ಅಂಧ ಮೌಢ್ಯಗಳು ತೊಲಗಲು ಸಾಮಾಜಿಕವಾಗಿ ಆದ ಬದಲಾವಣೆಗಳೇ ಕಾರಣವಾದವು.

ಕೌಟುಂಬಿಕವಾದ ಈ ಎಲ್ಲಾ ಬದಲಾವಣೆಗೆ ಗಾಂಧಿಯ ಪ್ರಭಾವಕ್ಕೆ ಒಳಗಾದ ಸಾವಿತ್ರಿಯೇ ಕಾರಣ. ಸಾವಿತ್ರಿ ಗಾಂಧಿಯ ತತ್ವಗಳನ್ನು ವ್ಯಕ್ತಿಯ ನೆಲೆಯಲ್ಲಿ ಬಿತ್ತಿ, ಕೌಟುಂಬಿಕವಾಗಿ ಅನುಷ್ಠಾನಗೊಳಿಸುವಲ್ಲಿ, ಸಮಾಜದ ಸಾಂಸ್ಕೃತಿಕ ಬದಲಾವಣೆಗೆ ತನ್ನ ಬದುಕನ್ನೆ ಪಣವಾಗಿಟ್ಟವಳು. ಕುಟುಂಬಗಳಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ ಸ್ವಾತಂತ್ರ್ಯ, ಸಮಾನತೆಯನ್ನು ತಂದುಕೊಳ್ಳಲು, ಹೊಸಬದುಕನ್ನು ರೂಢಿಸಿಕೊಳ್ಳಲು ನೆರವಾದವಳು.

ಈ ಎರಡು ಕಾದಂಬರಿಗಳಲ್ಲಿ ಗಾಂಧೀಜಿ ಪ್ರಭಾವದಿಂದ ಸಾವಿತ್ರಿ, ದ್ರೌಪದಿ ಸಂಪ್ರದಾಯಿಕ ಕುಟುಂಬಗಳ ಬದುಕಿನಲ್ಲಿ ಬಿರುಗಾಳಿಯನ್ನೇ ಎಬ್ಬಿಸುತ್ತಾರೆ. ಆದರೆ ಅವರು ಎದುರಿಸಿದ ಕುಟುಂಬ, ಸಮಾಜ ಅವರಿಗೆ ಅನೇಕ ಅಡ್ಡಿಗಳನ್ನು ತಂದು ಒಡ್ಡಿದರೂ ಅವರು ಬದಲಾವಣೆಗೆ ಕಾರಣರಾದದು ಮಹತ್ವದ್ದಾಗಿ ಕಾಣುತ್ತದೆ.

ಬದಲಾಗುತ್ತಿರುವ ಸಮಾಜದ ಪ್ರವೃತ್ತಿಗಳಿಗೆ ಸಂಪ್ರದಾಯಸ್ಥ ಸಮಾಜದ ಹಳೆಯ ಶ್ರದ್ಧೆಗಳು ಅಳಿಯ ತೊಡಗಿ, ಭ್ರಷ್ಟತನ, ವಂಚನೆ, ದುಷ್ಟತನ. ಹಳೆಯ ಮೌಲ್ಯಗಳಿಗೆ ಅಂಟಿಕೊಂಡು ಬದುಕುವ ಜನರಿಗೆ ಬಂದೋದಗುವ ಕಷ್ಟಗಳು, ನಷ್ಟಗಳು ಅವುಗಳನ್ನು ಸಹಿಸಿ ಅವರು ತಮ್ಮ ನಂಬಿಕೆಯ ಗಟ್ಟಿತನವನ್ನು ಮೆರೆಸುವ ಬಗೆ ಕಾದಂಬರಿಗಳಲ್ಲಿ ವ್ಯಕ್ತವಾದರೂ ಗಾಂಧೀಯ ಪ್ರಭಾವಕ್ಕೆ ಒಳಗಾದ ಕಾದಂಬರಿಗಳ ಸುಧಾರಕರು, ಆದರ್ಶಪಾತ್ರಗಳು ಸಾಮಾಜಿಕವಾಗಿ ಕುಟುಂಬಗಳಲ್ಲಿ, ಸಮುದಾಯಗಳಲ್ಲಿ ಸಾಂಸ್ಕೃತಿಕ ಬದಲಾವಣೆ ತರುವಲ್ಲಿ ಇವರ ತ್ಯಾಗ,ಬಲಿದಾನ,ದೇಶಾಭಿಮಾನ, ಕರ್ತೃತ್ವ ಶಕ್ತಿಗಳ ಮೇಲೆಯೇ ಒತ್ತು ಇರುವುದನ್ನು ನೆನೆಯಬಹುದು.

ಅಧ್ಯಾಯ ೬

ಸ್ವಾತಂತ್ರ ಚಳುವಳಿ : ಸಾಮಾಜಿಕ ಬದಲಾವಣೆ

[illegible]

[illegible]

ಇಲ್ಲಿ 'ಚಳುವಳಿ' ಎನ್ನುವುದು ಸಮಾಜದಲ್ಲಾಗುತ್ತಿರುವ ಬದಲಾವಣೆಯ ಹಂತಗಳನ್ನು ಸೂಚಿಸುವಂತೆ ತೋರುತ್ತದೆ. ಯಾವುದೇ ಚಳುವಳಿಯ ಉದ್ದೇಶ ಅದು ಸಾಮಾಜಿಕವೇ ಆಗಿರಲಿ, ಧಾರ್ಮಿಕವೇ ಆಗಿರಲಿ ಇರುವ ಸ್ಥಿತಿಯ ಬದಲಾವಣೆಯೇ ಅದರ ಗುರಿ. ಈ ಹಿನ್ನಲೆಯಲ್ಲಿ ಗಾಂಧಿಜೀಯವರ ನಾಯಕತ್ವದಲ್ಲಿ ಶುರುವಾದ ಸ್ವಾತಂತ್ರ್ಯ ಚಳುವಳಿಯೂ ಸಹ ಆ ಸಾಮಾಜಿಕ ಸಂದರ್ಭದ ಸ್ಥಿತಿಯನ್ನು ಅವಲಂಬಿಸಿಯೇ ರೂಪಗೊಂಡಿತ್ತು.

ಬ್ರಿಟಿಷ್ ವಸಹಾತುಶಾಹಿ ಆಡಳಿತವಿದ್ದಾಗ ಭಾರತದ ಜನಸಮುದಾಯಗಳ ಬದುಕಿನ ಕ್ರಮ ಸಂಕ್ರಮಣ ಸ್ಥಿತಿಯಲ್ಲಿತ್ತು. ಅದನ್ನು ಬದಲಾಯಿಸಲು ಸ್ವಾತಂತ್ರ್ಯ ಚಳುವಳಿ ಆರಂಭವಾಯಿತು. ಬ್ರಿಟಿಷ್ ಆಡಳಿತದ ನೀತಿಗಳನ್ನು ಅದು ವಿರೋಧಿಸಿ, ಸಮುದಾಯದ ಅಸ್ಪಸ್ಥ ಸ್ಥಿತಿಗೆ ಗಾಂಧಿಜೀಯ ನಾಯಕತ್ವದಲ್ಲಿ ರೂಪಗೊಂಡಿದ್ದ ರಾಷ್ಟ್ರೀಯ ನಾಯಕರ ಗುಂಪು ಒಂದು ನಿರ್ಧಿಷ್ಟ ರೂಪ ನೀಡಲು ಪ್ರಯತ್ನಿಸಿತ್ತು. ಉದಾಹರಣೆಗೆ ಹನ್ನೆರಡನೆಯ ಶತಮಾನದ ಬಸವಣ್ಣನವರ ವಚನಚಳುವಳಿಯೂ ಸಹ ಇದೇ ಬಗೆಯದೇ ಆಗಿದ್ದಂತೆ ತೋರುತ್ತದೆ.

ಬ್ರಿಟೀಷ್ ಆಡಳಿತದ ವಿರುದ್ಧ ದೇಶಿಯ ಅಸಮಾನತೆಯ ವಿರುದ್ಧ ಚಳುವಳಿ ನಡೆಸುವುದು ಮುಖ್ಯವಾಗಿತ್ತು. ಆ ಸ್ಥಿತಿಯಲ್ಲಿ ಭಾರತಕ್ಕೆ ಬೇರೆ ರೀತಿಯಲ್ಲಿ ಪ್ರತಿಭಟನೆ ಮಾಡುವುದು ಕಷ್ಟವಿತ್ತು. ಹೀಗಾಗಿ ಗಾಂಧೀಜೀಯವರು ಅಹಿಂಸಾ ಚಳುವಳಿಯ ಮೂಲಕ ದೇಶವನ್ನು ದಾಸ್ಯದಿಂದ ಮುಕ್ತಿಗೊಳಿಸಲು ಕಾರ್ಯರೂಪಕ್ಕಿಳಿದರು.

ಜಾತಿಪದ್ಧತಿ, ಅಸ್ಪೃಶ್ಯತೆ, ಮತಾಂಧತೆ ಮೊದಲಾದ ನಾಡನ್ನು ಒಡೆಯುವ ಸಾಂಸ್ಥಿಕ ಬಿರುಕುಗಳ ವಿರುದ್ಧ ಸ್ವಾತಂತ್ರ್ಯ ಹೋರಾಟವು ಹೊಂದಿತ್ತು. ಭಾರತೀಯ ಇಂಗ್ಲೀಷ್ ವಿದ್ಯಾವಂತರ ಮನಸ್ಸು ರೂಪಗೊಂಡಿದ್ದು ಈ ಅವಸ್ಥಾಂತರಗಳಲ್ಲಿ. ಈ ದ್ವಂದ್ವದ ಆಲೋಚನೆಯಲ್ಲಿಯೇ ಭಾರತದ ರಾಷ್ಟ್ರದ ರಾಷ್ಟ್ರೀಯತೆಯ ವಸಹಾತು ವಿರೋಧದ ಪ್ರಜ್ಞೆ ತನ್ನ ರೂಪವನ್ನು ಪಡೆಯಿತು.

ಗಾಂಧೀಯವರ ನೈತಿಕತೆ ಮತ್ತು ಅವರ ಧಾರ್ಮಿಕ ದೃಷ್ಟಿಕೋನವು ಆ ಕಾಲದ ವಿದ್ಯಾವಂತ ವರ್ಗದ ದ್ವಂದ್ವಗಳನ್ನು ನಿವಾರಿಸುವ ಶಕ್ತಿ ಪಡೆದಿತ್ತು. ಅವರ ರಾಷ್ಟ್ರೀಯತೆಯ ಪರಿಕಲ್ಪನೆ ದೇಶದ ಜನರನ್ನು ಜಾಗೃತಗೊಳಿಸಿ ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕಿಳಿಸಿತ್ತು. ಈ ನಿಟ್ಟಿನಲ್ಲಿ ಗಾಂಧೀಜೀಯವರ ಚಿಂತನ-ವ್ಯಕ್ತಿತ್ವದಿಂದ ಪ್ರಭಾವಿತರಾದ ಬರಹಗಾರರು ಜನರನ್ನು ರಾಷ್ಟ್ರೀಯತೆಯತ್ತ ಜಾಗೃತಗೊಳಿಸುವಲ್ಲಿ ನಿರತರಾದರು. ಈ ಹಿನ್ನೆಲೆಯಲ್ಲಿ 'ಕಾದಂಬರಿ' ಪರಂಪರೆಯನ್ನು ಅವಲೋಕಿಸಿದಾಗ ಸಾಮಾಜಿಕ ಸ್ಥಿತ್ಯಂತರವನ್ನೇ ಮುಖ್ಯವಸ್ತುವಾಗಿ ಬಳಸಿಕೊಂಡು ರಚನೆಯಾದ ಕಾದಂಬರಿಗಳು ಕನ್ನಡಕ್ಕೆ ಹೊಸತೇನಲ್ಲ. 'ಗಾಂಧಿಬಂದ', 'ಹೆಜ್ಜೆ' ಕಾದಂಬರಿಗಳಿಗಿಂತ ಮೊದಲೇ ಈ ಮಾರ್ಗದಲ್ಲಿ 'ಔದಾರ್ಯದ ಉರುಳಲ್ಲಿ', 'ಸ್ವಾತಂತ್ರ್ಯದೆಡೆಗೆ', 'ಪುರುಷಾರ್ಥ', ಚಿರಸ್ಮರಣೆ'ಗಳಂತ ಕಾದಂಬರಿಗಳು ಕಾಣಿಸಿಕೊಂಡಿವೆ. ಸಾಮಾಜಿಕ ಬದಲಾವಣೆ, ವಸಹಾತುಶಾಹಿ ಆಡಳಿತದ ವಿರುದ್ಧ ಜನಜಾಗೃತಿ, ಸ್ವಾತಂತ್ರ್ಯ ಹೋರಾಟದ ಗತಿಯನ್ನು ಈ ಕಾದಂಬರಿಗಳಲ್ಲಿಯೂ ಗುರುತಿಸಬಹುದು. 'ಗಾಂಧಿಬಂದ', 'ಹೆಜ್ಜೆ' ಕಾದಂಬರಿಗಳ ವೈಶಿಷ್ಟ್ಯವೆಂದರೆ ಈ ಮೊದಲಿನ ಕಾದಂಬರಿಗಳ ಹರವನ್ನು ಬಿಟ್ಟುಕೊಟ್ಟು ಸಾಮಾಜದ ಸಾಂಪ್ರದಾಯಿಕ ಕುಟುಂಬಗಳ ಬದಲಾವಣೆಗೆ, ಸ್ತ್ರೀ ಸಮಾನತೆಗೆ, ಪ್ರಗತಿಗೆ ಲಕ್ಷ್ಯವಹಿಸಿದುದು. ಇದರಿಂದ ಇಲ್ಲಿ ಬರುವ ಬದುಕಿನ ದರ್ಶನ ಉಳಿದ ಕಾದಂಬರಿಗಳಿಗಿಂತ ಭಿನ್ನವೆನಿಸುತ್ತದೆ.

ಸ್ವಾತಂತ್ರ್ಯ ಬಂದು ಐದು ದಶಕಗಳು ಕಳೆದ ಮೇಲೂ ಸ್ವಾತಂತ್ರ್ಯ ಚಳುವಳಿಯ ವಸ್ತುವನ್ನಿಟ್ಟುಕೊಂಡು ಕೃತಿ ರಚನೆಯಾಗಿರುವಂತದ್ದು ಕುತೂಹಲವೆನಿಸಿದೆ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಸಮಾಜದ ಸಮಸ್ಯೆಗಳ ಪರಿಸ್ಥಿತಿ ಇಂದಿಗೂ ಸಾಕಾರಗೊಂಡಿಲ್ಲವೆನ್ನುವುದಕ್ಕೆ ನಾವೀಗ ಪುನಃ ಅವತ್ತಿನಂಥದೇ ಅವಸ್ಥೆಯಲ್ಲಿ

ತಲ್ಲಣಿಸುತ್ತಿರುವಾಗ ಅಂದಿನ ಇತಿಹಾಸದ ಅನುಭವಗಳನ್ನು ಪರಿಶೀಲಿಸಿಕೊಳ್ಳಬೇಕಾದ್ದು ಅಗತ್ಯವಾಗಿದೆ ಎಂಬುದಕ್ಕೆ ಲೇಖಕರು ಚಿತ್ರಿಸಿರುವ ಈ ಎರಡೂ ಕೃತಿಗಳಲ್ಲಿನ ಜನಪರವಾದ ಆಶಯ ಗಮನಿಸುವಂತದ್ದು.

ಇಪ್ಪತ್ತನೆ ಶತಮಾನದ ಮೂವತ್ತರ ದಶಕದಲ್ಲಿ ನಡೆದ ರಾಜಕೀಯ ಹೋರಾಟ, ಆ ಮೂಲಕ ಜನರ ಜೀವನದಲ್ಲಿ ನಡೆಯುವ ಐತಿಹಾಸಿಕ ಸಂಕ್ರಾಂತಿಯೇ ಈ ಕಾದಂಬರಿಗಳ ವಸ್ತುವಾಗಿದೆ. ಈ ಕೃತಿಗಳ ಘಟನೆಗಳೆಲ್ಲವೂ ಇಪ್ಪತನೆ ಶತಮಾನದ ಆದಿಯಲ್ಲಿ ನಡೆದಿರುವಂತವಾದರೂ ನಮಗೆ ಎಲ್ಲೂ ಹಾಗೆನಿಸದೆ ವಾಸ್ತವದ ಚಿತ್ರಣವನ್ನೇ ಕಣ್ಣ ಮುಂದೆ ತರುವಂತವುಗಳಾಗಿ ತೋರುತ್ತವೆ. ಈ ಕಾದಂಬರಿಗಳ ಕ್ರಿಯೆಯ ಬಹುಭಾಗ ಕರಾವಳಿಯ ಪ್ರದೇಶದ ಹಳ್ಳಿಗಳನ್ನು ಕೇಂದ್ರವಾಗಿಟ್ಟುಕೊಂಡು ಇಡೀ ಒಂದು ಜೀವನ ಕ್ರಮದ ವಿಘಟನೆಗೆ ಕಾರಣಗಳಾದ ಸಾಮಾಜಿಕ ಹಾಗೂ ಧಾರ್ಮಿಕ ಅಂಧ ಮೌಲ್ಯಗಳನ್ನು ತೋರಿಸುವುದು ಈ ಕಾದಂಬರಿಗಳ ಉದ್ದೇಶವಾಗಿದೆ. ಈ ಕೃತಿಗಳ ಮುಖ್ಯ ಪಾತ್ರಗಳೆಲ್ಲವೂ ಒಂದು ಸಾಮಾಜಿಕ ಕ್ರಿಯೆಗೆ ಮೂರ್ತರೂಪ ಕೊಡುವಲ್ಲಿ ತಮ್ಮ ಸಾರ್ಥಕತೆಯನ್ನು ಕಂಡುಕೊಳ್ಳುತ್ತವೆ.

'ಗಾಂಧಿಬಂದ' ಈ ಕಾದಂಬರಿಗೆ ನಾಯಕನಿಲ್ಲ. ನಾಯಕಿಯೂ ಇಲ್ಲ. ಪ್ರಮುಖವಾಗಿ ಕಂಡುಬರುವ ಕಾದಂಬರಿಯ ಸುಧಾರಕರಾದ ಮಾರಪ್ಪ ಶೆಟ್ಟಿ, ತಿಂಗಳಾಯ, ಅದ್ರಾಮ, ದ್ರೌಪದಿ ಪಾತ್ರಗಳು ಜೀವನ ವಿನ್ಯಾಸದ ದೃಷ್ಟಿಯಿಂದ, ವೈಚಾರಿಕತೆಯಿಂದ ಪ್ರಮುಖವಾಗಿರುವಂತವು. ಗಾಂಧಿಯುಗದಲ್ಲಿ ಆತನ ಪ್ರಭಾವಕ್ಕೆ ಒಳಗಾದ ವ್ಯಕ್ತಿಗಳು ಸಂಪ್ರದಾಯದ ದುಷ್ಟ ಪದ್ಧತಿಗಳನ್ನು ವಿರೋಧಿಸುವ ಜೊತೆಗೆ, ಜಮೀನ್ದಾರ ಕ್ರೌರ್ಯ ಮತ್ತು ದಬ್ಬಾಳಿಕೆಗೆ ವ್ಯವಸ್ಥಿತ ಪ್ರತಿಕ್ರಿಯೆ ತೋರುವ ಸಾಮ್ರಾಜ್ಯಶಾಹಿಯ ಪತನದ ಜೊತೆಗೆ ತಮ್ಮನ್ನು ಮುತ್ತಿಕೊಂಡಿರುವ ಗುಲಾಮ ಸ್ಥಿತಿಯಿಂದ ಹೊರಬರುವ ಸ್ಥೈರ್ಯವನ್ನು ತೋರುತ್ತಾರೆ.

'ಗಾಂಧಿಬಂದ' ಕಾದಂಬರಿಯಲ್ಲಿ ನಾಗವೇಣಿಯವರು ಇಡಿಯ ಒಂದು ಜೀವನ ಕ್ರಮವನ್ನು ಅದರ ಭೌತಿಕ ಹಾಗೂ ಅಭೌತಿಕ ಅಂಶಗಳೊಡನೆ ಪುನರ್ನಿಮಿಸಿದ ಕಲೆ ಅದ್ಭುತವಾಗಿದೆ. ಈ ಕಾದಂಬರಿಯ ಕೇಂದ್ರಸ್ಥಾನಗಳು ಭೂಮಾಲಿಕ ಸುರಗಿಮಠದ ಸೀನಪ್ಪಯ್ಯ ಹೆಬ್ಬಾರರ ಬ್ರಾಹ್ಮಣ ಮನೆತನ ಹಾಗು ಅಳಿಯ ಕಟ್ಟು ಸಂತಾನದ ಗುತ್ತಿನ ಶೆಟ್ಟರ ಮನೆತನಗಳು ಈ ಕಾದಂಬರಿಯ ಕಥೆ ಈ ಎರಡೂ ಕೇಂದ್ರಗಳಿಂದ ನಿಯಂತ್ರಿತವಾದದ್ದು. ನಾಗವೇಣಿಯವರು ಸೃಷ್ಟಿಸಿರುವ ಕಥೆಯ ಆವರಣ ಈ ಎರಡೂ ಕೇಂದ್ರಕ್ಕೆ ಸೀಮಿತವಾಗಿಲ್ಲ. ಇಲ್ಲೊಂದು ಸಮೃದ್ಧವಾದ ಪಾತ್ರಗಳ ಜಗತ್ತೇ ಸೃಷ್ಟಿಯಾಗಿದೆ;

ಒಕ್ಕಲಾಳುಗಳಿದ್ದಾರೆ; ಗೇಣಿಯ ಆಳುಗಳಿದ್ದಾರೆ; ಕಡಲಿನಲ್ಲಿ ಮೀನು ಹಿಡಿಯುವ ಕೊರಗರಿದ್ದಾರೆ; ಅಸ್ಪೃಶ್ಯರಿದ್ದಾರೆ; ಸಂಪ್ರದಾಯಸ್ತರಿದ್ದಾರೆ. ಹೀಗೆ ವಿಶಾಲವಾದ ಪ್ರಪಂಚ ಹಬ್ಬಿಕೊಂಡಿದೆ. ಇಲ್ಲಿ ಬರುವ ಸಂವತ್ಸರದ ಉತ್ಸವಗಳು ಎಲ್ಲಾ ವರ್ಗದವರಲ್ಲಿ ಸಾಮರಸ್ಯವನ್ನು ಬಿಂಬಿಸುವಂತವುಗಳಾಗಿ ಇಲ್ಲಿಯ ಬದುಕಿಗೆ ಆಕಾರ ಕೊಡುತ್ತವೆ.

ಇಲ್ಲಿ ತಣ್ಣೀರುಬಾವಿ, ಪೆಣಂಬೂರು, ಜಾರಿಗೆ ಬೆಟ್ಟು, ಬೈಕಂಡಿ ಮೊದಲಾದ ಗ್ರಾಮಗಳೊಡನೆ ಸುರಗಿಮಠ ಹಾಗೂ ಗುತ್ತಿನವರು ಹೊಂದಿದ ಸಂಬಂಧ. ಸಾಮಾಜಿಕ ಸಮಸ್ಯೆಗಳು ಗಾಂಧಿಯುಗದಲ್ಲಿ ಪಡೆದುಕೊಂಡ ತಿರುವುಗಳು ಇತ್ಯಾದಿ ವಿಷಯಗಳು ಈ ಕಾದಂಬರಿಯನ್ನು ಹೊರಗಿನ ಜಗತ್ತಿನೊಡನೆ ಜೋಡಿಸುತ್ತವೆ.

ಸೀನಪ್ಪಯ್ಯಹೆಬ್ಬಾರ, ಭೂತೈತಾಳ ಮೊದಲಾದವರು ಸಂಪ್ರದಾಯದ ಹಳೆಯ ಮೌಲ್ಯಗಳಿಗಂಟಿ ಕೊಂಡು, ಸಂಪ್ರದಾಯ ನಿಷ್ಠೆಯಿಂದ ಮಾನವೀಯತೆಯನ್ನು ಕಳೆದುಕೊಂಡ ಇವರು, ಬ್ರಾಹ್ಮಣ ಸಮುದಾಯವನ್ನು ಪ್ರತಿನಿಧಿಸುವಂತವರು. ದೇಶದ ಸ್ವಾತಂತ್ರ್ಯ ಇವರ ಸಂಪ್ರದಾಯ ಜೀವನಕ್ಕೆ ತಾವು ನಂಬಿಕೊಂಡ ಮೌಲ್ಯಗಳಿಗೆ, ಜಮೀನುದಾರಿಕೆಯ ದರ್ಪಕ್ಕೆ ದಕ್ಕೆಯಾಗಬಹುದೆಂದು ನಂಬಿದ್ದ ಇವರು ಸಮಾಜದ ಎಲ್ಲಾ ಪರಿವರ್ತನಗಳಿಗೆ ವಿರೋಧವುಳ್ಳವರು.

ಗಾಂಧೀಯ ವಿಚಾರಗಳಿಗೆ ಬದ್ದರಾದ ಆತನ ತತ್ವಗಳನ್ನು ಪ್ರಚಾರ ಮಾಡುವ ಕರ್ನಾಡ ಸದಾಶಿವರಾಯ, ಮಾರಪ್ಪ, ತಿಂಗಳಾಯರಂತ ವ್ಯಕ್ತಿಗಳಿಂದ ಗಾಂಧೀಯ ಪ್ರಭಾವಕ್ಕೆ ಒಳಗಾದ ಅದ್ರಾಮ ವಿಧವೆಯಾದ ದ್ರೌಪದಿಯನ್ನು ಮರುಮದುವೆಯಾಗುತ್ತಾನೆ. ಸಂಪ್ರದಾಯದ ಪದ್ಧತಿಗಳನ್ನು ವಿರೋಧಿಸಿದ ಇವರ ಅಂತರ್ಜಾತೀಯ ವಿವಾಹದಿಂದ ಸಮಾಜದ ಕುಟುಂಬಗಳಲ್ಲಿನ ಬದಲಾವಣೆಗೆ ಪ್ರೇರಣೆಯಾಗಿದೆ. ವಾಸ್ತವದಲ್ಲಿನ ಸಮಸ್ಯೆಗಳ ಬದಲಾವಣೆಗೆ ಬೆಳಕು ಚೆಲ್ಲುತ್ತದೆ. ಜೀವನೋತ್ಸಾಹವನ್ನು ಕಳೆದುಕೊಂಡು ತಾನು ಬದುಕುವುದೇ ವ್ಯರ್ಥವೆಂದು ಚಿಂತಿತಳಾದ ದಾರುವಿಗೆ ಮಾನವೀಯ ನೆಲೆಯಲ್ಲಿ ಆಕೆಗೊಂದು ಬಾಳು ಕೊಟ್ಟ ಮಾರಪ್ಪ ಆದರ್ಶ ವ್ಯಕ್ತಿಯಾಗಿ ಚಿತ್ರಿತನಾಗಿದ್ದಾನೆ.

ಗಾಂಧೀಯ ಶಿಷ್ಯರಾದ ಕರ್ನಾಡ ಸದಾಶಿವರಾಯರು ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ಸ್ಥಗಿತಗೊಂಡಿದ್ದರಿಂದ ಆತಂಕಗೊಂಡ ಇವರಿಗೆ ಮಾರಪ್ಪ-ಅದ್ರಾಮರು ಗಾಂಧೀಯ ಕನಸನ್ನು ನನಸು ಮಾಡಿದ್ದಕ್ಕಾಗಿ ಸಂತೋಷಗೊಂಡು ದಂಪತಿಗಳಿಗೆ ಔತಣಕೊಟ್ಟು, ದಾರು ದ್ರೌಪದಿಯರಿಗೆ ಖಾದಿಬಟ್ಟೆ, ಖಾದಿನೂಲುವ ತಕಲಿಗಳನ್ನು ಕೊಟ್ಟು ಗೌರವಿಸಿದರು. ಈ ಸಮಯದಲ್ಲಿಯೇ ಎಲ್ಲೇಡೆ ಉಪ್ಪಿನ

ಸತ್ಯಾಗ್ರಹ ಆರಂಭವಾಗುತ್ತದೆ. ಗಾಂಧಿಯು ಉಪ್ಪನ್ನೇ ಅಸ್ತ್ರವನ್ನಾಗಿ ಬಳಸಿ ಬ್ರಿಟಿಷರ ವಿರುದ್ಧ ಹೂಡಿದ್ದ ಚಳುವಳಿ ದೇಶದೆಲ್ಲೆಡೆ ಗಂಭೀರ ಸ್ವರೂಪದ್ದಾಗಿ ನಡೆಯಲಾರಂಭಿಸಿತು. ಇದರ ಜೊತೆಗೆ ಹುಟ್ಟಿಕೊಂಡ ಪಾನ ನಿಷೇಧ ಚಳುವಳಿಯು ಕರಾವಳಿಯ ಪ್ರದೇಶಕ್ಕೂ, ಹಳ್ಳಿಗಳಿಗೂ ಹರಡಿ ಈ ಚಳುವಳಿಗಳಲ್ಲಿ ಭಾಗವಹಿಸಿದ ಮಾರಪ್ಪ, ತಿಂಗಳಾಯ ಜೈಲು ಸೇರುತ್ತಾರೆ. ಅದ್ರಾಮ ಪೊಲೀಸರ ಲಾಟಿ ಏಟಿಗೆ ತಲೆ ಹೊಡೆಸಿಕೊಂಡು ಸಾವಪ್ಪುತ್ತಾನೆ. ಮತ್ತೆ ದ್ರೌಪದಿ ವಿಧವೆಯಾಗುತ್ತಾಳೆ.

ಮೊದಲನೇ ಸಲ ವಿಧವೆಯಾದಾಗ ದ್ರೌಪದಿ ಸಂಪ್ರದಾಯದ ಕೇಶಮುಂಡನ ಮೊದಲಾದ ಪದ್ಧತಿಗಳನ್ನು ವಿರೋಧಿಸುತ್ತಾಳೆ. ಎರಡನೇ ಸಲ ವಿಧವೆಯಾದಾಗ ಅವೇ ಪದ್ಧತಿಗಳನ್ನು ಸ್ವತಃ ತಾನೇ ಏಕೆ ಅನುಸರಿಸುತ್ತಾಳೆ ಎನ್ನುವುದು ಮುಖ್ಯವಾದ ಪ್ರಶ್ನೆ? ಕಾದಂಬರಿಕಾರರು ವಿಶೇಷವಾಗಿ ಸ್ತ್ರೀ ಪ್ರಗತಿಗೆ ಅವಳ ಬದಲಾವಣೆ ತರುವುದಕ್ಕೆ ಒತ್ತು ಕೊಟ್ಟಿರುವುದರಿಂದ ವಿಧವೆಯಾದರೂ ಹೆಣ್ಣಿಗೆ ಮುತ್ತೈದೆ ಭಾಗ್ಯದ ಹಕ್ಕುಗಳು ಇರಬೇಕೆಂದು ಲೇಖಕಿಯ ಉದ್ದೇಶವಿದ್ದಂತಿದೆ. ಈ ಪಾತ್ರವನ್ನು ತಮ್ಮ ನಂಬಿಕೆಗನುಗುಣವಾಗಿ ದುಡಿಸಿಕೊಂಡಿದ್ದಾರೆ. ಅವುಗಳನ್ನು ಗಾಂಧಿಯು ಮೂಲಕ ಕೊಡಿಸುವಲ್ಲಿ ಸಮುದಾಯ ಸಮಾಜದಲ್ಲಿ ಇವು ಬೇರೂರಬೇಕು ಬೆಳೆಯಬೇಕು ಎನ್ನುವುದೇ ಇವರ ಆಶಯವಾಗಿದೆ.

ದೇಶದೆಲ್ಲೆಡೆ ಹರಡಿದ ಪಾನನಿಷೇಧ ಚಳುವಳಿ ಹೆಬ್ಬಾರರ ಸುರಗಿಮಠಕ್ಕೂ ಹಬ್ಬದಿರಲಿಲ್ಲ. ಗಾಂಧಿವಾದಿಗಳಿಂದ ಪ್ರಭಾವಿತರಾದ ಹೆಬ್ಬಾರರ ಒಕ್ಕಲಾಳುಗಳಾದ ಅಂತಪ್ಪೂಜಾರಿ, ಕೂಸಮ್ಮೆಲಿ, ಅಂಗರಮೂಲ್ಯ ಬೆಸ್ತರ ಪೂವಗುರಿಕಾರನೊಳಗೊಂಡಂತೆ ಸೇಂದಿ, ಶರಾಬು ಕುಡಿಯುವುದಿಲ್ಲವೆಂದು ತಮ್ಮ ದೈವದ ಮೇಲೆ ಆಣೆಯಿಟ್ಟು ಪರಿವರ್ತಿತರಾಗಿ ಪಾನ ನಿಷೇದ ಚಳುವಳಿಯಲ್ಲಿ ಭಾಗವಹಿಸಿದರು. ಗಾಂಧಿಯು ಪ್ರಬಾವಕ್ಕೆ ಒಳಗಾದ ಐತುವನ್ನೊಳಗೊಂಡತೆ ದಲಿತರೆಲ್ಲರೂ ಪ್ರಾಣಿ ಹಿಂಸೆಯನ್ನು ಮಾಂಸ ಭಕ್ಷವನ್ನು ತ್ಯಜಿಸಿದರು. ಇದು ವಾಸ್ತವದಲ್ಲಿ ಭೀಕರವಾಗಿ ನಡೆಯುವ ಪ್ರಾಣಿಬಲಿ ನಿಲ್ಲಲು ಸೂಚನೆಯಾಗಿದೆ. ಇವರು ಜಮೀನ್ದಾರರ ದಬ್ಬಾಳಿಕೆ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡುವಲ್ಲಿ ವರ್ಗವೈಷಮ್ಯಗಳ ಸುಧಾರಣೆಯಾಗಿ ಜೀತಪದ್ದತಿಯಿಂದ ಮುಕ್ತವಾಗಿ ನೈತಿಕ ಸ್ಥೈರ್ಯವನ್ನು ಸಮಸ್ಯೆಗಳನ್ನೆದುರಿಸುವ ಶಕ್ತಿಯನ್ನು ಪಡೆದುಕೊಳ್ಳುವಲ್ಲಿ ಸಹಾಯಕವಾಗಿದೆ. ಈ ಕಾದಂಬರಿಯ ಅನನ್ಯ ಸಾಧನೆಗಳಲ್ಲಿ ಒಂದಾದ ಹೋರಾಟ, ಇಲ್ಲಿನ ಮಾನವೀಯ ಸಂಬಂಧಗಳನ್ನು ಕುರಿತು ಹೇಳವುದಾದರೆ. ಸ್ವಾತಂತ್ರ್ಯ ಚಳುವಳಿಗೆ ನಿಧಿ ಸಂಗ್ರಹಿಸಿ ಕೊಡುವಲ್ಲಿ, ಸಮಸ್ಯೆಗಳ ಹೋರಾಟಕ್ಕೆ ಒಂದುಗೂಡುವಲ್ಲಿ ವ್ಯಕ್ತಿಗಳು ತಮ್ಮ ತಮ್ಮ ಸ್ವಭಾವಗಳಲ್ಲಿ ಮಗ್ನರಾದರೂ ತಮ್ಮೆಲ್ಲ

ವೈಯಕ್ತಿಕ ಆಸೆ ಆಮಿಷಗಳನ್ನು ತೊರೆದು ಒಂದು ಗುರಿಯ ಕಡೆಗೆ ರೂಪುಗೊಳ್ಳುವುದರಿಂದ ಈ ಕೃತಿಯ ಸಾಮಾಜಿಕ ವಾಸ್ತವ ನಿಲವು ಅತ್ಯಂತ ಪರಿಣಾಮಕಾರಿಯಾಗುತ್ತದೆ. ಈ ಹೊತ್ತಿನ ನಮ್ಮ ಸಂದರ್ಭಕ್ಕೆ ವಿಶಿಷ್ಟ ಅರ್ಥ ಮತ್ತು ಚೈತನ್ಯ ನೀಡುವ ಕೃತಿಯಾಗಿದೆ.

ಹೆಜ್ಜೆ

ಇತಿಹಾಸದ ಚಲನೆ, ಸಾಮಾಜಿಕ ಬದಲಾವಣೆ, ವೈಯಕ್ತಿಕ ಸಾಧನೆಯ ದೃಷ್ಟಿಯಿಂದ 'ಹೆಜ್ಜೆ' ಕಾದಂಬರಿ ವರ್ತಮಾನದ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುತ್ತದೆ. ವರ್ಗವೈಷಮ್ಯ ಮತ್ತು ವರ್ಣವೈಷಮ್ಯಗಳನ್ನು ಒಟ್ಟಾಗಿ ಬೆಸೆದು ಇಂದಿನ ವಿಭಜಿತ ಸಮಾಜದ ಸದ್ಯದ ಸ್ಥಿತಿಯನ್ನು ಮತ್ತು ನಾಳೆಯ ಸಾಧ್ಯತೆಯನ್ನು ಪರಿಣಾಮಕಾರಿಯಾಗಿ ದಾಖಲಿಸುತ್ತದೆ.

ದಕ್ಷಿಣ ಕನ್ನಡದ ಗ್ರಾಮಗಳ ಜೀವನದಲ್ಲಿ ನಡೆದ ಸ್ಥಿತ್ಯಂತರಗಳನ್ನು, ಈ ಸ್ಥಿತ್ಯಂತರಗಳಿಗೆ ಕಾರಣವಾದ ಸಾಮಾಜಿಕ ಪ್ರಕ್ರಿಯೆ ಹಾಗೂ ಮೌಲ್ಯ ಕ್ರಮಗಳನ್ನು ಬ್ರಾಹ್ಮಣ ಕುಟುಂಬಗಳನ್ನು ಕೇಂದ್ರವಾಗಿಟ್ಟುಕೊಂಡು ಸೃಷ್ಟಿಸಿರುವುದು ವಿಶಿಷ್ಟವೆನಿಸಿದೆ. ಈ ಕಾದಂಬರಿಯ ಕ್ರಿಯೆಯ ಬಹುಭಾಗ ಕರಾವಳಿ ಪ್ರದೇಶದ ಹಳ್ಳಿಗಳಿಗೆ ಸೀಮಿತವಾಗಿದ್ದರೂ, ಊರಿನೊಳಗೆಯೇ ನಡೆಯುವ ಚಟುವಟಿಕೆಗಳು ಚಲನೆಯ ಲಯಗಳನ್ನು ಹುಟ್ಟಿಸುತ್ತಾ, ವಿಸ್ತಾರಗೊಳ್ಳುತ್ತಾ ಮಂಗಳೂರು, ಉಡುಪಿ, ಮುಂಬೈಯಂತ ದೊಡ್ಡ ದೊಡ್ಡ ನಗರಗಳನ್ನು ಒಳಗೊಳ್ಳುತ್ತದೆ.

ಸಂಪ್ರದಾಯ ಮನೆತನದ ಗಾಂಧೀ ಪ್ರಭಾವವಿದ್ದ ಸಾವಿತ್ರಿ ಕುಟುಂಬ ಮತ್ತು ಸಂಪ್ರದಾಯ ನಿಷ್ಠೆಯ ವಿದ್ಯಾಧರನ ಕುಟುಂಬದೊಡನೆ ಬೆಳೆಯಿಸಿಕೊಂಡು ಬರುವ ಸಂಬಂಧಗಳಿಗೆ ಹಿನ್ನೆಲೆಯಾಗಿ ಸ್ವಾತಂತ್ರ್ಯ ಚಳುವಳಿಯ ಚಟುವಟಿಕೆಗಳು ಚಿತ್ರಿತವಾಗಿವೆ. ಈ ಆಯಾಮಗಳು ಒಂದಕ್ಕೊಂದು ಹೊಂದಿಕೊಂಡಿರುವ ರೀತಿಯಲ್ಲಿ ಅನ್ಯೋನ್ಯತೆ ಕಂಡುಬಂದಿದೆ.

ಈ ಕಾದಂಬರಿಯ ಲಕ್ಷವೆಲ್ಲ ಸಾವಿತ್ರಿಯ ಬೆಳವಣಿಗೆಯ ಕಡೆಗೆಯೇ ಇದೆ. ತಾಯಿ ತಂದೆಯರ ವಾತ್ಸಲ್ಯ, ವಿದ್ಯಾಧರನ ಪ್ರೀತಿ, ಈ ಬೆಳವಣಿಗೆಗೆ ಪೋಷಕ ಶಕ್ತಿಗಳಾಗಿವೆ. ಸ್ವತಂತ್ರ್ಯವಾಗಿ ಕೈಗೊಳ್ಳುವ ನಿರ್ಣಯಗಳು ಸಾಮಾಜಿಕ ಬದಲಾವಣೆಯ ಚಲನೆಯನ್ನು ನೀಡುತ್ತವೆ.

ಈ ಕೃತಿಯಲ್ಲಿ ನಡೆಯುವ ಮುಖ್ಯಕ್ರಿಯೆಯ ಸ್ಥೂಲ ಸ್ವರೂಪ ಸಂಪ್ರದಾಯದಲ್ಲಿನ ಕುಟುಂಬಗಳ ಬದಲಾವಣೆಯ ಜೊತೆಗೆ ಸಾಂಸ್ಕೃತಿಕವಾಗಿ ಹಿಂದುಳಿದ ಜನಾಂಗವನ್ನು ಮೇಲೆತ್ತುವುದು ಆಗಿದೆ.

ಕೊಡದೂರಿನ ಶ್ರೀಕಂಠಶಾಸ್ತ್ರೀ, ನಾರಾಯಣಶಾಸ್ತ್ರೀ, ವೆಂಕಟೇಶ್‌ಕಮ್ತಿ ಇವರ ಕುಟುಂಬಗಳು ಸಮಾಜದ ಸಂಪ್ರದಾಯ ನಿಷ್ಠೆಯ ಬ್ರಾಹ್ಮಣ ಮನೆತನಗಳನ್ನು ಪ್ರತಿನಿಧಿಸುವಂತವು. ಕೆಡದೂರಿನ ಆನಂದಸೋಮಯಾಜಿ ಸಂಪ್ರದಾಯಸ್ಥರಾದರೂ ಗಾಂಧಿಯ ವಿಚಾರಗಳಿಗೆ ಒಳಗಾದ ಇವರು ಬದಲಾಗುತ್ತಿರುವ ಸಮಾಜದ ಸಂಪ್ರದಾಯಸ್ಥ ಕುಟುಂಬಗಳನ್ನು ಪ್ರತಿನಿಧಿಸುವಂತವರು. ಸಂಪ್ರದಾಯಸ್ತ ಮನೆತನಗಳಾದರೂ ಸೋಮಯಾಜಿಗಳ ಕುಟುಂಬವೇಕೆ ಗಾಂಧಿಯ ಪ್ರಭಾವಕ್ಕೆ ಒಳಗಾಯಿತು ಎನ್ನುವ ಪ್ರಶ್ನೆಗೆ ಈ ರೀತಿಯಾಗಿ ಹೇಳಬಹುದು. ಗಾಂಧಿಯನ್ನು ದ್ವೇಷಿಸುತ್ತಿದ್ದ ಸಂಪ್ರದಾಯ ಮನೆತನ ಮತ್ತು ಗಾಂಧಿಯ ಪ್ರಭಾವವಿದ್ದ ಸಂಪ್ರದಾಯ ಮನೆತನಗಳಲ್ಲಿ ಸಂಬಂಧ ಬೆಸೆಯುವಲ್ಲಿ ಈ ಎರಡೂ ಕುಟುಂಬಗಳನ್ನು ಮುಖ್ಯವಾಗಿಟ್ಟುಕೊಂಡು ಸಮಾಜದಲ್ಲಿ ಬದಲಾವಣೆಯನ್ನು ತರಲು ಉದ್ದೇಶಪೂರ್ವಕವಾಗಿಯೇ ಕಾದಂಬರಿಕಾರರು ಈ ಮಾರ್ಪಡನ್ನು ಮಾಡಿಕೊಂಡಿದ್ದಾರೆ ಎಂದು ತೋರುತ್ತದೆ. ತನ್ನ ಚಿಕ್ಕಪ್ಪನಿಂದ ಗಾಂಧಿಯ ಪ್ರಭಾವಕ್ಕೆ ಒಳಗಾದ ಕಾದಂಬರಿಯ ನಾಯಕಿ ದೇಶ ಸೇವೆಯ ಉದ್ದೇಶದಿಂದ ಮದುವೆಯನ್ನು ನಿರಾಕರಿಸುತ್ತಾಳೆ. ತಂದೆ ಗೊತ್ತು ಮಾಡಿದ ಗಂಡನ್ನು ತಾಯಿಯ ಪ್ರೀತಿಯ ಅಗ್ರಹಗಳನ್ನು ಮೀರಲಾಗದೆ ಕೊನೆಗೆ ವಿದ್ಯಾನನ್ನು ಮದುವೆಯಾಗುತ್ತಾಳೆ. ಸುದೈವದಿಂದ ತನ್ನೆಲ್ಲಾ ಗಾಂಧಿಯ ಚಟುವಟಿಕೆಗಳು ಅವನಿಂದಲೇ ಪ್ರಚಾರಕ್ಕೆ ಬರತೊಡಗುತ್ತವೆ. ಗುಪ್ತವಾಗಿ ಕವಲೊಡೆಯುತ್ತವೆ. ಸಾವಿತ್ರಿ ಕಟ್ಟುನಿಟ್ಟಿನ ವೈದಿಕ ಮನೆ ಸೇರಿದ ಮೇಲೆ ಕೊಡದೂರಿನ ಜೀವನದ ಸನ್ನಿವೇಶಗಳೆಲ್ಲ ಬೇರೆ ಬೇರೆ ಬೇರು ಪಡೆದು ಬೆಳೆಯುವ ಮರಗಳಂತೆ ಘಟನೆಗಳು ಜರುಗಲಾರಂಭಿಸುತ್ತವೆ. ಸಾವಿತ್ರಿಯ ಮೂಲಕ ಗಾಂಧಿವಾದಿಯಾದ ವಿದ್ಯಾಧರ ಕೊರಗರ ಕೆಂಚನಿಗೆ ಶಿಕ್ಷಣ ಕೊಡುವ ಮೂಲಕ ಆ ಸಮುದಾಯದ ಎಲ್ಲರನ್ನು ಸುಶಿಕ್ಷಿತರನ್ನಾಗಿ ಮಾಡಲು ಸಮಾಜದಲ್ಲಿ ಸಾಂಸ್ಕೃತಿಕವಾಗಿ ಸ್ವತಂತ್ರ ಜೀವನ ನಡೆಸಲು ನೆರವಾದ ಈತ ಆದರ್ಶೀಕರಿಸಲ್ಪಟ್ಟಿದ್ದಾನೆ. ದೇವಸ್ಥಾನದಲ್ಲಿ ಕೊರಗರಿಗೆಲ್ಲ ಪ್ರವೇಶ ದೊರೆಯುವಂತೆ ಹಾಗೂ ಉಂಡೆಲೆಯ ಎಂಜಲನ್ನು ತಿನ್ನದಂತೆ ಬಿಡಿಸುವುದರಿಂದ ಸಮಾಜದಲ್ಲಿ ಅವರಿಗೊಂದು ಸಾಂಸ್ಕೃತಿಕ ಬದಲಾವಣೆ ತರುವಲ್ಲಿ ಇದು ವಾಸ್ತವದ ಪರಿಸ್ಥಿತಿಯ ಮೇಲೆ ಬೆಳಕು ಚೆಲುತ್ತದೆ.

ವಿದ್ಯಾ ಸಂಪ್ರದಾಯದ ಪದ್ಧತಿಯನ್ನು ಮೀರಿ ಗಾಂಧೀ ಟೋಪಿಧರಿಸುವುದು ತನ್ನ ಜುಟ್ಟನ್ನು ಕತ್ತರಿಸಿಕೊಳ್ಳುವುದು ಇವೆಲ್ಲ ಬದಲಾಗುವ ಸಂಕೇತಗಳಾಗಿ ಕಂಡರೆ, ಗಂಗಾಧರ ಸಂಪ್ರದಾಯ ನಿಷ್ಠೆ ಇದ್ದರೂ ಬದಲಾಗುತ್ತಿರುವ ಸಮಾಜದಲ್ಲಿ ಆಧುನಿಕ ಬದುಕಿನ ತುಡಿತದಿಂದ ಮನೆಬಿಟ್ಟು ಉಡುಪಿಯಲ್ಲಿ ಹೋಟೆಲ್ ಇಡುವುದು. ಸಂಪ್ರದಾಯದ ದುಷ್ಟ ಪದ್ಧತಿಗಳಿಂದ ಹೊರಬಂದ

ಶಾಂಭವಿ ಸುಶಿಕ್ಷಿತಳಾಗಿ ಬೇರೆ ಜಾತಿಯ ರಘುವನ್ನು ಮರುಮದುವೆಯಾಗುವುದು ಇವೆಲ್ಲ ವೈಚಾರಿಕತೆಗಳು ವರ್ತಮಾನದ ಸಮಸ್ಯೆಗಳ ಮೇಲೆ ಪರಿಣಾಮ ಬೀರುವಂತವು.

ದೇಶದ ರಾಜಕೀಯ ಹೋರಾಟ, ಪ್ರಪಂಚದ ಮಹಾಯುದ್ಧವು ತಂದ ತಿರುವುಗಳು. ಇಂಗ್ಲೀಷ್ ದಿನ ಪತ್ರಿಕೆಗಳ ಓದಿನಿಂದ ಬಂದ ತಿಳಿವು ಜ್ಞಾನ, ಸಮಾಜದ ಸಮುದಾಯದ ಈ ಎಲ್ಲಾ ಬದಲಾವಣೆಗೆ ಈ ಕಾದಂಬರಿಯ ನಾಯಕ-ನಾಯಕಿಯೇ ಕಾರಣರಾಗಿದ್ದಾರೆ. ಇವರಿಗೆ ಬೆಂಬಲವಾಗಿ ಬರುವ ಸುಧಾಕರರಾವ್‌ಮಾಸ್ತರ್, ಸಂಕಪ್ಪಯ್ಯಮಾಸ್ತರ್ ಮೊದಲಾದವರೆಲ್ಲ ಪೋಷಕ ಶಕ್ತಿಗಳಾಗಿದ್ದಾರೆ.

ಸಂಪ್ರದಾಯಸ್ತರಾದ ವೆಂಕಟೇಶಕಮ್ತಿಯ ಹಿರಿಯ ಮಗ ಮಾಧವಕಮ್ತಿ ಕಾಂಗ್ರೆಸ್ ಸೇರಿ ಸ್ವಾತಂತ್ರ್ಯ ಚಳುವಳಿಗೆ ಸಂಘಟನೆ ಕಟ್ಟಿ ಅದರ ನಾಯಕನಾಗಿದ್ದವನು. ಸ್ವಾತಂತ್ರ ಹೋರಾಟಕ್ಕೆ ಪ್ರೇರಕನಾಗಿ ಸಾಮಾಜಿಕ ಬದಲಾವಣೆಗೆ ಶ್ರಮಿಸಿದವನು. ಎರಡನೆಯವ ಹರಿ. ಹೋಟೆಲ್ ವ್ಯಾಪಾರ ಮಾಡಲು ಬೇರೆ ಊರಿಗೆ ಹೋಗುತ್ತಾನೆ. ಹೀಗೆ ಸಂಪ್ರದಾಯಸ್ತ ಮನೆತನಗಳೂ ಗಾಂಧಿಯುಗದಲ್ಲಿ ಸಾಮಾಜಿಕವಾಗಿ ಬದಲಾವಣೆಯಾಗಿರುವುದನ್ನು ವೆಂಕಟೇಶಕಮ್ತಿಯವರ ಕುಟುಂಬದ ಹಿನ್ನೆಲೆಯಲ್ಲಿ ಗುರುತಿಸಬಹುದು.

ತಮ್ಮ ಮನೆತನದ ಎಲ್ಲ ಘಟನೆಗಳಿಂದ ವಿಚಲಿತರಾದ ಶ್ರೀಕಂಠಶಾಸ್ತ್ರೀಗಳು ಈ ಎಲ್ಲ ಬದಲಾವಣೆಗೆ ಗಾಂಧಿಕಾರಣವೇ, ಆಧುನಿಕತೆಯ ಗಾಳಿಯೇ ಅಥವಾ ವರ್ಣಸಾಂಕರ್ಯವೇ ಎಂದು ಆಶ್ಚರ್ಯಗೊಳ್ಳುತ್ತಿದ್ದರು. ಇವೆಲ್ಲ ಕಾಲದ ಮಹಿಮೆಯೋ ಎಂಬಂತೆ ಆಲೋಚಿಸುತ್ತಿರುವಾಗ ತನ್ನ ನಂಬಿಕೆಗಳೆಲ್ಲ ತುಸು-ತುಸುವೇ ಶಿಥಿಲವಾಗುತ್ತಿವೆಯೇನೋ ಎಂದು ಆ ಸನ್ನಿವೇಶಗಳಿಗೆ ಪ್ರತಿಕ್ರಿಯಿಸದೇ ಸುಮ್ಮನಾಗುತ್ತಿದ್ದರು. ಇವರನ್ನೊಳಗೊಂಡಂತೆ ಇವರಿಗರಿತೋ ಅರಿಯದೆಯೋ ಸಮುದಾಯದ ಬದಲಾವಣೆಗಳು ಆಗುತ್ತಲೇ ಇದ್ದವು. ಇವುಗಳ ಕಾರಣ ತಿಳಿಯಲು ಹೋದಾಗ ಸಾವಿತ್ರಿಯೇ ಕಣ್ಣಮುಂದೆ ನಿಲ್ಲುತ್ತಿದ್ದಳು. ಸಂಪ್ರದಾಯದವರಾದರೂ ತನ್ನ ಸೌಮ್ಯತೆಯ ವೈಚಾರಿಕ ಅಗ್ರಹವನ್ನು ಮರೆಸುವ ಶಾಸ್ತ್ರೀಗಳ ಸಂಯಮದ ಶಿಸ್ತು, ಲೋಕೋದ್ಧಾರವೆಲ್ಲ ಗಾಂಧಿಯಿಂದ ಸಾಧ್ಯ ಎನ್ನುವ ಸಾವಿತ್ರಿ ವಿದ್ಯೆಯ ಬೆಳಕಿನಲ್ಲಿ ತನ್ನ ಬಡತನ ಹೋದಿತೇ, ಅಸ್ಪೃಶ್ಯತೆ ಕಳಂಕ ಅಳಿಸಿತೇ, ಎಂಬ ಹಂಬಲವಿದ್ದರೂ ಅದನ್ನು ತಿಳಿಯದ ಕೆಂಚ ಏನು ತಿಳಿಯದ ಮುಗ್ಧೆ ಪಾರ್ವತಿ, ಜಗತ್ತಿನ ಬಗೆಗೆ ಯಾವ ಕನಸನ್ನು ಕಟ್ಟಿಕೊಳ್ಳದೆ ಅಲ್ಪಜ್ಞಾನದ ಅಹಂಕಾರದಿಂದ ತಾನು ಹಿಡಿದದ್ದೇ ಸರಿದಾರಿ ಎಂದು ತಿಳಿದು ತನ್ನನ್ನೇ ನಾಶ ಮಾಡಿಕೊಳ್ಳುವ ಶಂಕರ, ಗಾಂಧಿಯಿಂದ ದೇಶದ ಸಾಮಾಜಿಕ ಪರಿವರ್ತನೆ ಸಾಧ್ಯವೆಂದು ತಿಳಿದು ತನ್ನ ಅಕ್ಕನ ಸಂಬಂಧದ ನೆನಪಿಗೆ ಮಹತ್ವಕೊಟ್ಟು ಶಂಕರನ ನೆರವಿಗೆ ಬರುತ್ತಿದ್ದ

ವೇಣು. ಇವೆಲ್ಲ ಹೊಂದಿಸುವ ರೀತಿ ಯಾವುದೆಂದು, ಸಮಾಜದ ಒಂದುಗೂಡುವಿಕೆಗೆ, ಬದಲಾಗುವಿಕೆಗೆ ಆಲೋಚಿಸುತ್ತಿದ್ದ ವಿದ್ಯಾ, ಶೋಷಣೆಯಿಂದಲೂ ಹಿಂಸೆ, ಶೋಷಣೆಯನ್ನು ವಿರೋಧಿಸಲು ಹಿಂಸೆ, ವಿಶ್ವದ ಈ ಸ್ಥಿತಿಯನ್ನು ಬದಲಾಯಿಸಲು ಗಾಂಧೀಯ ಸತ್ಯ ಅಹಿಂಸೆಗಳು ಹಾಸ್ಯಾಸ್ಪದವಲ್ಲವೇ? ಎಂದು ತನ್ನ ಓದಿನ ತಿಳಿವಳಿಕೆಯಿಂದ ವಿಚಾರಗಳಿಂದ ದೇಶ ದಾಸ್ಯದಿಂದ ಬಿಡುಗಡೆಯಾಗಬೇಕಾದರೆ ಅನಿಷ್ಟ ಬದಲಾವಣೆಗಳು ತೊಲಗಬೇಕಾದರೆ ಕ್ರಾಂತಿಯಿಂದಲೇ ಆಗಬೇಕು ಎಂದು ಕಮ್ಯುನಿಸ್ಟ್ ತತ್ವಗಳಲ್ಲಿ ನಂಬಿಕೆ ಇಟ್ಟ ವಿದ್ಯಾಧರ "ನಾವೆಲ್ಲ, ನಾವಾಗಲಿ ನಮ್ಮ ಕುಟುಂಬದವರಾಗಲಿ ಭದ್ರವಾಗೋದು ಹೇಗೆಂತ ಯೋಚನೆ ಮಾಡ್ತಾ ಇದ್ದೇವೆ. ಆದರೆ ಇಡಿಯ ಸಮಾಜಕ್ಕೆ ಅಂದರೆ ಎಲ್ಲರಿಗೂ ನೆಮ್ಮದಿ ತರುವ ವ್ಯವಸ್ಥೆ. ಏನಾವರೂ ಉದ್ಧಾರ ಆಗಬೇಕು ಅಂತಾ ಹೇಳ್ತಾ ಇದ್ದಾರೆಯೇ"(ಪು.೩೧೪)ಎಂದು ಕೊಂಡು ತನ್ನೆಲ್ಲಾ ಆದರ್ಶದ ಕನಸುಗಳನ್ನು ಸಾಕಾರಗೊಳಿಸಲು ವಕೀಲ ಮಂಗೇಶರಾಯರ ಸಹಾಯದಿಂದ ವಿದ್ಯಾ-ಸಾವಿತ್ರಿಯೊಡನೆ ಮುಂಬೈ ಸೇರುತ್ತಾನೆ. ದೇಶದ ಕೇಂದ್ರ ರಾಜಕಾರಣದಂತಿದ್ದ ಮುಂಬೈ ಮಹಾನಗರದ ಅಲ್ಲಿನ ಆಡಳಿತದ ರೀತಿನೀತಿಗಳು ಜನರ ಜೀವನ ಕ್ರಮಗಳು ತಿಳಿದು ಜೀವನೋಪಾಯಕ್ಕಾಗಿ ವಿದ್ಯಾ ಮತ್ತೆ ಮಾಸ್ತರ್ ಕೆಲಸ ಹಿಡಿದಾಗ ತನ್ನ ಆದರ್ಶದ ತತ್ವಗಳಿಗೆ ದಕ್ಕೆ [illegible] ಮುಂಬೈಯ ವಕೀಲ ಮಹಿನ್‌ವಾಲ್ ಮತ್ತು ರಫಿಯಂತವರ ಸಹವಾಸದಿಂದ ಕಳೆದು ಹೋದ ಚೈತನ್ಯವನ್ನು ಪುನಃ ದೊರಕಿಸಿಕೊಂಡು ೧೯೪೨ರ ಚಳುವಳಿಯಲ್ಲಿ ಧುಮುಕುತ್ತಾನೆ. ಅರಿವಾಗದೊಪಾದಿಯಲ್ಲಿ ಸಾವಪ್ಪುತ್ತಾನೆ. ಸ್ವಾತಂತ್ರ್ಯ ಹೋರಾಟಕ್ಕಾಗಿ, ಸಮುದಾಯದ, ಸಮಾಜದ, ಸಾಂಸ್ಕೃತಿಕ ಬದಲಾವಣೆ ತರುವಲ್ಲಿ ತನ್ನ ವೈಯಕ್ತಿಕ ಬದುಕನ್ನು ಪಣವಾಗಿಟ್ಟ ವಿದ್ಯಾಧರ ಆದರ್ಶದ ಪ್ರತೀಕವಾದವನು.

ದೇಶದೆಲ್ಲೆಡೆ ನಡೆಯುತ್ತಲಿದ್ದ ಹತ್ತಿಕ್ಕಲಾರದ ಸ್ವಾತಂತ್ರ್ಯ ಹೋರಾಟದ ಕೊನೆಯ ಘಟ್ಟದ ಚಳುವಳಿಯ ಕನಸು ನನಸುಗೊಳಿಸಲು, ಎರಡನೆಯ ಮಹಾಯುದ್ದದ ಭೀಕರತೆಯಿಂದ ಹೊರಬಂದ ಬ್ರಿಟಿಷ್‌ರು ದೇಶಕ್ಕೆ ಸ್ವಾತಂತ್ರ್ಯವನ್ನು ಘೋಷಿಸುತ್ತಾರೆ. ಇದರ ಬೆನ್ನಲ್ಲೇ ದೇಶದಲ್ಲೆಲ್ಲ ಹರಡಿದ ಜಾತಿಯ ಮರಣ ಹೋಮ ದೇಶ ವಿಭಜನೆಯಾಗಲು ಕಾರಣವಾಗುತ್ತದೆ.

ಕಮ್ಯುನಿಸ್ಟ್ ತತ್ವಗಳು ಜೀವನದ ಬದಲಾವಣೆಗೆ ಪೂರಕವಾದರೂ ಅವುಗಳನ್ನು ಸಾಕಾರಗೊಳಿಸಲು ವಿದ್ಯಾ ಇಲ್ಲದಂತಾಗುವುದು ಅಭಾಸವಾಗಿ ಕಾಣುತ್ತದೆ. ಮನುಷ್ಯನ ವ್ಯಕ್ತಿತ್ವದ ವಿಕಾಸಕ್ಕೆ ಅಡ್ಡಿಯಾಗುತ್ತವೆ. ಏಕೆಂದರೆ ಇವು ಪ್ರಧಾನವಾಗಿ ದ್ವೇಷದ ಭಾವವನ್ನು ಬಿತ್ತುತ್ತವೆಯಾದ್ದರಿಂದ ನಿರೀಕ್ಷೆಯ ಪ್ರಗತಿ ಸಾಧ್ಯವಿಲ್ಲ. ಆದರೆ ಗಾಂಧೀಯ ತತ್ವಗಳು ಸಮಾಜದ ನಿರಂತರ ಸ್ವಾಸ್ಥ್ಯಕ್ಕೆ, ನೆಮ್ಮದಿಯ ಜೀವನಕ್ಕೆ

[illegible]

ಪೂರಕವಾದಂತವು ಎಂದು ತಿಳಿದ ಕಾದಂಬರಿಕಾರರು ಗಾಂಧಿಯ ವಿಚಾರಗಳನ್ನು ಸಮಾಜದಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವುದನ್ನು ಸಾವಿತ್ರಿಯ ಈ ಮಾತಿನಲ್ಲಿ ತಮ್ಮ ಆಶಯವನ್ನು ವ್ಯಕ್ತಪಡಿಸಿದಂತೆ ತೋರುತ್ತದೆ. ‘‘ಗಾಂಧಿ ಇನ್ನಿಲ್ಲಾ ಮಾವಯ್ಯ ಗಾಂಧಿ ಇನ್ನಿಲ್ಲಾ ಟೊಪಿ ಮಾತ್ರ ಇದೆ’’(ಪು.೪೮). ಇದು ಕಾದಂಬರಿಯ ಅಂತಿಮ ಘೋಷಣೆಯಾಗಿದೆ. ಗಾಂಧೀತತ್ವಗಳು ಸಮಾಜಕ್ಕೆ ಮುಖ್ಯ. ಆದರೆ ಅವುಗಳನ್ನು ಕಾರ್ಯರೂಪಕ್ಕೆ ತರಲು ಯಾರೂ ಪ್ರಯತ್ನಿಸುತ್ತಿಲ್ಲ. ರಾಜಕೀಯ ಮಾತ್ರ ಗಾಂಧೀ ಹೆಸರಿನಲ್ಲಿ ನಡೆಯುತ್ತಿರುವುದು ವ್ಯಂಗವಾಗಿ ಕಾಣುತ್ತದೆ. ಈ ಎರಡೂ ಕಾದಂಬರಿಗಳ ಲೇಖಕರು ತಾವು ನಂಬಿದ ಗಟ್ಟಿಯಾದ ಮೌಲ್ಯಗಳನ್ನು ಸಾವಿತ್ರಿ ಮತ್ತು ದ್ರೌಪದಿ ಪಾತ್ರಗಳ ಮುಖಾಂತರ ಚರಿತ್ರೆಯ ವಸ್ತುವೊಡನೆ ವರ್ತಮಾನದ ಸಮಸ್ಯೆಗಳ ಮೇಲೆ ಬೆಳಕು ಹರಿಸಿದ್ದಾರೆ ಎನಿಸುತ್ತದೆ.

ಸಮಾರೋಪ

ನಾಗವೇಣಿಯವರ 'ಗಾಂಧಿ ಬಂದ' ಸಾಮಾಜಿಕ ಕಾದಂಬರಿ. ಈ ಕಾದಂಬರಿಯ ಮುಖ್ಯ ಭೂಮಿಕೆಯಾಗಿರುವುದು 'ವಿಧವಾ ವಿವಾಹ'. ಸಂಪ್ರದಾಯಸ್ಥ ಕುಟುಂಬದ ದ್ರೌಪದಿ ಮೊದಲೆ ವಿಧವೆಯಾದವಳು. ಕಾದಂಬರಿಕಾರರು ದ್ರೌಪದಿ ಅಂತರ್ ಜಾತಿಯ ಮರುಮದುವೆಯಾಗುವುದು ಸಾಮಾಜಿಕ ವಾಸ್ತವವಾಗಿ ಚಿತ್ರಿಸಿದ್ದಾರೆ. ಮತ್ತೆ ದ್ರೌಪದಿಯನ್ನು ವಿಧವೆಯಾಗಿಸುವುದರ ಹಿಂದೆ ಕಾದಂಬರಿಕಾರರ ಉದ್ದೇಶವೇನು? ಸ್ತ್ರೀ ಪ್ರಗತಿಗೆ ಒತ್ತು ಕೊಡುವ ಇವರ ಆಶಯ ಕಾದಂಬರಿಯಲ್ಲಿ ಈಡೇರಿತೆ. ಸಾಮಾಜಿಕ ವಾಸ್ತವ ಆದರೂ ಕೂಡ ಇದೊಂದು ವಿಚಿತ್ರ ಸಂಗತಿ.

ಈ ಕಾದಂಬರಿಯ ಮತ್ತೊಂದು ಕಡೆ 'ಆನ್ ಮೆಚುರ್ಡ್' ಆದ ಒಂದು ಹೆಣ್ಣಿನ ಚಿತ್ರಣವನ್ನು ಚಿತ್ರಿಸಿದ್ದಾರೆ. ಹೆಣ್ಣಿಗೆ ಸಹಜವಾಗಿ ಇರುವಂತ ಕನಸು ಜೀವನಾಕಾಂಕ್ಷೆ, ಸಾಮಾಜಿಕವಾಗಿ ಅವಳು ಅನುಭವಿಸುವ ಅಪಮಾನ, ನಿಂಧನೆ. ಇವೆಲ್ಲದರಿಂದ ಬಿಡುಗಡೆಗೊಳಿಸಲು ಮಾರಪ್ಪ ಮದುವೆಯಾಗುತ್ತಾನೆ. ದಾರು ಸಾಮಾಜಿಕವಾಗಿ ಈ ಅಪವಾದದಿಂದ ಪಾರಾದರೂ ಮಾನಸಿಕವಾಗಿ ಇವಳು ಪಾರಾಗಲಿಲ್ಲ. ಸ್ತ್ರೀ ಪ್ರಗತಿಯನ್ನು ಬಯಸಿದ ಕಾದಂಬರಿಕಾರರು. ದಾರುವಿಗೆ ಮಾನಸಿಕವಾಗಿ ನೆಮ್ಮದಿಯ ಬದುಕು ಹಾಗೂ ದ್ರೌಪದಿಯನ್ನು ವಿಧವೆಯಾಗದೆ ಚಿತ್ರಿಸಬಹುದಾಗಿತ್ತು. ಈ ತೆರನಾಗಿ ಚಿತ್ರಿಸುವುದರಿಂದ ಸಾಂಸ್ಕೃತಿಕವಾಗಿ ಮಹಿಳೆಯ ಅಭ್ಯುದಯವನ್ನು ಬಯಸಿದ ಕಾದಂಬರಿಕಾರರ ಉದ್ದೇಶ ಈಡೇರಬಹುದಿತ್ತೇನೊ.

ಈ ಕಾದಂಬರಿಯಲ್ಲಿ ಸಂಪ್ರದಾಯಸ್ಥ ಕುಟುಂಬಗಳಲ್ಲಿ ಬದಲಾವಣೆಯಾಗಿ ಗಾಂಧೀ ಯುಗದಲ್ಲಿ ಆತನ ಚಿಂತನೆ ಮತ್ತು ವ್ಯಕ್ತಿತ್ವಕ್ಕೆ ಒಳಗಾದ ಎಲ್ಲ ವರ್ಗದ, ಜಾತಿ, ಜನಾಂಗ. ಅಸ್ಪೃಶ್ಯತಾ ನಿವಾರಣೆ, ಪಾನ ನಿಷೇಧ, ವಿಧವಾ ವಿವಾಹ, ಅಸಮಾನತೆಯ ವಿರುದ್ಧ ಹೋರಾಡಿ. ಸಾಮಾಜಿಕ ವ್ಯವಸ್ಥೆಯಲ್ಲಿ ತಮಗೊಂದು ಸ್ಥಾನ ಕಲ್ಪಿಸಿಕೊಂಡ ಇವರು ವೈಯಕ್ತಿಕ, ಕೌಟುಂಬಿಕ ಬದಲಾವಣೆಯನ್ನು ತಂದುಕೊಂಡರು.

ತುಳುನಾಡಿನ ಸಂಸ್ಕೃತಿಯನ್ನು ಜೀವಂತವಾಗಿ ಸೆರೆ ಹಿಡಿದ ನಾಗೇಣಿಯವರ 'ಗಾಂಧಿಬಂದ' ಕಾದಂಬರಿ ಸಾಮಾಜಿಕವಾದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ.

ವ್ಯಾಸರಾಯ ಬಲ್ಲಾಳರ 'ಹಜ್ಜೆ' ರಾಜಕೀಯ ಕಾಂದಬರಿ. ಇವರ ಮೂಲ ಉದ್ದೇಶ ರಾಜಕೀಯ ಇತಿಹಾಸವನ್ನು ಚಿತ್ರಿಸುವಂತದ್ದು. ಇದಕ್ಕೆ ಪೂರಕವಾಗಿ ಸಂಪ್ರದಾಯಸ್ತ ಕುಟುಂಬವನ್ನು ಕೇಂದ್ರವಾಗಿಟ್ಟುಕೊಂಡು ಸಾಮಾಜಿಕ ಸಮಸ್ಯೆಗಳ ಮೇಲೆ ಗಮನ ಹರಿಸಿದ್ದಾರೆ.

ಕಾದಂಬರಿಯ ಮುಖ್ಯ ಪಾತ್ರಗಳಾದ ಸಾವಿತ್ರಿ ಮತ್ತು ವಿದ್ಯಾಧರ ಗಾಂಧೀಜಿಯ ಚಿಂತನೆ ಮತ್ತು

ವ್ಯಕ್ತಿತ್ವದಿಂದ ಸಂಪ್ರದಾಯದಲ್ಲಿ ಬದಲಾವಣೆಗಳನ್ನು ತರುತ್ತಾರೆ. ಕಾದಂಬರಿ ಮೂಲಭೂತವಾದದಿಂದ ಹೊರಗುಳಿಯುವ ಮುಖಾಂತರ ಬದಲಾವಣೆಗಳನ್ನು ಬಯಸುತ್ತದೆ. ವಾಸ್ತವದಲ್ಲಿ ಮೂಲಭೂತವಾದಿಗಳಿಂದ ಕೊಲೆ, ಸುಲಿಗೆ, ಸಾಮಾಜಿಕ ಅಧಃಪತನಗಳಾಗುತ್ತಲಿವೆ. ಆಡಳಿತ ನಿಷ್ಕ್ರಿಯಗೊಂಡು ಜನರ ನೆಮ್ಮದಿಗೆ ಭಂಗ ಬಂದಿದೆ. ಮೂಲಭೂತವಾದದ ಬದಲಾಗುವಿಕೆಯೇ ಶಾಂತಿಯ ಬದುಕಿಗೆ ಕಾರಣ ಎಂಬಂತೆ ವಾಸ್ತವದಲ್ಲಿ ಪರಿಸ್ಥಿತಿ ಬಿಗಡಾಯಿಸಿರುವುದರಿಂದ ಕಾದಂಬರಿ ಇದನ್ನೆ ನಿರೂಪಿಸುವಂತಿದೆ.

ಸಂಪ್ರದಾಯಸ್ಥ ಕುಟುಂಬಗಳ ಬದಲಾವಣೆಯೇ ಕಾದಂಬರಿಯಲ್ಲಿ ಮುಖ್ಯವಾಗಿದೆ. ವಿಧವಾ ವಿವಾಹ, ಅಸ್ಪೃಶ್ಯತೆ, ಶಿಕ್ಷಣ ಮೊದಲಾದ ಸಾಮಾಜಿಕ ಸಮಸ್ಯೆಗಳನ್ನು ಕಾದಂಬರಿಯಲ್ಲಿ ಚರ್ಚಿಸಲಾಗಿದೆ.

೩೦ರ ದಶಕದಲ್ಲಿ ಗಾಂಧೀ ಯುಗದಲ್ಲಿ ಆತನ ಪ್ರಭಾವ ಮತ್ತು ಚಿಂತನೆಗಳಿಂದ ಸಂಪ್ರದಾಯಸ್ಥ ಕುಟುಂಬಗಳ ಮೇಲಾದ ಪ್ರಭಾವ. ಈತನ ಚಿಂತನೆಗಳು ಹೇಗೆ ಪರಿಶೀಲನೆಗೆ ಒಳಗಾಗುತ್ತವೆ. ಸಂಪ್ರದಾಯವನ್ನು ಮೀರುವಂತೆ ಮಾಡುತ್ತವೆ ಎನ್ನುವುದಕ್ಕೆ ಸಾವಿತ್ರಿ, ವಿದ್ಯಾಧರ ಬದಲಾಗುವುದು. ಗಂಗಾಧರ ಸಂಪ್ರದಾಯವನ್ನು ಬಯಸುತ್ತಿದ್ದರೂ ಆಧುನಿಕತೆಯ ಪ್ರಭಾವ ಇವನನ್ನು ಸಂಪ್ರದಾಯವನ್ನು ಮೀರುವಂತೆ ಮಾಡುತ್ತದೆ.

ಸಂಪ್ರದಾಯಸ್ಥ ಕುಟುಂಬದ ಶಾಂಭವಿ ರಘುವಿನ ಜತೆ ಮರುಮದುವೆ. ಸಾಮಾಜಿಕವಾಗಿ ವೈರಿಕತೆಯನ್ನು ಬೆಳೆಸುವ ಮುಖ್ಯ ಘಟನೆಯಾಗಿದೆ. ಕೆಳವರ್ಗದ ಕೆಂಚನಿಗೆ ಸಿಗುವ ಶಿಕ್ಷಣ ಇದರಿಂದ ಆ ವರ್ಗದ ಜೀವನ ಕ್ರಮ ಬದಲಾಗುವಿಕೆ. ಅಸ್ಪೃಶ್ಯ ನಿವಾರಣೆ ಮುಂತಾದ ಘಟನೆಗಳು ವಾಸ್ತವಿಕ ಸಮಸ್ಯೆಗಳ ಮೇಲೆ ಪ್ರಭಾವ ಬೀರಿವೆ.

'ಗಾಂಧಿಬಂದ', 'ಹೆಜ್ಜೆ' ಕಾದಂಬರಿಗಳು ಕೇವಲ ರಾಜಕೀಯ ವಸ್ತುವನ್ನೊಳಗೊಂಡಿಲ್ಲ. ಈ ಎರಡು ಕಾದಂಬರಿಗಳು ಕೌಟುಂಬಿಕವಾಗಿ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಆದ ಪರಿವರ್ತನೆಗಳನ್ನು ಹೇಳುತ್ತವೆ.

'ಗಾಂಧಿ ಬಂದ' ಕಾದಂಬರಿಯಲ್ಲಿ ಸಂಪ್ರದಾಯಸ್ಥ ಕುಟುಂಬದ ದ್ರೌಪದಿಯ ಅಂತರ್ ಜಾತಿಯ ಮರುಮದುವೆ. 'ಹೆಜ್ಜೆ' ಕಾದಂಬರಿಯ ಶಾಂಭವಿಯ ಅಂತರ್ ಜಾತಿಯ ಮರುಮದುವೆ ಘಟನೆಗಳು ಒಂದೇಯಾಗಿವೆ. ಆದರೆ ಕಾದಂಬರಿಕಾರರ ಉದ್ದೇಶ ಬೇರೆಬೇರೆಯಾಗಿದೆ. ದ್ರೌಪದಿ ಮತ್ತೆ ವಿಧವೆಯಾಗುವಂತದ್ದು ಕಾದಂಬರಿಕಾರರ ಉದ್ದೇಶ ಈಡೇರದೆ ಇರುವ ಕೊರತೆ ಕಾಣಿಸುತ್ತದೆ. ಆದರೆ 'ಹೆಜ್ಜೆ' ಕಾದಂಬರಿಯ ಶಾಂಭವಿಯ ಮರುಮದುವೆ ಸುಧಾರಣಾವಾದಿಗೆ ಸಾಕ್ಷಿಯಾಗಿದೆ.

ಈ ಎರಡೂ ಕಾದಂಬರಿಗಳಲ್ಲಿ ಅಸ್ಪೃಶ್ಯತಾ ನಿವಾರಣೆ, ಸ್ತ್ರೀ ಸಮಾನತೆ, ಅಸಮಾನತೆಯನ್ನು ಹೋಗಲಾಡಿಸಿ ಕೊಳ್ಳುವಲ್ಲಿ ಎಲ್ಲಾ ಜಾತಿ, ವರ್ಗ ಪ್ರಭಾವಿ ವ್ಯಕ್ತಿಗಳಿಂದ ಪ್ರೇರಿತರಾಗಿ ಬದುಕಿನಲ್ಲಿ ಬದಲಾವಣೆಯನ್ನು ತಂದುಕೊಳ್ಳುವುದು ಸಾಮಾಜಿಕ ವಾಸ್ತವಕ್ಕೆ ಪ್ರೇರಣೆಯಾಗಿದೆ.

'ಹೆಜ್ಜೆ' ಕಾದಂಬರಿಯಲ್ಲಿ ಶಿಕ್ಷಣಕ್ಕೆ ಒತ್ತುಕೊಡಲಾಗಿದೆ. ಶಿಕ್ಷಣ ಮನುಷ್ಯರ ಜೀವನದಲ್ಲಿ ತರುವ ಬದಲಾವಣೆಗಳನ್ನು ಶಾಂಭವಿ, ಕೆಳವರ್ಗದ ಕೆಂಚನ ಮೂಲಕ ಕಾದಂಬರಿಕಾರರು ನಿರೂಪಿಸಿದ್ದಾರೆ.

ಬಲ್ಲಾಳರು ವಾಸ್ತವದ ವಿದ್ಯಮಾನಗಳಲ್ಲಿ ಗಾಂಧೀಜಿಯ ತತ್ವಗಳು ಅವಶ್ಯಕವಾಗಿರುವಂತವು. ಆತನ ತತ್ವಗಳ ಮುಖವಾಡದಲ್ಲಿ ರಾಜಕೀಯ ನಡೆಯುತ್ತಿದೆ. ಆದರೆ ಜನಪರವಾದ ಸುಧಾರಣೆಯ ವ್ಯವಸ್ಥೆ ನಿರ್ಮಿಸಲಾಗಿಲ್ಲ ಎಂಬುದು ಇವರ ಆಶಯವಾಗಿದೆ. ಪ್ರಸ್ತುತ ಗುಜರಾತ್‌ನ ಗೋದ್ರಾಂದತ ರೈಲು ದುರಂತ. ರಾಮಜನ್ಮಭೂಮಿ, ಬಾಬರಿಮಸಿದೆ ಎನ್ನುವ ಮತೀಯ ಹಿಂದೂ-ಮುಸ್ಲಿಂ ಕಿತ್ತಾಟದಂತ ಈ ಹೊತ್ತಿನಲ್ಲಿ ಗಾಂಧೀಜಿಯ ಶಾಂತಿ, ಅಹಿಂಸೆಯ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಇದು ಸಕಾಲವೆನಿಸುತ್ತದೆ.

ಒಟ್ಟಿನಲ್ಲಿ ಈ ಎರಡೂ ಕಾದಂಬರಿಗಳು ವಾಸ್ತವದಲ್ಲಿನ ಮೂಲಭೂತವಾದದಿಂದ ಉದ್ಭವಿಸುವ ಘಟನೆಗಳ ಮೇಲೆ ಸಾಮಾಜಿಕ ಸಮಸ್ಯೆಗಳ ಮೇಲೆ ಪರಿಣಾಮ ಬೀರುತ್ತವೆ.

ಗ್ರಂಥಋಣ ೧

೧. ಆಮೂರ ಜಿ.ಎಸ್.. **ಕನ್ನಡ ಕಥನ ಸಾಹಿತ್ಯ ಕಾದಂಬರಿ**, ೧೯೯೪, ಶ್ರೀಹರಿ ಪ್ರಕಾಶನ, ಧಾರವಾಡ

೨. ಆರ್ಕೆ ಮಣಿಪಾಲ, **ಸಾಹಿತ್ಯ ಪ್ರಕ್ರಿಯೆ**, ೧೯೯೫, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು

೩. ಈಚನಾಳ ಖಾಜವಲಿ, **ಲಿಂಗಭೇದ ಸಮಸ್ಯೆ ಮತ್ತು ನವ್ಯೋತ್ತರ ಕಾದಂಬರಿಗಳು**, ೧೯೯೭, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಕುವೆಂಪು, **ಕಾನೂರು ಹೆಗ್ಗಡಿತಿ**, ೧೯೭೦, ಉದಯರವಿ ಪ್ರಕಾಶನ, ಮೈಸೂರು

೫. ಗುಲವಾಡಿ ವೆಂಕಟರಾಯ, **ಇಂದಿರಾಬಾಯಿ**, ೧೯೦೮, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು

೬. ಗೋವಿಂದರಾಜ ಗಿರಡ್ಡಿ (ಸಂ.), **ನವೋದಯ**, ೧೯೯೨, ಲೇ: ಟಿ.ಪಿ. ಅಶೋಕ, ಪ್ರ: ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೭. ಗೋವಿಂದರಾಜ ಗಿರಡ್ಡಿ (ಸಂ.), **ಪ್ರಗತಿಶೀಲ**, ೧೯೯೨, ಲೇ: ಎಚ್.ಎಸ್. ರಾಘವೇಂದ್ರರಾವ್, ಪ್ರ: ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೮. ಗೋವಿಂದರಾಜ ಗಿರಡ್ಡಿ (ಸಂ.), **ನವ್ಯ**, ೧೯೯೨, ಲೇ: ನರಹಳ್ಳಿ ಬಾಲಸುಬ್ರಮಣ್ಯ, ಪ್ರ: ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೯. ಗೋವಿಂದರಾಜ ಗಿರಡ್ಡಿ (ಸಂ.), **ದಲಿತ ಬಂಡಾಯ**, ೧೯೯೨, ಲೇ: ಪುರುಷೋತ್ತಮ ಬಿಳಿಮಲೆ, ಪ್ರ: ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೦. ಚಂದ್ರಶೇಖರ್ ಎಸ್., **ಅಂಬೇಡ್ಕರ್ ಮತ್ತು ಗಾಂಧಿ**, ೧೯೯೨. ಅಕ್ಷರ ಪ್ರಕಾಶನ, ಹೆಗ್ಗೋಡು

೧೧. ದೇ.ಜ.ಗೌ., ಸಿ.ಪಿ.ಕೆ. (ಸಂ.), **ಕಟ್ಟಿಮನಿ: ಬದುಕು-ಬರಹ**, ೧೯೯೬, ಪ್ರ: ಗೀತಾ ಬುಕ್ ಹೌಸ್, ಮೈಸೂರು

೧೨. ನಾಗರಾಜ್ ಡಿ.ಆರ್., **ಅಮೃತ ಮತ್ತು ಗರುಡ**, ೧೯೮೩, ಪ್ರ: ಪುಸ್ತಕ ಚಂದನ, ವಿಜಯನಗರ. ಬೆಂಗಳೂರು

೧೩. ನಾಗವೇಣಿ ಎಚ್., **ಗಾಂಧಿಬಂದ**, ೧೯೯೯, ಲೋಹಿಯಾ ಪ್ರಕಾಶನ, ಬಳ್ಳಾರಿ

೧೪. ಪಡಿಕ್ಕಲ್ ಶಿವರಾಮ್, **ನಾಡುನುಡಿಯ ರೂಪಕ**, ೨೦೦೧, ಪ್ರ: ಮಂಗಳೂರು ವಿಶ್ವವಿದ್ಯಾಲಯ. ಮಂಗಳೂರು

೧೫. ಬಲ್ಲಾಳ ವ್ಯಾಸರಾಯ, ಹೆಜ್ಜೆ, ೨೦೦೦, ಪ್ರ: ಗೀತಾ ಬುಕ್ ಹೌಸ್, ಮೈಸೂರು

೧೬. ಬೇಳಂತ ಕೋಡಿ ಈಶ್ವರಭಟ್ಟ, (ಸಂ.). ನಿರಂಜನ ಅಬಿನಂದನ. ೧೯೮೯. ಪ್ರ: ಕರ್ನಾಟಕ ಸಂಘ, ಪುತ್ತೂರು

೧೭. ರಾವ್ ಬಹದ್ದೂರ್, ಗ್ರಾಮಾಯಣ, ೧೯೭೦, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು

೧೮. ವಾಸುದೇವಾಚಾರ್ ಕೆರೂರು, ಇಂದಿರಾ, ೧೯೦೮, ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು

೧೯. ವೆಂಕಟೇಶ್ ಮೂರ್ತಿ. ಎಚ್.ಟಿ., ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಕರ್ನಾಟಕ ದಲಿತ ಚಳುವಳಿ ಮತ್ತು ಸಾಹಿತ್ಯ, ೨೦೦೦, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ವೆಂಕಟೇಶ್ ರಾ. ಇಂದ್ವಾಡಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ೧೯೯೭, ಪ್ರ: ಕನ್ನಡ ವಿಶ್ವವಿದ್ಯಾಲಯ. ಹಂಪಿ

೨೧. ವಿವೇಕ್ ರೈ, (ಸಂ.), ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ೧೯೮೭, ಪ್ರ: ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

೨೨. ಶೇಷಗಿರಿರಾವ್ ಎಲ್.ಎಸ್., ಹೊಸಗನ್ನಡ ಸಾಹಿತ್ಯ, ೧೯೭೫, ಪ್ರ: ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು

೨೩. ಶೇಷಗಿರಿರಾವ್ ಎಲ್.ಎಸ್., ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ೧೯೯೩. ಪ್ರ: ಉದಯಬಾನು ಕಲಾ ಸಂಘ, ಬೆಂಗಳೂರು

೨೪. ಶೇಷಗಿರಿರಾವ್ ಎಲ್.ಎಸ್. (ಸಂ.), ಕನ್ನಡ ಸಾಹಿತ್ಯ ಸಮೀಕ್ಷೆ, ೧೯೯೦, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೫. ಶಿವರುದ್ರಪ್ಪ ಜಿ.ಎಸ್. (ಸಂ.), ಪ್ರಜ್ಞಾ ಪ್ರವಾಹ ತಂತ್ರ, ೧೯೮೯. ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು

೨೬. ಶಿವರುದ್ರಪ್ಪ ಜಿ.ಎಸ್. (ಸಂ.). ಕನ್ನಡ ಸಾಹಿತ್ಯ ಸಂದರ್ಭ, ೧೯೯೦. ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು

೨೭. ಶಿವರುದ್ರಪ್ಪ ಜಿ.ಎಸ್. (ಸಂ.), ಕನ್ನಡ ವಾರ್ಷಿಕ ಸಾಹಿತ್ಯ ಸಮೀಕ್ಷೆ, ೧೯೯೧. ಪ್ರ: ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೮. ಶಿವರುದ್ರಪ್ಪ ಜಿ.ಎಸ್. (ಸಂ.), **ಕನ್ನಡ ಸಾಹಿತ್ಯ ಸಮೀಕ್ಷೆ**, ೧೯೭೨-೯೩, ಪ್ರ: ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨೯. ಶ್ರೀನಿವಾಸ ಚಿ. (ಸಂ.), **ತೆರೆದ ಮನ**, ೧೯೯೪, ಪ್ರ: ಕ್ರೈಸ್ತ ಕಾಲೇಜ್, ಬೆಂಗಳೂರು

೩೦. ಸಾದರ ಬಸವರಾಜ, **ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು**, ೨೦೦೦, ಪ್ರ: ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ

೩೧. ಹಾ.ಮಾ. ನಾಯಕ (ಸಂ.), **ಕನ್ನಡ ವಿಷಯ ವಿಶ್ವಕೋಶ**, ೧೯೭೯, ಪ್ರ: ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಆಮೂರ ಜಿ.ಎಸ್., **ಲೇಖನ-ಕಾದಂಬರಿ ಜಾತಕ**, ೨೦೦೧, ಕನ್ನಡ ಪ್ರಭ, ದೀಪಾವಳಿ ವಿಶೇಷಾಂಕ.